ಸಂಪುಟ: 14 Volume | ಸಂಚಿಕೆ: 82 Issue | ಪುಟಗಳು 08 Pages | ಶುಕ್ರವಾರ 03 ಜುಲೈ 2026 | ₹4 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ನಿನ್ನನ್ನು ಪೀಡಿಸುವ ಸಂಕಟಗಳನ್ನು ನಗುನಗುತ್ತಾ ನಾಶಪಡಿಸು.
–ಸ್ವಾಮಿ ವಿವೇಕಾನಂದ



ತೆಲಂಗಾಣ ರಾಜ್ಯದ ಕೈಗಾರಿಕಾ ಮತ್ತು ಐಟಿ ಸಚಿವ ಡಿ.ಶ್ರೀಧರ ಬಾಬು ಅವರು ರಾಜ್ಯದ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ ಬಿ ಪಾಟೀಲ ಅವರನ್ನು ಅವರ ಬೆಂಗಳೂರಿನ ನಿವಾಸದಲ್ಲಿ ಗುರುವಾರ ಭೇಟಿಯಾಗಿ, ವಿಚಾರ ವಿನಿಮಯ ನಡೆಸಿದರು. ಇದೊಂದು ಸೌಜನ್ಯದ ಭೇಟಿ.

## ವನ ಮಹೋತ್ಸವ: ಪರಿಸರ ಸಂರಕ್ಷಣೆಗೆ ಸಹಾಯ

• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜ ಬಾಲಕರ ಪ್ರೌಢಶಾಲೆ ವಿಭಾಗದಲ್ಲಿ ರಾಷ್ಟ್ರೀಯ ಹಸಿರು ಪಡೆ ಯೋಜನೆಯಡಿಯಲ್ಲಿ ಪರಿಸರ ಸಂರಕ್ಷಣೆ ಜನಜಾಗೃತಿ ಕಾರ್ಯಕ್ರಮ ಹಾಗೂ ವನಮೋತ್ಸವ ಕಾರ್ಯಕ್ರಮ ಪರಿಸರವಾದಿ ಶೈಲೇಂದ್ರ ಕಾವಾಡಿ ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿ ಮಾತನಾಡಿ, ವನಮೋತ್ಸವ ಕಾರ್ಯಕ್ರಮ ಪರಿಸರ ಸಂರಕ್ಷಣೆಗೆ ತುಂಬಾ ಸಹಾಯವಾಗಲಿದೆ ಎಂದರು. 1950 ರಿಂದ ಅಂದಿನ ಕೃಷಿ ಸಚಿವರಾದ ದಿವಂಗತ ಕೆ.ಎಂ. ಮುನಿಷಿಯವರು ಈ ಕಾರ್ಯಕ್ರಮ ಆರಂಭಿಸಿದ್ದಾರೆಂದು ಸ್ಮರಿಸಿದರು. 2024 ರಿಂದ ತಾಯಿ ಹೆಸರಿನ ಮೇಲೆ ಸಸಿ ನೆಡುವ ಕಾರ್ಯಕ್ರಮ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಅಭಿಸಿದ್ದಾರೆ ಎಂದರು. ಸಾರ್ವಜನಿಕರಲ್ಲಿ ವಿದ್ಯಾರ್ಥಿಗಳಲ್ಲಿ ವನಮೋತ್ಸವ ಮರ ಗಿಡಗಳ ಬಗ್ಗೆ ಜಾಗೃತಿ ಒಡ ಮೂಡಿಸುವುದು ಪರಿಸರ ಸಂರಕ್ಷಣೆಯ



ಬಗ್ಗೆ ಅರಿವು ಒಡ ಮೂಡಿಸಲು ಈ ಉತ್ಸವ ತುಂಬಾ ಸಹಾಯವಾಗಿದೆ ಎಂದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲಾ ಮುಖ್ಯ ಗುರುಗಳಾದ ಸಂತ ದೇವೇಂದ್ರ ರವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಪರಿಸರ ಸಂರಕ್ಷಣೆಗೆ ಪ್ರತಿಯೊಬ್ಬರು ಕಡ್ಡಾಯವಾಗಿ ಮರಗಿಡ ಬೆಳೆಸಿ ಪರಿಸರ ಸಂರಕ್ಷಣೆಗೆ ಸಹಾಯ ಮಾಡಬೇಕು ಎಂದು ತಿಳಿಸಿದರು. ವಿದ್ಯಾರ್ಥಿಗಳು ಕೂಡ ಮರ ಗಿಡ ಬೆಳೆಸುವ ಹವ್ಯಾಸ ಬೆಳೆಸಿಕೊಳ್ಳಬೇಕೆಂದು ತಿಳಿಸಿದರು. ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ಶೇಕ್ ಮಹಿಬೂಬ್ ಪಟೇಲ್. ಶಾಲಾ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

## ಅಭಿವೃದ್ಧಿ ಮರೆತ ಪಂಚಾಯತ್: ಪಿಡಿಒಗೆ ಮುತ್ತಿಗೆ!

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ಜಿಲ್ಲೆಯ ಸವನಹಳ್ಳಿ ಹೊನಗನಹಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಯಾವುದೇ ಅಭಿವೃದ್ಧಿ ಕೆಲಸಗಳು ನಡೆಯದ ಹಿನ್ನೆಲೆಯಲ್ಲಿ ಆಕ್ರೋಶಗೊಂಡ ಸಾರ್ವಜನಿಕರು ಪಂಚಾಯತ್‌ಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು.

ಗ್ರಾಮದಲ್ಲಿ 20–25 ದಿನಗಳಿಗೊಮ್ಮೆ ಕಲುಷಿತ ನೀರು ಪೂರೈಕೆಯಾಗುತ್ತಿದ್ದು, ಕುಡಿಯುವ ನೀರಿಗಾಗಿ ತೀವ್ರ ಹಾಹಾಕಾರ ಉಂಟಾಗಿದೆ. ಹದಗೆಟ್ಟ ರಸ್ತೆಗಳು, ಬೀದಿ ದೀಪಗಳ ಕೊರತೆ, ಶಾಲಾ ಕಾಂಪೌಂಡ್ ಹಾಗೂ ಶೌಚಾಲಯ ವ್ಯವಸ್ಥೆಯಿಲ್ಲದೆ ಗ್ರಾಮಸ್ಥರು ನರಕಯಾತನೆ ಅನುಭವಿಸುತ್ತಿದ್ದಾರೆ. ಈ ಕುರಿತು ಪಿಡಿಒ ಜಯಶ್ರೀ ಪವಾರ್ ಅವರಿಗೆ ಹಲವು ಬಾರಿ ಮನವಿ ಮಾಡಿದರೂ, ಅವರು ಉಡಾಫೆ ಉತ್ತರ ನೀಡುತ್ತಾ ಕಾಲಹರಣ ಮಾಡುತ್ತಿದ್ದಾರೆ ಎಂದು



ಆರೋಪಿಸಿದ ಗ್ರಾಮಸ್ಥರು, ತಕ್ಷಣ ಅವರನ್ನು ವರ್ಗಾವಣೆ ಮಾಡುವಂತೆ ಪಟ್ಟು ಹಿಡಿದರು.

ಸ್ಥಳಕ್ಕೆ ಆಗಮಿಸಿದ ನೀರು ಸರಬರಾಜು ಅಧಿಕಾರಿ ಪಾಟೀಲ್ ಹಾಗೂ ಆಡಳಿತಾಧಿಕಾರಿ ರವಿ ಪವಾರ್ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದರು. ಸಮಸ್ಯೆ ಶೀಘ್ರ ಇತ್ಯರ್ಥವಾಗದಿದ್ದರೆ ಮುಂದಿನ ದಿನಗಳಲ್ಲಿ ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕುವುದಾಗಿ ಗ್ರಾಮಸ್ಥರು ಖಡಕ್ ಎಚ್ಚರಿಕೆ ನೀಡಿದ್ದಾರೆ.

## ಪಂಚಾಯತ್ ರಾಜ್ ಸಚಿವರ ಸಭೆ: ಈಶ್ವರ ಖಂಡ್ರೆ ಭಾಗಿ

**ಬೆಂಗಳೂರು:** ದೆಹಲಿಯಲ್ಲಿ ಜು.3ರಂದು ಎಲ್ಲ ರಾಜ್ಯಗಳ ಪಂಚಾಯತ್ ರಾಜ್ ಸಚಿವರುಗಳ ಸಭೆ ನಡೆಯುತ್ತಿದ್ದು ತಾವು ಇದರಲ್ಲಿ ಭಾಗಿಯಾಗುತ್ತಿರುವುದಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ತಿಳಿಸಿದ್ದಾರೆ. ಇದರಲ್ಲಿ 16ನೇ ಹಣಕಾಸು ಆಯೋಗದ ಶಿಫಾರಸುಗಳ ಅನುಷ್ಠಾನ, ಮಾರ್ಗಸೂಚಿಗಳ ಬಗ್ಗೆ ಚರ್ಚೆ ಆಗಲಿದೆ. ಕರ್ನಾಟಕಕ್ಕೆ 15ನೇ ಹಣಕಾಸು ಆಯೋಗದಲ್ಲಿ ಭಾರೀ ಅನ್ಯಾಯವಾಗಿದೆ. 2025–26ನೇ ಸಾಲಿಗೆ 15ನೇ ಹಣಕಾಸು ಆಯೋಗದ ಅನುದಾನ ರೂ. 2186 ಕೋಟಿ ರೂ. ಬಾಕಿ ಬರಬೇಕಾಗಿದೆ. ಇದನ್ನು ವಿನಾಕಾರಣ ಕೇಂದ್ರ ತಡೆಹಿಡಿದಿದೆ. ಈ ಬಗ್ಗೆಯೂ ಸಭೆಯಲ್ಲಿ ಚರ್ಚಿಸಲಾಗುವುದು ಎಂದು ಈಶ್ವರ ಖಂಡ್ರೆ ತಿಳಿಸಿದರು.



ವಿಧಾನ ಪರಿಷತ್ ನೂತನ ಸದಸ್ಯರಾಗಿ ಆಯ್ಕೆಯಾಗಿರುವ ಕಾಂಗ್ರೆಸ್ ಪಕ್ಷದ ಬಿ.ಕೆ. ಹರಿಪ್ರಸಾದ್, ಪಿ. ವಿ. ಮೋಹನ್, ಶಿವಣ್ಣ ಮಳವಳ್ಳಿ, ತಿಪ್ಪಣ್ಣಪ್ಪ ಕಮಖನೂರ್ ಹಾಗೂ ವಿನಯ್ ಕಾರ್ತಿಕ್, ಬಿಜೆಪಿಯ ಕೌಟಿಲ್ಯ ರಘು ಹಾಗೂ ಲಿಂಗರಾಜ ಪಾಟೀಲ್ ಅವರು ಗುರುವಾರ ವಿಧಾನಸೌಧದಲ್ಲಿ ಪ್ರಮಾಣವಚನ ಸ್ವೀಕರಿಸಿದರು.

## ಜವಳಿ ಪಾರ್ಕ್ ಅಭಿವೃದ್ಧಿಗೆ ಕ್ರಮವಹಿಸಲು ಸಂಪುಟ ನಿರ್ಣಯ

**ಕಲಬುರಗಿ:** ಮುಖ್ಯಮಂತ್ರಿಗಳ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಕಲಬುರಗಿ ಜಿಲ್ಲೆಯ ಮಹತ್ವಾಕಾಂಕ್ಷೆಯ ಜವಳಿ ಪಾರ್ಕ್ ನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಅಭಿವೃದ್ಧಿಪಡಿಸಲು ಕ್ರಮ ವಹಿಸುವಂತೆ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಹಲವು ಯೋಜನೆಗಲನ್ನು ಪ್ರಸ್ತಾಪಿಸಲಾಯಿತು.

# ಧುರೀಣರ ಕಿರಿಕ್ SIR

## ಮನೆ ಮನೆಗೆ ಬಿಎಲ್‌ಒ ಭೇಟಿ | ಬಿಜೆಪಿ–ಜೆಡಿಎಸ್‌ನಿಂದಲೇ ಇದೀಗ ವಿರೋಧ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ರಾಜ್ಯದಲ್ಲಿ ಎಸ್‌ಐಆರ್ ಪ್ರಕ್ರಿಯೆ ಮತ್ತೆ ಸದ್ದು ಮಾಡತೊಡಗಿದೆ. ಈ ಎಸ್‌ಐಆರ್ ಪ್ರಕ್ರಿಯೆಗೆ ಬಿಜೆಪಿ ಹಾಗೂ ಜೆಡಿಎಸ್‌ನಿಂದಲೇ ಇದೀಗ ವಿರೋಧ ವ್ಯಕ್ತವಾಗುತ್ತಿರುವುದು ಚರ್ಚೆಗೆ ಗ್ರಾಸವಾಗಿದೆ. ಎಸ್‌ಐಆರ್ ಸರಿಮಾಡುವ ಉದ್ದೇಶದಿಂದ ಇದೀಗ ಮನೆ ಮನೆಗೆ ಬಿಎಲ್‌ಒಗಳು ಆಗಮಿಸುತ್ತಿದ್ದಾರೆ. ಆದರೆ, ರಾಮನಗರದಲ್ಲಿ ಎಸ್‌ಐಆರ್ ನಿಯಮ ಉಲ್ಲಂಘನೆ ಆಗಿದೆ ಎಂದು ನಿಖಿಲ್ ಕುಮಾರಸ್ವಾಮಿ ಆರೋಪ ಮಾಡಿದರೆ, ಚಿಕ್ಕಮಗಳೂರಿನಲ್ಲಿ 6000 ಮತದಾರರ ಹಕ್ಕಿದೆ ಧಕ್ಕೆ ಉಂಟಾಗಿದೆ ಎಂದು ಸಿಟಿ ರವಿ ಆರೋಪಿಸಿದ್ದಾರೆ.

**ನಿಖಿಲ್ ಕೆಂಡಾಮಂಡಲ:** ರಾಮನಗರ ವಿಧಾನಸಭಾ ಕ್ಷೇತ್ರದಲ್ಲಿ ನಡೆಯುತ್ತಿರುವ ವಿಶೇಷ ತೀವ್ರ ಪರಿಷ್ಕರಣೆ (SIR) ಪ್ರಕ್ರಿಯೆಯಲ್ಲಿ ಭಾರೀ ಲೋಪ ನಡೆದಿದೆ ಎಂದು ಆರೋಪಿಸಿ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ಚುನಾವಣಾ ಆಯೋಗದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

**ಪ್ರಜಾ ಪ್ರಭುತ್ವದ ಅಣಕ:** ಈ ಕುರಿತು 'X' ಖಾತೆಯಲ್ಲಿ ಸರಣಿ ಟ್ವೀಟ್ ಮಾಡಿರುವ ಅವರು, SIR ಪ್ರಕ್ರಿಯೆಗೆ ಕಪ್ಪುಚುಕ್ಕೆ. ಬಿಎಲ್ ಅಧಿಕಾರಿಗಳು, ರಾಮನಗರ ಟೌನ್ ನಗರಸಭೆಯ ವಾರ್ಡ್ ನಂ–23, ಟಿಪ್ಪುನಗರದ ಕಲ್ಯಾಣ ಮಂಟಪದಲ್ಲಿ ಎಸ್‌ಐಆರ್ ಜಾತ್ರೆ' ಮಾಡುತ್ತಿದ್ದಾರೆ. ಇದು ನಿಯಮಗಳನ್ನು ಗಾಳಿಗೆ ತೂರಿ, ಪ್ರಜಾಪ್ರಭುತ್ವಕ್ಕೆ ಮಾಡಿದ ಅಣಕ ಎಂದು ಕಿಡಿಕಾರಿದ್ದಾರೆ.

### ಎಸ್‌ಐಆರ್ ಸ್ಥಗಿತಕ್ಕೆ ಆಗ್ರಹ

ರಾಮನಗರ ಕ್ಷೇತ್ರದ ಪ್ರಸ್ತುತ ಎಸ್‌ಐಆರ್ ಪ್ರಕ್ರಿಯೆಯನ್ನು ತಕ್ಷಣವೇ ಸ್ಥಗಿತಗೊಳಿಸಬೇಕು. ಕರ್ನಾಟಕದ ಮುಖ್ಯ ಚುನಾವಣಾಧಿಕಾರಿಗಳು ಖುದ್ದು ನೇರ ಮೇಲ್ವಿಚಾರಣೆ ವಹಿಸಿಕೊಳ್ಳಬೇಕು. ನಿಯಮ ಉಲ್ಲಂಘಿಸಿ ತಮ್ಮಿಷ್ಟದಂತೆ ವರ್ತಿಸುತ್ತಿರುವ ಭ್ರಷ್ಟ ಬಿಎಲ್‌ಒ ಅಧಿಕಾರಿಗಳನ್ನು ತಕ್ಷಣ ಅಮಾನತುಗೊಳಿಸಿ, ಕಠಿಣ ಕಾನೂನು ಕೈಗೊಳ್ಳಬೇಕು ಎಂದು ನಿಖಿಲ್ ಕುಮಾರಸ್ವಾಮಿ ಅಗ್ರಹಿಸಿದ್ದಾರೆ.



### ಕಣ್ಣುಮುಚ್ಚಬಾರದು..!

ಪಾರದರ್ಶಕತೆಗೆ ಹೆಸರಾದ ಚುನಾವಣಾ ಆಯೋಗವು ಈಗಾಗಲೇ ಮಹತ್ತರ ಕಾರ್ಯಗಳನ್ನು ಮಾಡಿ ಹೆಸರು ಮಾಡಿದೆ. ರಾಮನಗರದಲ್ಲಿ ಕಾನೂನು ಬಾಹಿರವಾಗಿ ನಡೆಯುತ್ತಿರುವ ಈ ಅಕ್ರಮಗಳ ವಿರುದ್ಧ ಕಣ್ಣುಮುಚ್ಚಿ ಕುಳಿತುಕೊಳ್ಳಬಾರದು. ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಿ, ಪ್ರಜಾಪ್ರಭುತ್ವವನ್ನು ಉಳಿಸಿ ಎಂದು ಸಿಟಿ ರವಿ ಒತ್ತಾಯಿಸಿದ್ದಾರೆ.

### ಸಿಟಿ ರವಿ ಸಿಡುಕು

ಎಸ್‌ಐಆರ್ ವೇಳೆ ಅಲ್ಪಸಂಖ್ಯಾತರ ಮತ ಒಂದೂ ಬಿಟ್ಟು ಹೋಗಬಾರದೆಂದು ಮುಖ್ಯಮಂತ್ರಿಗಳಿದ್ದ ಅನಧಿಕೃತ ಸಭೆಯಲ್ಲಿ ತಾಕೀತು ಮಾಡಿದ ಮಾಹಿತಿ ಇದೆ. ಹಾಗಿದ್ದರೆ ಬಹುಸಂಖ್ಯಾತರ ಮತ ಬಿಟ್ಟು ಹೋಗಬಹುದೇ ಎಂದು ಸಿಟಿ ರವಿ ಪ್ರಶ್ನಿಸಿದ್ದಾರೆ. ಎಸ್‌ಐಆರ್ ದೋಷಪೂರಿತ ಆಗಬೇಕೆಂಬುದು ಆಡಳಿತರೂಢ ಕಾಂಗ್ರೆಸ್ ಇಚ್ಛೆಯೇ ಎಂದು ಕೇಳಿದ್ದಾರೆ.

ಬಾಂಗ್ಲಾದೇಶಿಗಳಿಗೆ ಜಾಗ ಕೊಡಬಾರದೆಂದು ಹೇಳಬೇಕಿದ್ದರೂ ಅದನ್ನು ಹೇಳಿಲ್ಲ ಎಂದು ಟೀಕಿಸಿದರು. ಅಕ್ರಮ ಮಾಡಲು ಸಹಕರಿಸಬೇಕೆಂಬ ಒತ್ತಡವನ್ನು ಆರ್.ಒ.ಗಳು, ಜಿಲ್ಲಾಧಿಕಾರಿಗಳ ಮೇಲೆ ಹೇರುತ್ತಿರುವುದು ನಕಲಿ ಮಾಡುವ ಸಂಚನ್ನು ಕಾಂಗ್ರೆಸ್ ಮಾಡುತ್ತಿದೆ ಎಂಬ ಅನುಮಾನಕ್ಕೆ ಕಾರಣವಾಗಿದೆ.
–ಸಿ.ಟಿ ರವಿ, ಮಾಜಿ ಸಚಿವ

## ಅರಿವು ಕೇಂದ್ರಗಳ ಬಲವರ್ಧನೆಗೆ ಗೋಥೆ ಇನ್ಸ್ ಟಿಟ್ಯೂಟ್ ಜೊತೆ ಒಪ್ಪಂದ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ರಾಜ್ಯದ 5886 ಅರಿವು ಕೇಂದ್ರ (ಗ್ರಾಮ ಗ್ರಂಥಾಲಯಗಳ) ಬಲವರ್ಧನೆಗೆ ಹಾಗೂ ಕಲೆ ಮತ್ತು ಸಂಸ್ಕೃತಿಯ ವಿನಿಮಯಕ್ಕಾಗಿ ಜರ್ಮನಿಯ ಗೋಥೆ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ತಿಳಿಸಿದ್ದಾರೆ.

ವಿಕಾಸಸೌಧದ ತಮ್ಮ ಕಚೇರಿಯಲ್ಲಿಂದು ತಿಳಿವಳಿಕೆ ಒಪ್ಪಂದ ವಿನಿಮಯದ ಬಳಿಕ ಮಾತನಾಡಿದ ಅವರು, ಗೋಥೆ ಸಂಸ್ಥೆ ಕಲೆ, ಸಂಸ್ಕೃತಿ ಮತ್ತು ಶಿಕ್ಷಣ ಜಾಲವನ್ನು ರೂಪಿಸುವ ಮೂಲಕ ಗ್ರಾಮೀಣ ಜನರಿಗೆ



ವಿಶೇಷವಾಗಿ ವಿದ್ಯಾರ್ಥಿಗಳಿಗೆ ನೆರವಾಗಲಿದೆ ಎಂದರು.

ಅವಧಿಗೆ ಗೋಥೆ ಇನ್ಸ್ ಸ್ಟಿಟ್ಯೂಟ್ ಮುಂದಿನ 2 ವರ್ಷದಲ್ಲಿ 1.8 ಕೋಟಿ ರೂ.ವೆಚ್ಚ ಮಾಡುತ್ತಿದ್ದು, 9 ಲಕ್ಷ ರೂ. ಮೌಲ್ಯದ ಮಕ್ಕಳ ಕಥಾ ಪುಸ್ತಕಗಳನ್ನು ಅರಿವು ಕೇಂದ್ರಗಳಿಗೆ ಕೊಡುಗೆಯಾಗಿ ನೀಡಿದೆ ಎಂದರು.

ಇದಕ್ಕೆ ಕನೆಕ್ಟಿಂಗ್ ಡಾಟ್ಸ್ ಅಂದರೆ ವಿವಿಧ ಸಂಸ್ಥೆಗಳ ಅನುಭವವನ್ನು ಒಗ್ಗೂಡಿಸಿ, ಗ್ರಾಮೀಣ ಮತ್ತು ನಗರ ಪ್ರದೇಶದ ವಿದ್ಯಾರ್ಥಿಗಳ, ಜನರ ನಡುವೆ ಇರುವ ಜ್ಞಾನ ಕಂದಕವನ್ನು ನಿವಾರಿಸಲು ಒಂದು ಉತ್ತಮ ಸಂಪರ್ಕ ಜಾಲವನ್ನು ರೂಪಿಸುತ್ತದೆ ಎಂದರು.

ಕರ್ನಾಟಕದಲ್ಲಿ 5928 ಗ್ರಾಮ ಪಂಚಾಯ್ತಿಗಳಿದ್ದು, ರಾಜ್ಯಾದ್ಯಂತ ಒಟ್ಟು 5886 ಅರಿವು ಕೇಂದ್ರ ಅಥವಾ ಗ್ರಾಮೀಣ ಗ್ರಂಥಾಲಯಗಳಿವೆ. ಈ ಎಲ್ಲ ಗ್ರಂಥಾಲಯಗಳಲ್ಲಿರುವ ಮೇಲ್ವಿಚಾರಕರು ಅಂದರೆ ಗ್ರಂಥಪಾಲಕರ ಸಾಮರ್ಥ್ಯ ಬಲವರ್ಧನೆಗೆ ಪಂಚಾಯತ್ ರಾಜ್ ಇಲಾಕೆ ಮತ್ತು ಗೋಥೆ ಸಂಸ್ಥೆ ಒಗ್ಗೂಡಿ ಶ್ರಮಿಸಲಿವೆ ಎಂದರು.

ಜೊತೆಗೆ ಕಲೆ, ಸಂಸ್ಕೃತಿಯ ವಿನಿಮಯ ಕಾರ್ಯಕ್ರಮದಡಿ ಕರ್ನಾಟಕದ ಗ್ರಾಮೀಣ ಕಲೆಗಳನ್ನು ಜರ್ಮನಿಯ ಜನರಿಗೆ ಪರಿಚಯಿಸುವ ಅದೇ ರೀತಿಯಲ್ಲಿ ಜರ್ಮನಿಯ ಸಾಂಸ್ಕೃತಿಕ ಕಲೆಗಳನ್ನು ಕರುನಾಡ ಗ್ರಾಮೀಣ ಜನತೆಗೆ ವಿಶೇಷವಾಗಿ ಯುವಜನರಿಗೆ ಪರಿಚಯಿಸುವ ವಿನಿಮಯ ಕಾರ್ಯಕ್ರಮವನ್ನೂ ಆಯೋಜಿಸುತ್ತದೆ ಎಂದರು.

## ಜೂಜು: ಒನ್‌ಒನ್‌ಟು ಖಾಕಿ ದಾಳಿ..!

### ಜೂಜುಕೋರರ ಸೆರೆ, ಹಣ ಜಪ್ತಿ

ಗಂಗಾವತಿ ಗ್ರಾಮೀಣ ಪೊಲೀಸ್ ಠಾಣೆಯ ಪಿಐ ರಂಗಪ್ಪ, ಹೆಚ್ ದೊಡ್ಡಮನಿ ಅವರು ದಾಖಲಿಸಿರುವ ಎಫ್‌ಐಆರ್ ಪ್ರಕಾರ, ವೀರೇಶ್ ತಂದೆ ನರಸಪ್ಪ ಸೇರಿದಂತೆ ಇತರ ನಾಲ್ವರನ್ನು ಬಂಧಿಸಿ, ನ್ಯಾಯಾಲಯದ ಅನುಮತಿ ಪಡೆದು ಪ್ರಕರಣ ದಾಖಲಿಸಲಾಗಿದೆ. ದಾಳಿ ವೇಳೆ ಜೂಜಾಟ–ಕ್ಕೆ ಬಳಸಲಾಗಿದ್ದ ರೂಪಾಯಿ 6,220 ನಗದುವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

• ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಚಿಕ್ಕ ಜಂತಕಲ್ ಗ್ರಾಮದ ಹೊರವಲಯದಲ್ಲಿ ಅಕ್ರಮವಾಗಿ ನಡೆಯುತ್ತಿದ್ದ ಅಂದರ್–ಬಾಹರ್ ಇಸ್ಪೀಟ್ ಜೂಜಾಟದ ಅಡ್ಡೆಯ ಮೇಲೆ ಒನ್ ಒನ್ ಟು ಪೊಲೀಸ್ ಸಿಬ್ಬಂದಿ ದಾಳಿ ನಡೆಸಿದ್ದಾರೆ. ಖಚಿತ ಮಾಹಿತಿಯ ಮೇರೆಗೆ ಗಂಗಾವತಿ ಗ್ರಾಮೀಣ ಪೊಲೀಸ್ ಠಾಣೆ ವ್ಯಾಪ್ತಿಯ ಒನ್ ಒನ್ ಟು ಸಿಬ್ಬಂದಿ ದಾಳಿ ನಡೆಸಿದ ವೇಳೆ, ಜೂಜಾಟದಲ್ಲಿ ತೊಡಗಿದ್ದ ಹಲವರು ಪೊಲೀಸರನ್ನು ಕಂಡು ಸ್ಥಳದಿಂದ ಓಡಿ ಪರಾರಿಯಾಗಿದ್ದಾರೆ. ಈ ವೇಳೆ ಕೆಲವರನ್ನು ವಶಕ್ಕೆ ಪಡೆದು ಪೊಲೀಸ್ ವಾಹನದಲ್ಲಿ ಗಂಗಾವತಿ ಗ್ರಾಮೀಣ ಠಾಣೆಗೆ ಕರೆತಂದು ಒಪ್ಪಿಸಲಾಗಿದೆ.

## ಕ್ವಾರಿ ದುರಂತ: ಸೂಕ್ತ ಕಾನೂನು ಕ್ರಮ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಮಾಗಡಿ ರಸ್ತೆ ಬಳಿ ಎರಡು ಕ್ವಾರಿಯಲ್ಲಿ ಕುಸಿತವಾಗಿ 8 ಮಂದಿ ಮೃತಪಟ್ಟಿರುವ ಶಂಕೆಯಿದ್ದು, ಪ್ರಕರಣದ ಬಗ್ಗೆ ಅಧಿಕೃತ ಮಾಹಿತಿ ಪಡೆದ ನಂತರ ಕೈಗೊಳ್ಳಬೇಕಾಗಿರುವ ಅಗತ್ಯ ಕ್ರಮಗಳ ಬಗ್ಗೆ ತೀರ್ಮಾನ ಮಾಡಲಾಗುವುದು ಎಂದು ಸಿಎಂ ಡಿ ಕೆ ಶಿವಕುಮಾರ್ ತಿಳಿಸಿದ್ದಾರೆ.



ಮಾಧ್ಯಮಗಳ ಪ್ರಶ್ನೆಗಳಿಗೆ ಶಿವಕುಮಾರ್ ಅವರು ಪ್ರತಿಕ್ರಿಯೆ ನೀಡಿ, ಪೊಲೀಸ್ ಅಧಿಕಾರಿಗಳು, ಗಣಿ ಹಾಗೂ ಭೂ ವಿಜ್ಞಾನ ಇಲಾಖೆ ಅಧಿಕಾರಿಗಳು ದುರಂತ ಸ್ಥಳಕ್ಕೆ ಭೇಟಿ ನೀಡಿದ್ದಾರೆ. ಸ್ಫೋಟದಿಂದಾಗಿ ಇದು ಸಂಭವಿಸಿಲ್ಲ ಎಂಬ ಮಾಹಿತಿ ಬಂದಿದ್ದು, ಈ ಕ್ವಾರಿ ಕಾನೂನುಬದ್ಧವಾಗಿ ನಡೆಸಲಾಗುತ್ತಿದೆಯೇ ಇಲ್ಲವೇ ಎಂಬ ವರದಿಯನ್ನು ಪಡೆದು ನಂತರ ಕ್ರಮ ಕೈಗೊಳ್ಳಲಾಗುವುದು. ಕ್ವಾರಿ ನಡೆಸುವಾಗ ಅದರದೇ ಆದ ನಿಯಮಗಳಿದ್ದು, ಅವುಗಳ ಪಾಲನೆಯಾಗುತ್ತಿವೆಯೇ ಇಲ್ಲವೇ ಎಂಬ ಪರಿಶೀಲನೆ ಮಾಡಲಾಗುವುದು ಎಂದು ವಿವರಿಸಿದ್ದಾರೆ.

### ಸಂತ್ರಸ್ತರಿಗೆ ಪರಿಹಾರ ಶೀಘ್ರ

ಮೊದಲು ಎಷ್ಟು ಜನ ಸತ್ತಿದ್ದಾರೆ ಎಂಬ ಮಾಹಿತಿ ಬರಲಿ, ಆನಂತರ ಪರಿಹಾರದ ಬಗ್ಗೆ ತೀರ್ಮಾನ ಮಾಡೋಣ. ತರಾತುರಿಯಲ್ಲಿ ಪರಿಹಾರ ಘೋಷಿಸಿದ ಮಾತ್ರಕ್ಕೆ ಸತ್ತವರು ಮರಳಿ ಬರುವುದಿಲ್ಲ. ಇದಕ್ಕೆಲ್ಲಾ ಅದರದೇ ಆದ ಪ್ರಕ್ರಿಯೆಗಳಿವೆ. ಖಂಡಿತವಾಗಿ ಸಂತ್ರಸ್ತರಿಗೆ ಪರಿಹಾರ ನೀಡಲಾಗುವುದು. ಇಂತಹ ಘಟನೆಗಳು ಮತ್ತೆ ಮರುಕಳಿಸದಂತೆ ಎಚ್ಚರಿಕೆ ವಹಿಸುವುದು ಬಹಳ ಮುಖ್ಯ ಎಂದಿದ್ದಾರೆ.



ಬೆಂಗಳೂರು ದಕ್ಷಿಣ ತಾಲ್ಲೂಕಿನ ಮಡಪಟ್ಟಣದಲ್ಲಿರುವ ಕಲ್ಲುಕ್ವಾರಿಯಲ್ಲಿ ಸಂಭವಿಸಿದ ಕುಸಿತ ದುರಂತದಲಿ ಎಂಟು ಮಂದಿ ಮೃತಪಟ್ಟಿರುವ ಶಂಕೆಯಿದೆ. ಗಣಿ ಮತ್ತು ಭೂವಿಜ್ಞಾನ ಇಲಾಖೆ ಹಾಗೂ ಗೃಹ ಇಲಾಖೆಯ ಅಧಿಕಾರಿಗಳು ಸ್ಥಳದಲ್ಲಿದ್ದು ಪರಿಸ್ಥಿತಿಯನ್ನು ಪರಿಶೀಲಿಸುತ್ತಿದ್ದಾರೆ. ಗಣಿ ಮತ್ತು ಭೂವಿಜ್ಞಾನ ಇಲಾಖೆ ಪರಿಸ್ಥಿತಿಯನ್ನು ಮೌಲ್ಯಮಾಪನ ಮಾಡುತ್ತಿದೆ.
–ಪ್ರಿಯಾಂಕ್ ಖರ್ಗೆ, ಗೃಹ ಸಚಿವ

## ಕ್ರಿಮಿನಲ್ ಕೇಸ್: ಹಿಂಪಡೆಯುವುದು ಬೇಡ

### ನ್ಯಾಯಪೀಠದ ವಾದವೇನು?

ಆರೋಪಿಗಳ ವಿರುದ್ಧದ ಮೊಕದ್ದಮೆಗಳನ್ನು ಹಿಂಪಡೆಯಲು ಸೂಕ್ತ ಕಾನೂನು ಪ್ರಕ್ರಿಯೆಯ ಮೂಲಕವೇ ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ಹೈಕೋರ್ಟ್ ಈ ಹಿಂದೆ ನೀಡಿದ್ದ ಆದೇಶವನ್ನು ಈ ನಿರ್ಧಾರವು ಉಲ್ಲಂಘಿಸಿದೆ ಎಂದು ನ್ಯಾಯಪೀಠವು ಗಮನಸೆಳೆದಿದೆ.

• ಮಲ್ಲಮ್ಮ ನುಡಿ ವಾರ್ತೆ ಆಳಂದ

ಇಲ್ಲಿ ನಡೆದ ಗಲಭೆಗೆ ಸಂಬಂಧಿಸಿದ ಪ್ರಕರಣ ಸೇರಿದಂತೆ 52 ಕ್ರಿಮಿನಲ್ ಪ್ರಕರಣಗಳನ್ನು ಹಿಂಪಡೆಯುವ ರಾಜ್ಯ ಸರ್ಕಾರದ ಸಚಿವ ಸಂಪುಟದ ನಿರ್ಧಾರಕ್ಕೆ ಕರ್ನಾಟಕ ಹೈಕೋರ್ಟ್ ಗುರುವಾರ ತಡೆ ನೀಡಿದೆ. ಗಿರೀಶ್ ಭಾರದ್ವಾಜ್ ¢ ಕರ್ನಾಟಕ ರಾಜ್ಯ ಪ್ರಕರಣದಲ್ಲಿ ಈ ತಡೆಯಾಜ್ಞೆಯನ್ನು ನೀಡಲಾಗಿದೆ. ಅಪರಾಧ ಪ್ರಕ್ರಿಯಾ ಸಂಹಿತೆಯ ಸೆಕ್ಷನ್ 321 ಅನ್ನು ರಾಜ್ಯ ಸರ್ಕಾರವು ಅನ್ವಯಿಸಿರುವುದರಲ್ಲಿ ಲೋಪವಿದೆ ಎಂದು ಹೈಕೋರ್ಟ್ ತನ್ನ ಪ್ರಾಥಮಿಕ ಅವಲೋಕನದಲ್ಲಿ ಅಭಿಪ್ರಾಯಪಟ್ಟಿದೆ. ಸಂಪುಟವು ಇತ್ತೀಚೆಗೆ 52 ಪ್ರಕರಣಗಳನ್ನು ಹಿಂಪಡೆಯಲು ನಿರ್ಧರಿಸಿತ್ತು. ಮುಂದಿನ ವಿಚಾರಣೆಯವರೆಗೆ ಹೈಕೋರ್ಟ್ನ ಮಧ್ಯಂತರ ಆದೇಶ ಈ ನಿರ್ಧಾರವನ್ನು ತಡೆನೀಡಿದೆ.

**ಪೊಲೀಸ್ ಇಲಾಖೆಯ ಮಾಹಿತಿ ಹಂಚಿಕೆಗೆ ಹೊಸ ಮಾರ್ಗಸೂಚಿ, ಅನಧಿಕೃತ ಮಾಹಿತಿ ಸೋರಿಕೆಗೆ ತಡೆ– ಪ್ರಿಯಾಂಕ್ ಖರ್ಗೆ**

## ಎಸ್.ಐ.ಆರ್. ಜಾಗೃತಿಯಿಂದ ಕಾರ್ಯನಿರ್ವಹಿಸಲಿ

ಪ್ರಜಾಪ್ರಭುತ್ವದ ಯಶಸ್ಸಿಗೆ ಮತದಾರರ ಪಟ್ಟಿ ಅತ್ಯಂತ ಪ್ರಮುಖ ಅಂಶವಾಗಿದೆ. ಮತದಾರರ ಪಟ್ಟಿಯಲ್ಲಿ ಅರ್ಹ ನಾಗರಿಕರ ಹೆಸರು ಸೇರ್ಪಡೆ ಆಗುವುದು ಹಾಗೂ ಅನರ್ಹ ಹೆಸರುಗಳನ್ನು ನಿಯಮಾನುಸಾರ ತೆರವುಗೊಳಿಸುವುದು ಪಾರದರ್ಶಕವಾಗಿ ನಡೆಯಬೇಕು. ಈ ನಿಟ್ಟಿನಲ್ಲಿ ನಡೆಯುತ್ತಿರುವ ಎಸ್.ಐ.ಆರ್. (Special Intensive Revision) ಸರ್ವೆ ಕಾರ್ಯದಲ್ಲಿ ಅಧಿಕಾರಿಗಳು ಅತ್ಯಂತ ಜಾಗರೂಕತೆ ವಹಿಸಬೇಕು.

## ಸಂಪಾದಕೀಯ

**ಮಾಣಿಕರೆಡ್ಡಿ ಕೌಡಾಳೆ**
**ಪ್ರಧಾನ ಸಂಪಾದಕರು**
**ಮೊ: 9845028349**



ಸರ್ವೆ ವೇಳೆ ಯಾವುದೇ ಅರ್ಹ ಮತದಾರರ ಹೆಸರು ಅನಗತ್ಯವಾಗಿ ಕೈಬಿಡದಂತೆ ನೋಡಿಕೊಳ್ಳುವುದು ಅಧಿಕಾರಿಗಳ ಪ್ರಮುಖ ಜವಾಬ್ದಾರಿಯಾಗಿದೆ. ಮನೆಮನೆಗೆ ತೆರಳಿ ನಿಖರ ಮಾಹಿತಿ ಸಂಗ್ರಹಿಸಿ, ಜನರಿಗೆ ಸಮರ್ಪಕ ಮಾಹಿತಿ ನೀಡಿ, ಅವರ ದಾಖಲೆಗಳನ್ನು ಪರಿಶೀಲಿಸಿ ನ್ಯಾಯಯುತವಾಗಿ ಕಾರ್ಯನಿರ್ವಹಿಸಬೇಕು. ಅವಸರದ ನಿರ್ಧಾರಗಳು ಅಥವಾ ನಿರ್ಲಕ್ಷ್ಯದಿಂದ ಸಾವಿರಾರು ಮತದಾರರು ತಮ್ಮ ಮತದಾನದ ಹಕ್ಕನ್ನು ಕಳೆದುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಬಾರದು.

ಮತದಾನದ ಹಕ್ಕು ಸಂವಿಧಾನಾತ್ಮಕ ಪ್ರಜಾಸತ್ತಾತ್ಮಕ ಹಕ್ಕಾಗಿದೆ. ಆದ್ದರಿಂದ ಯಾವುದೇ ರಾಜಕೀಯ ಒತ್ತಡ, ಪಕ್ಷಪಾತ ಅಥವಾ ನಿರ್ಲಕ್ಷ್ಯಕ್ಕೆ ಅವಕಾಶ ನೀಡದೆ ಪಾರದರ್ಶಕ, ನಿಷ್ಪಕ್ಷಪಾತ ಹಾಗೂ ಕಾನೂನುಬದ್ಧವಾಗಿ ಸರ್ವೆ ಕಾರ್ಯವನ್ನು ಪೂರ್ಣಗೊಳಿಸಬೇಕು. ಮತದಾರರಿಗೆ ಅನ್ಯಾಯವಾಗದಂತೆ ಪ್ರತಿಯೊಬ್ಬ ಅಧಿಕಾರಿಯೂ ಹೊಣೆಗಾರಿಕೆಯಿಂದ ಕಾರ್ಯನಿರ್ವಹಿಸಿದಾಗ ಮಾತ್ರ ಚುನಾವಣಾ ವ್ಯವಸ್ಥೆಯ ಮೇಲಿನ ಸಾರ್ವಜನಿಕರ ವಿಶ್ವಾಸ ಮತ್ತಷ್ಟು ಬಲಗೊಳ್ಳುತ್ತದೆ.

## ಚಿಂತನೆ

## ಕಣ್ಣೀರು ಬತ್ತಿದಾಗ



ಕಣ್ಣೀರು ಕೇವಲ ನಿರಲ್ಲ ಅದು ನಮ್ಮ ಭಾವನೆಗಳ ಸಂಕೇತ, ಮನಸ್ಸಿಗೆ ನೋವಾದಗ ಕಣ್ಣೀರು ಬರುವುದು ಸಹಜ ಕಾರಣ ಮನುಷ್ಯನ ಮನಸಿನಲ್ಲಿರುವ ನೋವು ದುಃಖ ಕಣ್ಣೀರಾಗಿ ಹೊರ ಹಾಕುತ್ತದೆ.

ಮನುಷ್ಯನ ಭಾವನೆಗಳಿಗೆ ಅಥವಾ ಸಾಧನೆ ಪಥದಲ್ಲಿ ಎಡವಿದಾಗ, ಅಥವಾ ಸಮಾಜದ ನಿಂದನೆಗೆ ಗುರಿಯದಾಗ ಕಣ್ಣೀರು ಬರುವಂತೆ ಮನುಷ್ಯ ಶ್ರಮದಿಂದ ಗುರಿ ಮುಟ್ಟಿದಾಗ ಅಥವಾ ತನ್ನ ಶ್ರಮ ಸಾಕಾರವಾದಗ ಕೂಡ ಕಣ್ಣೀರು ಬರುತ್ತದೆ ಆದರೆ ಆ ಸಂತೋಷದ ಕಣ್ಣೀರು ಆನಂದ ಭಾಷ್ಪದ ಕಣ್ಣೀರು ಅನಿಸಿಕೊಳ್ಳುತ್ತದೆ.

ಆದರೆ ಕೆಲವರು ಎಷ್ಟೇ ಕಷ್ಟನಷ್ಟಗಳು ಎದುರಾದರೂ ಕಣ್ಣೀರು ಹಾಕುವುದು ದುರ್ಬಲ ಮನಸಿನ ಸಂಕೇತವೆಂದು ಅಪಾರ್ಥ ಮಾಡಿಕೊಂಡು ಒಂದು ಹನಿಯು ಕಣ್ಣೀರು ಹಾಕದೆ ಗಟ್ಟಿಮನಸು ಮಾಡಿಕೊಂಡಿರುತ್ತಾರೆ, ಆದರೆ ಅದು ತಪ್ಪು, ಅಳುವುದು ಅಥವಾ ಕಣ್ಣೀರು ಹಾಕುವುದು ಅಂದರೆ ಮನುಷ್ಯನ ದೌರ್ಬಲ್ಯವಲ್ಲ ಅಳುವುದು ಮನಸು ದುರ್ಬಲವಾಗದಂತೆ ತಡೆಯುವ ಸಹಜ ಕ್ರಿಯೆ. ಮಳೆ ಹನಿಯು ಹೇಗೆ ವರ್ಷಧಾರೆಯಾಗಿ ಹರಿದು ಬರಿದ ಭೂಮಿ ಹಸುರು ಮಾಡುವಂತೆ ಕಣ್ಣೀರು ಸಹ ಮನುಷ್ಯನ ಅಂತಾರಾಳದಲ್ಲಿರುವ ನೋವನ್ನು ಕಣ್ಣೀರಾಗಿ ಹರಿದು ಮನಸು ಹಗುರವಾಗುತ್ತದೆ.

**ಅತ್ತು ಅತ್ತು ಕಣ್ಣೀರು ಬತ್ತಿದಾಗ,.**
**ನೋವೆಲ್ಲ ಕರಗಿ ಮೌನವಾದಾಗ,**
**ಅಳುವಿನ ಆಚೆಯ ಶೂನ್ಯವಿದು,**
**ಹೇಳಲಾಗದ ಮನದ ತಲ್ಲಣವಿದು!**

ಮೇಲಿನ ಸಾಲುಗಳ ಸಾರದಂತೆ ಮನುಷ್ಯನ ದುಃಖದ ಪರಾಕಾಷ್ಠೆ ಕಟ್ಟೆಯೊಡದಾಗ ಅಥವಾ ಆ ವ್ಯಕ್ತಿಯು ತೀವ್ರವಾದ ಆಘಾತ, ನಿರಂತರ ನೋವು ಅಥವಾ ಅತಿಯಾದ ದುಃಖವನ್ನು ಅನುಭವಿಸಿದಾಗ, ಆರಂಭದಲ್ಲಿ ಕಣ್ಣೀರು ಹರಿಯುತ್ತದೆ. ಆದರೆ ನೋವು ಮಿತಿ ಮೀರಿದಾಗ ಕಣ್ಣೀರು ಬತ್ತಿ ಹೋಗಿ, ಮನಸ್ಸು ಶೂನ್ಯವಾಗುತ್ತದೆ.

ನಮ್ಮ ಬದುಕಿನ ಈ ಜಂಜಾಟದಲ್ಲಿ ಜಯ ಅಪಜಯ, ಸುಖ ದುಃಖ, ಕಷ್ಟ, ನಷ್ಟಗಳು ಸಹಜ ಇವು ಬದುಕಿನ ಭಾಗವಷ್ಟೇ ಎಂದು ತಿಳಿದು ಯಾವುದೋ ಕಾರಣದಿಂದ ದುಃಖವಾದಗ ಏಕಾಂಗಿಯಾಗಿ ಇರದೇ ನಮ್ಮನ್ನು ಅರ್ಥ ಮಾಡಿಕೊಳ್ಳುವರ ಜೊತೆ ಅಥವಾ ಕುಟುಂಬದವರ ಜೊತೆ ಆಪ್ತ ಸ್ನೇಹಿತರ ಜೊತೆ ನಮ್ಮ ನೋವುಗಳು ಹಂಚಿಕೊಂಡರೆ, ಒಳ್ಳೆ ಸಂಗೀತ ಆಲಿಸಿದರೆ ಗುರು ಹಿರಿಯರ ಹಿತೈಷಿಗಳ ಸಲಹೆ ಮೂಲಕ ಮನಸ್ಸು ಹಗುರವಾಗುತ್ತದೆ. ಅದಕ್ಕಿಂತ ಮೀರಿ ಇನ್ನೂ ಹೆಚ್ಚಿನ ನೋವಾದಗ ಮನಸು ಭಾರ ಮಾಡಿಕೊಳ್ಳದೆ ನಮ್ಮ ಮನಸಿನಲ್ಲಿರುವ ನೋವುಗಳನ್ನು ಅಳುವದರ ಮುಖಾಂತರ ಹೊರಹಾಕಿ ಮನಸು ಹಗುರ ಮಾಡಿಕೊಳ್ಳೋಣ.



**ಓಂಕಾರ ಪಾಟೀಲ**
**ಕಾರ್ಯದರ್ಶಿಗಳು: ಜಿಲ್ಲಾ ಮಕ್ಕಳ ಸಾಹಿತ್ಯ ಪರಿಷತ್ ಬೀದರ**

# ಸಸ್ಯ ಸಂತೆ, ತೋಟಗಾರಿಕೆ ಮುಂಗಾರು ಅಭಿಯಾನ

• **ಮಲ್ಲಮ್ಮ ನುಡಿ ವಾರ್ತೆ ಬೀದರ್**

ಕೃಷಿ ನಮ್ಮ ದೇಶದ ಆರ್ಥಿಕತೆಯ ಬೆನ್ನೆಲುಬಾಗಿದ್ದು, ತೋಟಗಾರಿಕೆ ಕ್ಷೇತ್ರವು ರೈತರ ಆದಾಯವನ್ನು ದ್ವಿಗುಣ ವಹಿಸುವಲ್ಲಿ ಪ್ರಮುಖ ಪಾತ್ರವಹಿಸಿದೆ ಎಂದು ಬೀದರ ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕರಾದ ದೇವಿಕಾ.ಆರ್ ಅವರು ಹೇಳಿದರು.

ಬೀದರ ತೋಟಗಾರಿಕೆ ಮಹಾವಿದ್ಯಾಲಯ ಮುಖ್ಯ ದ್ವಾರದದಲ್ಲಿ ಇತ್ತೀಚಿನ ಬೀದರ ತೋಟಗಾರಿಕಾ ಮಹಾವಿದ್ಯಾಲಯ, ಬೀದರ ತೋಟಗಾರಿಕೆ ವಿಸ್ತರಣಾ ಶಿಕ್ಷಣ ಘಟಕ, ಹಾಗೂ ಬಾಗಲಕೋಟ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಸಂಯುಕ್ತಾಶ್ರಯದಲ್ಲಿ "ಸಸ್ಯ ಸಂತೆ" ಹಾಗೂ "ತೋಟಗಾರಿಕೆ ಮುಂಗಾರು ಅಭಿಯಾನ" ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಒಂದು ವಾರ 2026ರ ಜುಲೈ 1 ರಿಂದ 7ರ ವರೆಗೆ ಸಸ್ಯ ಸಂತೆ ಹಾಗೂ ತೋಟಗಾರಿಕೆ ಮುಂಗಾರು ಅಭಿಯಾನ ಬೀದರ ತೋಟಗಾರಿಕೆ ಮಹಾವಿದ್ಯಾಲಯ ಕೃಷಿಯು ನಮ್ಮ ದೇಶದ ಆರ್ಥಿಕತೆಯ ಬೆನ್ನೆಲುಬಾಗಿದ್ದು, ತೋಟಗಾರಿಕೆ ಕ್ಷೇತ್ರವು ರೈತರ ಆದಾಯವನ್ನು ದ್ವಿಗುಣ ವಹಿಸುವಲ್ಲಿ ಪ್ರಮುಖ ಪಾತ್ರವಹಿಸಿದೆ. ಮುಂಗಾರು ಹಂಗಾಮು ಕೃಷಿ ಮತ್ತು ತೋಟಗಾರಿಕೆ ಚಟುವಟಿಕೆಗಳಿಗೆ ಅತ್ಯಂತ ಮಹತ್ವದ್ದಾಗಿದೆ. ಈ ಅವಧಿಯಲ್ಲಿ ವೈಜ್ಞಾನಿಕ



ವಿಧಾನಗಳನ್ನು ಅಳವಡಿಸಿಕೊಳ್ಳುವುದರೊಂದಿಗೆ ಸಸ್ಯ ಸಂರಕ್ಷಣಾ ಕ್ರಮಗಳನ್ನು ಸಮರ್ಪಕವಾಗಿ ಅನುಸರಿಸುವುದು ಉತ್ತಮ ಇಳುವರಿ ಪಡೆಯಲು ಅತ್ಯಗತ್ಯವಾಗಿದೆ ಎಂದರು.

ಸಸ್ಯ ಸಂತೆ ಎಂದರೆ ಕೇವಲ ಒಂದೇ ಸೂರಿನಡಿ ತೋಟಗಾರಿಕೆ ಮಹಾವಿದ್ಯಾಲಯ, ಹೊರತಂದಿರುವ ಉತ್ಕೃಷ್ಟ ಸಸಿಗಳು ಸಾವಯವ ಪರಿಕರಗಳು, ಅಲಂಕಾರಿಕ ಔಷಧಿಯ ಸಸಿಗಳು ಹಾಗೂ ಮೌಲ್ಯವರ್ಧಿತ ಪದಾರ್ಥಗಳನ್ನು ರೈತರಿಗೆ ಅತೀ ಕಡಿಮೆ ದರದಲ್ಲಿ ಒದಗಿಸುವುದಾಗಿದೆ ಎಂದು ತಿಳಿಸಿದರು.

ಬೀದರ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಡೀನ್‌ರಾದ ಡಾ.ಮಹಮ್ಮದ್ ಫಾರೂಕ್ ಅವರು ಮಾತನಾಡಿ, ತೋಟಗಾರಿಕೆ ಮುಂಗಾರು ಅಭಿಯಾನದ ಮೂಲಕ ಉತ್ತಮ ಗುಣಮಟ್ಟದ ಸಸಿಗಳ ನೆಡುವಿಕೆ, ನೀರಿನ ಸಮರ್ಪಕ ಬಳಕೆ, ಹನಿ ನೀರಾವರಿ, ಮಳೆನೀರು ಸಂಗ್ರಹಣೆ, ಮಣ್ಣಿನ ಆರೋಗ್ಯ ಕಾಪಾಡುವಿಕೆ ಹಾಗೂ ಹವಾಮಾನಕ್ಕೆ ಹೊಂದಿಕೊಳ್ಳುವ ಕೃಷಿ ಪದ್ಧತಿಗಳ ಬಗ್ಗೆ ರೈತರಿಗೆ ಅರಿವು ಮೂಡಿಸುವುದು ಈ ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ. ತೋಟಗಾರಿಕೆ ಮಹಾವಿದ್ಯಾಲಯ, ಕೃಷಿ ಹಾಗೂ ತೋಟಗಾರಿಕೆ ಇಲಾಖೆಗಳು, ಕೃಷಿ ವಿಜ್ಞಾನ ಕೇಂದ್ರಗಳು ಮತ್ತು ರೈತರು ಪರಸ್ಪರ ಸಹಕಾರದಿಂದ ಕಾರ್ಯನಿರ್ವಹಿಸಿದಾಗ ಮಾತ್ರ ಸುಸ್ಥಿರ ಕೃಷಿ ಮತ್ತು ಉತ್ತಮ ಆದಾಯದ ಗುರಿಯನ್ನು ಸಾಧಿಸಲು ಸಾಧ್ಯ ವಿದ್ಯಾರ್ಥಿಗಳು ಹಾಗೂ ಯುವ ಕೃಷಿ ಪದವೀಧರರು ಹೊಸ ತಂತ್ರಜ್ಞಾನಗಳನ್ನು ರೈತರವರೆಗೆ ತಲುಪಿಸುವ ಸೇತುವೆಯಾಗಬೇಕಂದು ಹೇಳಿದರು.

ತೋಟಗಾರಿಕಾ ವಿಸ್ತರಣಾ ಶಿಕ್ಷಣ ಕೇಂದ್ರದ ಮುಖ್ಯಸ್ಥರಾದ ಡಾ.ವಿಜಯಮಹಾಂತೇಶ ಮಾತನಾಡಿ, ನಮ್ಮ ರೈತರು ವೈಜ್ಞಾನಿಕ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಂಡು, ಸಸ್ಯ ಸಂತೆಗೆ ಭೇಟಿ ನೀಡಿ ತಾಂತ್ರಿಕ ಮಾಹಿತಿ ಜೊತೆಗೆ ವಿವಿಧ ಪರಿಕರಗಳನ್ನು ಪಡೆದು ತೋಟಗಾರಿಕೆ ಬೆಳೆಗಳಲ್ಲಿ ಹೆಚ್ಚಿನ ಉತ್ಪಾದನೆ

> **ಕೃಷಿ ನಮ್ಮ ದೇಶದ ಆರ್ಥಿಕತೆಯ ಬೆನ್ನೆಲುಬಾಗಿದ್ದು, ತೋಟಗಾರಿಕೆ ಕ್ಷೇತ್ರವು ರೈತರ ಆದಾಯವನ್ನು ದ್ವಿಗುಣ ವಹಿಸುವಲ್ಲಿ ಪ್ರಮುಖ ಪಾತ್ರವಹಿಸಿದೆ. ಸಸ್ಯ ಸಂತೆ" ಹಾಗೂ "ತೋಟಗಾರಿಕೆ ಮುಂಗಾರು ಅಭಿಯಾನ" ಕೃಷಿಯು ನಮ್ಮ ದೇಶದ ಆರ್ಥಿಕತೆಯ ಬೆನ್ನೆಲುಬಾಗಿದ್ದು, ತೋಟಗಾರಿಕೆ ಕ್ಷೇತ್ರವು ರೈತರ ಆದಾಯವನ್ನು ದ್ವಿಗುಣ ವಹಿಸುವಲ್ಲಿ ಪ್ರಮುಖ ಪಾತ್ರವಹಿಸಿದೆ. ಮುಂಗಾರು ಹಂಗಾಮು ಕೃಷಿ ಮತ್ತು ತೋಟಗಾರಿಕೆ ಚಟುವಟಿಕೆಗಳಿಗೆ ಅತ್ಯಂತ ಮಹತ್ವದ್ದಾಗಿದೆ,**
> **–ದೇವಿಕಾ.ಆರ್**
> **ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕರು**

ಹಾಗೂ ಉತ್ತಮ ಗುಣಮಟ್ಟದ ಫಲಿತಾಂಶಗಳನ್ನು ಸಾಧಿಸಲಿ ಎಂಬ ಉದ್ದೇಶದೊಂದಿಗೆ ಸಸ್ಯ ಸಂತೆ ಆಯೋಜಿಸಲಾಗಿದ್ದು, ಬೀದರ ಜಿಲ್ಲೆಯ ಸಮಸ್ತ ರೈತರು ಹಾಗೂ ಜನ ಸಾಮಾನ್ಯರು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಅಭಿಪ್ರಾಯವನ್ನು ಹಂಚಿಕೊಂಡರು.

ಈ ಸಂಧರ್ಭದಲ್ಲಿ ಸ್ಥಳೀಯ ರೈತರು, ಮಹಾವಿದ್ಯಾಲಯದ ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಡಾ.ಹರೀಶ.ಟಿ, ಸ್ವಾಗತಿಸಿದರು. ಡಾ.ಜಾನ್ಹವಿ ಡಿ.ಆರ್, ಕಾರ್ಯಕ್ರಮವನ್ನು ನಿರೂಪಿಸಿ ವಂದಿಸಿದ್ದರು,

## ಫ್ರೂಟ್ಸ್ ತಂತ್ರಾಂಶದಲ್ಲಿ ಜಮೀನು ವಿವರ ಕಡ್ಡಾಯ

• **ಮಲ್ಲಮ್ಮ ನುಡಿ ವಾರ್ತೆ ಬೀದರ್**

ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಫ್ರೂಟ್ಸ್ ತಂತ್ರಾಂಶದಲ್ಲಿ ಜಿಲ್ಲೆಯ ಎಲ್ಲಾ ರೈತರಿಗೆ ಸೆಂಟ್ರಲ್ ಫಾರ್ಮರ್ಸ್ ಐಡಿ (ಎಫ್‌ಐಡಿ) ಸೃಜಿಸುವುದು ಕಡ್ಡಾಯವಾಗಿದ್ದು, ರೈತರು ತಮ್ಮ ಜಮೀನಿನ ಎಲ್ಲಾ ವಿವರಗಳನ್ನು ಕೂಡಲೇ ಲಿಂಕ್ ಮಾಡಿಸಬೇಕು ಎಂದು ಜಂಟಿ ಕೃಷಿ ನಿರ್ದೇಶಕಿ ದೇವಿಕಾ ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ಜಿಲ್ಲೆಯಲ್ಲಿ ಒಟ್ಟು 4,97,049 ಜಮೀನಿನ ಪ್ಲಾಟ್‌ಗಳು ಇದ್ದು, ಇದುವರೆಗೆ 3,62,411 ಪ್ಲಾಟ್‌ಗಳನ್ನು ಫ್ರೂಟ್ಸ್ ತಂತ್ರಾಂಶದಲ್ಲಿ ಲಿಂಕ್ ಮಾಡಲಾಗಿದೆ. ಉಳಿದಿರುವ ಪ್ಲಾಟ್‌ಗಳ ಮಾಹಿತಿಯನ್ನು ಶೀಘ್ರದಲ್ಲೇ ದಾಖಲಿಸುವಂತೆ ರೈತರಿಗೆ ಮನವಿ ಮಾಡಿದ್ದಾರೆ,

ತಾಲೂಕುವಾರು ಬಾಕಿ ಇರುವ ಪ್ಲಾಟ್‌ಗಳ ಸಂಖ್ಯೆ ಬಸವಕಲ್ಯಾಣದಲ್ಲಿ 22,602, ಭಾಲ್ಕಿಯಲ್ಲಿ 21,180, ಔರಾದ್ (2) 14,276, -20,412, 5 11,829, ಚಿಟಗುಪ್ಪಾ 9,667, ಕಮಲನಗರ 8,035 ಹಾಗೂ



ಹುಲಸೂರಿನಲ್ಲಿ 3,782 ಆಗಿದೆ. ಒಟ್ಟಾರೆ ಜಿಲ್ಲೆಯಲ್ಲಿ 1,11,783 ಜಮೀನಿನ ಪ್ಲಾಟ್‌ಗಳ ವಿವರ ಇನ್ನೂ ದಾಖಲಿಸಬೇಕಿದೆ ಎಂದು ತಿಳಿಸಿದ್ದಾರೆ.

ಬರ ಪರಿಹಾರ, ಬೆಳೆ ವಿಮೆ, ಬೆಂಬಲ ಬೆಲೆಯಲ್ಲಿ ಕೃಷಿ ಉತ್ಪನ್ನಗಳ ಮಾರಾಟ ಹಾಗೂ ವಿವಿಧ ಇಲಾಖೆಗಳ ರಿಯಾಯಿತಿ ಸೌಲಭ್ಯಗಳನ್ನು ಪಡೆಯಲು ರೈತರ ಒಡೆತನದ ಎಲ್ಲಾ ಜಮೀನಿನ ವಿವರಗಳನ್ನು ಎಫ್‌ಐಡಿಯಲ್ಲಿ ದಾಖಲಿಸುವುದು ಕಡ್ಡಾಯವಾಗಿದೆ. ಇಲ್ಲದಿದ್ದರೆ ಸರ್ಕಾರದ ವಿವಿಧ ಯೋಜನೆಗಳ ಪ್ರಯೋಜನಗಳಿಂದ ರೈತರು ವಂಚಿತರಾಗುವ ಸಾಧ್ಯತೆ ಇದೆ ಎಂದು ಅವರು ಎಚ್ಚರಿಕೆ ನೀಡಿದ್ದಾರೆ.

## ಮೂಲಸೌಕರ್ಯ ಬಲವರ್ಧನೆಗೆ ಮಹತ್ವದ ನಿರ್ಣಯ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ**

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವ ಹಾಗೂ ಸಾರ್ವಜನಿಕರಿಗೆ ಪೊಲೀಸ್ ಸೇವೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ತಲುಪಿಸುವ ಉದ್ದೇಶದಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ 10 ಹೊಸ ಪೊಲೀಸ್ ಠಾಣೆಗಳ ಕಟ್ಟಡ ನಿರ್ಮಾಣಕ್ಕೆ ಇಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಮಹತ್ವದ ಅನುಮೋದನೆ ನೀಡಲಾಗಿದೆ ಎಂದು ಗೃಹ, ಮಾಹಿತಿ ಹಾಗೂ ಜೈವಿಕ ತಂತ್ರಜ್ಞಾನ ಮತ್ತು ಇ–ಆಡಳಿತ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.



2025–27ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಲಾಗಿದ್ದಂತೆ, ರಾಜ್ಯದ ವಿವಿಧ ಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪೊಲೀಸ್ ಠಾಣೆಗಳಿಗೆ ಸ್ವಂತ ಕಟ್ಟಡ ನಿರ್ಮಾಣ ಮಾಡುವ ಉದ್ದೇಶದಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ. ಈ ಯೋಜನೆಯಡಿ ಒಟ್ಟು ₹30 ಕೋಟಿ ಅನುದಾನವನ್ನು ಮಂಜೂರು ಮಾಡಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ.

ಈ ಹೊಸ ಕಟ್ಟಡಗಳು ನಿರ್ಮಾಣವಾದ ನಂತರ ಪೊಲೀಸ್ ಸಿಬ್ಬಂದಿಗೆ ಉತ್ತಮ ಕಾರ್ಯಪರಿಸರ ದೊರೆಯಲಿದ್ದು, ಸಾರ್ವಜನಿಕರಿಗೆ ವೇಗವಾದ ಹಾಗೂ ಸುಲಭ ಪೊಲೀಸ್ ಸೇವೆ ಒದಗಿಸಲು ಸಾಧ್ಯವಾಗುತ್ತದೆ. ರಾಜ್ಯದಲ್ಲಿ ಬೆಳೆಯುತ್ತಿರುವ ಭದ್ರತಾ ಸವಾಲುಗಳನ್ನು ಎದುರಿಸಲು ಪೊಲೀಸ್ ಇಲಾಖೆಯ ಮೂಲಸೌಕರ್ಯವನ್ನು ಆಧುನೀಕರಿಸುವುದು ಸರ್ಕಾರದ ಆದ್ಯತೆಯಾಗಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ರಾಜ್ಯ ಸರ್ಕಾರವು ನಾಗರಿಕರ ಸುರಕ್ಷತೆ ಮತ್ತು ಕಾನೂನು ಸುವ್ಯವಸ್ಥೆಯನ್ನು ಅತ್ಯುನ್ನತ ಆದ್ಯತೆಯಾಗಿ ಪರಿಗಣಿಸಿದ್ದು, ಪೊಲೀಸ್ ಇಲಾಖೆಯನ್ನು ತಂತ್ರಜ್ಞಾನ ಹಾಗೂ ಮೂಲಸೌಕರ್ಯದ ದೃಷ್ಟಿಯಿಂದ ಇನ್ನಷ್ಟು ಬಲಿಷ್ಠಗೊಳಿಸುವ ಕಾರ್ಯವನ್ನು ನಿರಂತರವಾಗಿ ಮುಂದುವರಿಸಲಾಗುತ್ತಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

## ಟಾಟಾ ಪವರ್ ಪರವಾನಗಿ ಪ್ರಸ್ತಾವಣೆಗೆ ಜೆಸ್ಕಾಂ ಆಕ್ಷೇಪ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ**

ವಿದ್ಯುತ್ ಕಾಯ್ದೆ–2003ರ 14 ಮತ್ತು 15 ಕಲಂ\ ಅಡಿಯಲ್ಲಿ ಟಾಟಾ ಪವರ್ ಕಂಪನಿಯು ಜೆಸ್ಕಾಂ ವ್ಯಾಪ್ತಿಯ ಬಳ್ಳಾರಿ, ಕಲಬುರಗಿ, ಯಾದಗಿರಿ, ರಾಯಚೂರು ಜಿಲ್ಲೆಗಳ ಮೂರು ಮಹಾನಗರ ಪಾಲಿಕೆಗಳು ಹಾಗೂ ಆರು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ವಿದ್ಯುತ್ ವಿತರಣಾ ಪರವಾನಗಿ (Distribution Licence) ನೀಡುವಂತೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ (ಕೆಇಆರ್‌ಸಿ) ಅರ್ಜಿ ಸಲ್ಲಿಸಿರುವ ಹಿನ್ನೆಲೆಯಲ್ಲಿ, ಈ ಪ್ರಸ್ತಾವನೆಯು ಸಾರ್ವಜನಿಕ ಹಿತಾಸಕ್ತಿಗೆ ಧಕ್ಕೆಯಾಗುವ ಸಾಧ್ಯತೆ ಇರುವುದರಿಂದ ಜೆಸ್ಕಾಂ ತನ್ನ ಆಕ್ಷೇಪಣೆಯನ್ನು ಕೆಇಆರ್‌ಸಿ ಮುಂದೆ ಸಲ್ಲಿಸಿದೆ.

ಪ್ರಸ್ತುತ ಜೆಸ್ಕಾಂ ಸಂಸ್ಥೆಯು ನಗರ, ಪಟ್ಟಣ ಹಾಗೂ ಗ್ರಾಮೀಣ ಪ್ರದೇಶಗಳನ್ನು ಒಳಗೊಂಡಂತೆ ಸಮಗ್ರವಾಗಿ ವಿದ್ಯುತ್ ವಿತರಣಾ ಸೇವೆ ಒದಗಿಸುತ್ತಿದೆ.

**ಆಕ್ಷೇಪಣೆಗಳು:** ಪ್ರಸ್ತಾವಿತ ಪ್ರದೇಶದಲ್ಲಿ ಸ್ವತಂತ್ರ ವಿದ್ಯುತ್ ವಿತರಣಾ ಜಾಲವನ್ನು ನಿರ್ಮಿಸುವ ಕುರಿತು ಟಾಟಾ ಪವರ್ ಸ್ಪಷ್ಟ ಯೋಜನೆ ಸಲ್ಲಿಸಿಲ್ಲ. ಬದಲಾಗಿ, ಜೆಸ್ಕಾಂನ ಈಗಿರುವ ಮೂಲ ಸೌಕರ್ಯವನ್ನು ಅವಲಂಬಿಸಿ ವಿದ್ಯುತ್ ಸರಬರಾಜು ಮಾಡಲು ಉದ್ದೇಶಿಸಿರುವುದಾಗಿ ಹೇಳಿದೆ. ವಿದ್ಯುತ್ ಖರೀದಿ ಯೋಜನೆಯ ಕುರಿತಾಗಿಯೂ ಜೆಸ್ಕಾಂ ಆಕ್ಷೇಪ ಸಲ್ಲಿಸಿದ್ದು, ಅಲ್ಪಾವಧಿ ವಿದ್ಯುತ್ ಖರೀದಿ ಅವಲಂಬನೆಯು ಗ್ರಾಹಕರಿಗೆ ಹೆಚ್ಚುವರಿ ವೆಚ್ಚದ ಭಾರ ಉಂಟುಮಾಡುವ ಸಾಧ್ಯತೆಯಿದೆ.

ಕೈಗಾರಿಕಾ ಹಾಗೂ ವಾಣಿಜ್ಯ ವಲಯದ ಹೆಚ್ಚಿನ ಆದಾಯ ತರುವ ಗ್ರಾಹಕರನ್ನೇ ಗುರಿಯಾಗಿಸಿಕೊಂಡು ಟಾಟಾ ಸಂಸ್ಥೆ ಸೇವೆ ನೀಡುವ ಸಾಧ್ಯತೆ ಇರುವುದರಿಂದ, ಸಬ್ಸಿಡಿ ಪಡೆಯುವ ಸಾಮಾನ್ಯ ಗ್ರಾಹಕರಿಗೆ ತೊಂದರೆಯಾಗಬಹುದು. ಅಲ್ಲದೇ ಜೆಸ್ಕಾಂನ ಆರ್ಥಿಕ ಸ್ಥಿರತೆಗೆ ಧಕ್ಕೆ ಉಂಟಾಗಬಹುದು. ಗೃಹ, ಕೃಷಿ ಹಾಗೂ ಇತರ ಸಬ್ಸಿಡಿ ಆಧರಿತ ಗ್ರಾಹಕರಿಗೆ ನೀಡಲಾಗುತ್ತಿರುವ ಕ್ರಾಸ್ ಸಬ್ಸಿಡಿ ವ್ಯವಸ್ಥೆ ದುರ್ಬಲಗೊಳ್ಳುವ ಸಾಧ್ಯತೆ ಇದೆ.

ಜೆಸ್ಕಾಂ ಸಂಸ್ಥೆಯು ತನ್ನ ವ್ಯಾಪ್ತಿಯಲ್ಲಿನ ಪ್ರಸ್ತುತ ಹಾಗೂ ಭವಿಷ್ಯದ ವಿದ್ಯುತ್ ಬೇಡಿಕೆಯನ್ನು ಪೂರೈಸುವ ಉದ್ದೇಶದಿಂದ ವಿವಿಧ ವಿದ್ಯುತ್ ಉತ್ಪಾದನಾ ಸಂಸ್ಥೆಗಳೊಂದಿಗೆ ದೀರ್ಘಾವಧಿಯ ವಿದ್ಯುತ್ ಖರೀದಿ ಒಪ್ಪಂದಗಳನ್ನು ಮಾಡಿಕೊಂಡಿದ್ದು, ವಿದ್ಯುತ್ ವಿತರಣಾ ಜಾಲದ ವಿಸ್ತರಣೆ ಹಾಗೂ ಮೂಲಸೌಕರ್ಯ ಅಭಿವೃದ್ಧಿಗಾಗಿ ಗಣನೀಯ ಪ್ರಮಾಣದ ಸಾಲವನ್ನು ಸಹ ಪಡೆದಿದೆ.

ಇಂತಹ ಸಂದರ್ಭದಲ್ಲಿ ಲಾಭದಾಯಕ ನಗರ ಪ್ರದೇಶಗಳಲ್ಲಿ ಖಾಸಗಿ ಕಂಪನಿಗಳಿಗೆ ವಿದ್ಯುತ್ ವಿತರಣಾ ಪರವಾನಗಿ ನೀಡಿದಲ್ಲಿ, ಜೆಸ್ಕಾಂನ ಆದಾಯದಲ್ಲಿ ಕುಸಿತ ಉಂಟಾಗಿ ಸಂಸ್ಥೆಯ ಆರ್ಥಿಕ ಸ್ಥಿರತೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆ ಇರುವುದರಿಂದ ಸವಿಸ್ತಾರ ಆಕ್ಷೇಪಣೆಗಳು ಮತ್ತು ಅಭಿಪ್ರಾಯಗಳನ್ನು ನಿಯಮಾನುಸಾರ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ (ಕೆಇಆರ್‌ಸಿ) ಮುಂದೆ ಸಲ್ಲಿಸಿದ್ದು, ಸಂಸ್ಥೆಯ ಗ್ರಾಹಕರು, ರೈತರು ಹಾಗೂ ಸಾರ್ವಜನಿಕರ ಹಿತಾಸಕ್ತಿಯನ್ನು ಕಾಪಾಡಲು ಹಾಗೂ ಗ್ರಾಹಕರ ಮುಂಬರುವ ಎಲ್ಲಾ ವಿದ್ಯುತ್ ಬೇಡಿಕೆಗಳ ಜೊತೆಗೆ ಹೊಸ ವಿದ್ಯುತ್ ಸಂಪರ್ಕ ಒದಗಿಸುವ ಸಾಮರ್ಥ್ಯವೂ ಜೆಸ್ಕಾಂಗೆ ಇದೆ.

# 11ರಂದು ಜಿಲ್ಲೆಯಾದ್ಯಂತ ಬೃಹತ್ ರಾಷ್ಟ್ರೀಯ ಲೋಕ ಅದಾಲತ್

• **ಮಲ್ಲಮ್ಮ ನುಡಿ ವಾರ್ತೆ ಚಿಕ್ಕಬಳ್ಳಾಪುರ**

ಜಿಲ್ಲೆಯ ಸಾರ್ವಜನಿಕರು ತಮ್ಮ ವ್ಯಾಜ್ಯಗಳನ್ನು ತ್ವರಿತವಾಗಿ, ಕಡಿಮೆ ವೆಚ್ಚದಲ್ಲಿ ಮತ್ತು ಸೌಹಾರ್ದಯುತವಾಗಿ ಇತ್ಯರ್ಥಪಡಿಸಿಕೊಳ್ಳಲು ಇದೇ ಜುಲೈ 11ರಂದು ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ಬೃಹತ್ ರಾಷ್ಟ್ರೀಯ ಲೋಕ ಅದಾಲತ್ ಆಯೋಜಿಸಲಾಗಿದ್ದು, ರಾಜಿಯಾಗಬಹುದಾದ ಪ್ರಕರಣಗಳಿರುವ ಕಕ್ಷಿದಾರರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ನ್ಯಾ. ಟಿ.ಪಿ. ರಾಮಲಿಂಗೇಗೌಡ ಅವರು ಕರೆ ನೀಡಿದರು.

ಜಿಲ್ಲಾ ನ್ಯಾಯಾಲಯದ ಸಭಾಂಗಣದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಆಯೋಜಿಸಿದ್ದ ರಾಷ್ಟ್ರೀಯ ಲೋಕ ಅದಾಲತ್ ಕುರಿತ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿಕ್ಕಬಳ್ಳಾಪುರ ಜಿಲ್ಲೆಯ ವಿವಿಧ ನ್ಯಾಯಾಲಯಗಳಲ್ಲಿ 50,306ಕ್ಕೂ ಹೆಚ್ಚು ಪ್ರಕರಣಗಳು ಬಾಕಿ ಇದ್ದು, ಅವುಗಳಲ್ಲಿ ಬಹುತೇಕ ಪ್ರಕರಣಗಳನ್ನು ಈ ಬಾರಿಯ ಲೋಕ ಅದಾಲತ್‌ಗೆ ಗುರುತಿಸಲಾಗಿದೆ, ಈ ಪೈಕಿ ಹೆಚ್ಚು ಪ್ರಕರಣಗಳನ್ನು ಇತ್ಯರ್ಥಪಡಿಸುವ ಗುರಿ ಹೊಂದಲಾಗಿದೆ ಎಂದರು.

ಲೋಕ ಅದಾಲತ್‌ನಲ್ಲಿ ರಾಜಿಯಾಗಬಹುದಾದ ಅಪರಾಧಿಕ ಪ್ರಕರಣಗಳು, ಬ್ಯಾಂಕ್ ಸಾಲ ವಸೂಲಾತಿ ಪ್ರಕರಣಗಳು, ಚೆಕ್ ಅಮಾನ್ಯ ಪ್ರಕರಣಗಳು, ಮೋಟಾರು ವಾಹನ ಅಪಘಾತ ಪರಿಹಾರ ಪ್ರಕರಣಗಳು, ಉದ್ಯೋಗದಲ್ಲಿ ಪುನರ್‌ಸ್ಥಾಪನೆಗೆ ಸಂಬಂಧಿಸಿದ ಪ್ರಕರಣಗಳು, ಕೈಗಾರಿಕಾ ಕಾರ್ಮಿಕರ ವೇತನ ಮತ್ತು ಸೇವಾ ವಿವಾದಗಳು, ಭೂಸ್ವಾಧೀನ ಪ್ರಕರಣಗಳು, ವಿದ್ಯುತ್ ಮತ್ತು ನೀರಿನ ಶುಲ್ಕ ಸಂಬಂಧಿತ ಪ್ರಕರಣಗಳು, ಕರ್ನಾಟಕ ವಿದ್ಯುತ್



ನಿಯಂತ್ರಣ ಆಯೋಗದ ಪ್ರಕರಣಗಳು, ಸಾಲ ವಸೂಲಾತಿ ನ್ಯಾಯಾಧಿಕರಣದ ಪ್ರಕರಣಗಳು, ಸಿವಿಲ್ ಹಾಗೂ ಖಾಯಂ ಜನತಾ ನ್ಯಾಯಾಲಯದಲ್ಲಿನ ಪ್ರಕರಣಗಳು ಸೇರಿದಂತೆ ರಾಜಿಯಾಗಬಹುದಾದ ವಿವಿಧ ಪ್ರಕರಣಗಳನ್ನು ಕಕ್ಷಿದಾರರು ಹಾಗೂ ವಕೀಲರ ಸಹಕಾರದೊಂದಿಗೆ ಸಂಧಾನದ ಮೂಲಕ ಇತ್ಯರ್ಥಪಡಿಸಲಾಗುವುದು ಎಂದು ವಿವರಿಸಿದರು.

ವಿಚ್ಛೇದನಕ್ಕೆ ಸಂಬಂಧಿಸಿದ ಪ್ರಕರಣಗಳನ್ನು ಹೊರತುಪಡಿಸಿ ಕುಟುಂಬ ನ್ಯಾಯಾಲಯಗಳಲ್ಲಿನ ಇತರೆ ವೈವಾಹಿಕ ಪ್ರಕರಣಗಳನ್ನೂ ಸಹ ಪರಸ್ಪರ ಒಪ್ಪಂದದ ಮೂಲಕ ಇತ್ಯರ್ಥಪಡಿಸಲು ಅವಕಾಶ ಕಲ್ಪಿಸಲಾಗುತ್ತದೆ. ನ್ಯಾಯಾಲಯದಲ್ಲಿ ಇನ್ನೂ ದಾಖಲಾಗದ ವ್ಯಾಜ್ಯ ಪೂರ್ವ ಪ್ರಕರಣಗಳನ್ನೂ ಲೋಕ ಅದಾಲತ್‌ನಲ್ಲಿ ಸಂಧಾನದ ಮೂಲಕ ಬಗೆಹರಿಸಿಕೊಳ್ಳಲು ಅವಕಾಶವಿದ್ದು, ಸಂಧಾನಕಾರರು ಸೂಚಿಸುವ ಪರಿಹಾರ ಎರಡೂ ಕಡೆಯವರಿಗೆ ಸಮ್ಮತವಾದರೆ ಮಾತ್ರ ರಾಜಿ ನಡೆಯುತ್ತದೆ ಎಂದು ಹೇಳಿದರು.

ಲೋಕ ಅದಾಲತ್‌ನಲ್ಲಿ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳುವುದರಿಂದ ಕಕ್ಷಿದಾರರ ಸಮಯ ಮತ್ತು ಹಣ ಉಳಿತಾಯವಾಗುವುದರ ಜೊತೆಗೆ ನ್ಯಾಯಾಲಯಗಳಿಗೆ ಪದೇ ಪದೇ ಅಲೆದಾಡುವ ಅಗತ್ಯ ಇರುವುದಿಲ್ಲ. ಪರಸ್ಪರ ರಾಜಿಯಿಂದ ವಿವಾದಗಳು ಅಂತ್ಯಗೊಳ್ಳುವುದರಿಂದ ಸಂಬಂಧಗಳು ಉಳಿಯುತ್ತವೆ, ವೈಮನಸ್ಸು ಮತ್ತು ಭಿನ್ನಾಭಿಪ್ರಾಯಗಳು ಕಡಿಮೆಯಾಗುತ್ತವೆ ಹಾಗೂ ಸಮಾಜದಲ್ಲಿ ಸೌಹಾರ್ದತೆ ಮತ್ತು ಶಾಂತಿಯ ವಾತಾವರಣ ನಿರ್ಮಾಣವಾಗುತ್ತದೆ ಎಂದು ತಿಳಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವು ವರ್ಷಪೂರ್ತಿ ರಾಜಿ ಪಂಚಾಯಿತಿ ಹಾಗೂ ಮಧ್ಯಸ್ಥಿಕೆ ಕೇಂದ್ರಗಳ ಮೂಲಕ ವ್ಯಾಜ್ಯ ಪೂರ್ವ ಹಾಗೂ ನ್ಯಾಯಾಲಯಗಳಲ್ಲಿ ಬಾಕಿ ಇರುವ ರಾಜಿಯಾಗಬಹುದಾದ ಪ್ರಕರಣಗಳನ್ನು ಇತ್ಯರ್ಥಪಡಿಸುವ ಕಾರ್ಯವನ್ನು ನಿರಂತರವಾಗಿ ನಡೆಸುತ್ತಿದೆ. ಸಾರ್ವಜನಿಕರು ಯಾವುದೇ ಸಮಸ್ಯೆ ಎದುರಾದಾಗ ಮೊದಲಿಗೆ ಸಂಬಂಧಪಟ್ಟ ಇಲಾಖೆಯ ಸಕ್ಷಮ ಪ್ರಾಧಿಕಾರಗಳನ್ನು ಸಂಪರ್ಕಿಸಿ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಬೇಕು. ಅಲ್ಲಿಯೂ ಸಮಸ್ಯೆ ಬಗೆಹರಿಯದಿದ್ದರೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಧ್ಯಸ್ಥಿಕೆ ಕೇಂದ್ರ ಅಥವಾ ತಾಲ್ಲೂಕು ಕಾನೂನು ಸೇವಾ ಸಮಿತಿಗಳನ್ನು ಸಂಪರ್ಕಿಸಿ ಉಚಿತ ಕಾನೂನು ನೆರವು ಹಾಗೂ ಮಾರ್ಗದರ್ಶನ ಪಡೆಯಬಹುದು ಎಂದು ತಿಳಿಸಿದರು.

ಸಾರ್ವಜನಿಕರ ಸಮಸ್ಯೆಗಳನ್ನು ಬೆಳಕಿಗೆ ತರುವಲ್ಲಿ ಮಾಧ್ಯಮಗಳ ಪಾತ್ರವೂ ಮಹತ್ವದ್ದಾಗಿದ್ದು, ಯಾವುದೇ ಇಲಾಖೆ ಸಾರ್ವಜನಿಕರ ಅಹವಾಲುಗಳಿಗೆ ಸ್ಪಂದಿಸದಿದ್ದರೆ ಅದರ ಬಗ್ಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಮಾಹಿತಿ ನೀಡುವಂತೆ ಮಾಧ್ಯಮ ಪ್ರತಿನಿಧಿಗಳಿಗೆ ಅವರು ಮನವಿ ಮಾಡಿದರು.

ಜುಲೈ 11ರಂದು ನಡೆಯುವ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಸಾರ್ವಜನಿಕರು ಮುಂಚಿತವಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಥವಾ ಸಂಬಂಧಪಟ್ಟ ತಾಲ್ಲೂಕು ಕಾನೂನು ಸೇವಾ ಸಮಿತಿಗಳನ್ನು ಸಂಪರ್ಕಿಸಿ ಅಗತ್ಯ ಮಾಹಿತಿ ಪಡೆದುಕೊಳ್ಳಬಹುದಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶಿಲ್ಪ ಅವರು ಉಪಸ್ಥಿತರಿದ್ದರು

# ಸಮಾಜಕ್ಕೆ ಪತ್ರಕರ್ತರ ಸೇವೆ ಅನನ್ಯ: ಮಲ್ಲಪ್ಪ ಸೊನ್ನದ



• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ

ಜನರ ಸಮಸ್ಯೆಗಳ ಕುರಿತು ವರದಿ ಮಾಡುವ ಮೂಲಕ ಪತ್ರಕರ್ತರು ಸಮಾಜದ ಬೆನ್ನೆಲುಬಾಗಿದ್ದಾರೆ. ವೈಯುಕ್ತಿಕ ಜೀವನ ಬದಿಗಿಟ್ಟು ನಿತ್ಯ ಕೆಲಸ ಮಾಡುತ್ತಾರೆ. ಅವರ ಸೇವೆ ಅನನ್ಯ ಎಂದು ಪಂಚಾಯತ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ತಾಲೂಕಾಧ್ಯಕ್ಷ ಮಲ್ಲಪ್ಪ ಸೊನ್ನದ ನುಡಿದರು. ಪಟ್ಟಣದ ತಾಲೂಕ ಪಂಚಾಯತ ಸಭಾಂಗಣದಲ್ಲಿ ಬುಧವಾರ ತಾಲೂಕ ಪಂಚಾಯತ ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಪತ್ರಿಕಾ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪತ್ರಕರ್ತರು ಸಮಾಜಮುಖಿ ಕೆಲಸ ಮಾಡುವ ಮೂಲಕ ದೇಶದ ಬೆಳವಣಿಗೆ ಹಾಗೂ ಅಭಿವೃದ್ಧಿಗೆ ಸಹಕಾರ ನೀಡುತ್ತಿದ್ದಾರೆ. ವಿವಿಧ ಇಲಾಖೆಗಳು ನಡೆಸುತ್ತಿರುವ ಕಳಪೆ ಕಾಮಗಾರಿ ಹಾಗೂ ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ ಸುದ್ದಿಗಳನ್ನು ಬಿತ್ತರಿಸುವ ಮಲಕ ಅಧಿಕಾರಿಗಳನ್ನು ಎಚ್ಚರಿಸುತ್ತಿರುವ ಕಾರ್ಯ ಶ್ಲಾಘನೀಯ ಎಂದರು.

ಸಹಾಯಕ ನಿರ್ದೇಶಕ ಸಂತೋಷ ಹತ್ತಿರಗಿ ಮಾತನಾಡಿ, ಸಾರ್ವಜನಿಕ ಜೀವನದಲ್ಲಿ ಪತ್ರಿಕೆಗಳ ಪಾತ್ರ ಬಹಳ ಮುಖ್ಯವಾಗಿದೆ, ಪ್ರತಿಯೊಬ್ಬರು ದಿನ ನಿತ್ಯ ಪತ್ರಿಕೆ ಓದುವುದರಿಂದ ಪ್ರಚಲಿತ ವಿದ್ಯಮಾನಗಳ ಬಗ್ಗೆ ಮಾಹಿತಿ ಸಿಗುತ್ತದ್ದೆ, ನಾನು ವಿದ್ಯಾರ್ಥಿ ಜೀವನದಲ್ಲಿ ಅನೇಕ ಪತ್ರಿಕೆ ಓದುತ್ತಿದ್ದೆ ಇದರಿಂದ ನಾನು ಸರ್ಕಾರಿ ನೌಕರಿ ಪಡೆಯಲು ಸಹಕಾರಿಯಾಗಿದೆ ಎಂದರು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕಾಧ್ಯಕ್ಷ ಕೃಷ್ಣ ಪಂಚಾಳ ಮಾತನಾಡಿ, ಪತ್ರಿಕೆಗಳು ಮತ್ತು ಮಾಧ್ಯಮಗಳು ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾಗಿ ಜನಸಾಮಾನ್ಯರ ಧ್ವನಿಯಾಗಿ ಕಾರ್ಯನಿರ್ವಹಿಸುತ್ತವೆ. ಸಮಾಜದಲ್ಲಿನ ತಪ್ಪುಗಳನ್ನು ಎತ್ತಿ ತೋರಿಸುವ ಮೂಲಕ ಮತ್ತು ಜನರಿಗೆ ಜಾಗೃತಿ ಮೂಡಿಸುವ ಮೂಲಕ ಸರ್ಕಾರ ಹಾಗೂ ಸಮಾಜದ ನಡುವೆ ಕೊಂಡಿಯಾಗಿ ಕೆಲಸ ಮಾಡುತ್ತವೆ. ಸಮಾಜದ ಹಾಗೂ ಸತ್ಯದ

ಹಾದಿಯಲ್ಲಿ ದುಡಿಯುತ್ತಿರುವ ಪತ್ರಕರ್ತರನ್ನು ಗುರುತಿಸಿ ಸನ್ಮಾನಿಸಿದ ತಾಲೂಕು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳವರ ಸಂಘಕ್ಕೆ ನಮ್ಮ ಪತ್ರಕರ್ತ ಸಂಘದ ವತಿಯಿಂದ ಕೃತಜ್ಞತೆಗಳು ಸಲ್ಲಿಸುತ್ತೇನೆ ಎಂದರು. ಹುಮನಾಬಾದ ತಾಲೂಕಾಧ್ಯಕ್ಷ ಸಂಜೀವಕುಮಾರ ಜುನ್ನಾ, ದುರ್ಯೋಧನ ಹೂಗಾರ್, ರಾಜಕುಮಾರ ಆರ್. ಹಡಪದ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಮುಸ್ತಫಾ ಖಾದ್ರಿ, ಗುಂಡು ಅತಿವಾಳ, ಮೋಹಿಯೋದ್ದೀನ ಲಾಥೋಡಿ, ವಿದ್ಯಾಸಾಗರ ಕಟ್ಟಿಮನಿ, ಮಂಜುನಾಥ ಚಿಂತಕೋಟಿ, ಅಬ್ದುಲ್ ಖದೀರ್ ಲಶ್ಕೇರಿ, ಸಜೀಶ ಲಂಬುನೂರ್, ಪ್ರಶಾಂತ ಹೊಸಮನಿ, ಸಲ್ಲಾವುದ್ದೀನ ಸಿದ್ಧಿಖಿ, ಅನೀಲಕುಮಾರ ಸಿಂಧೆ, ಸಂಗಮೇಶ ಜವಾದಿ, ತಾ.ಪಂ. ಪ್ರಥಮ ದರ್ಜೆ ಸಹಾಯಕ ಪ್ರಕಾಶ ರೆಡ್ಡಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾದ ವಿಜಯಕುಮಾರ ಚಾಂಗಲೇರಾ, ಬಸವರಾಜ ಗುಗ್ಗರಿ, ಅಮೃತರಾವ ಮರಕಲ, ರಾಜಕುಮಾರ್ ಪಂಚಾಳ, ಪ್ರವೀಣ ಮಠಪತಿ, ಸವಿತಾಬಾಯಿ ಭಯ್ಯಾ, ಸಂಧ್ಯಾರಾಣಿ ಧುಮಳೆ ಸೇರಿದಂತೆ ತಾ.ಪಂ. ಗ್ರಾ.ಪಂ. ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಮನ್ನಾಖೇಳ್ಳಿ ಪಿಡಿಒ ಭಾಗ್ಯಜ್ಯೋತಿ ಸರ್ವರನ್ನು ಸ್ವಾಗತಿಸಿದರು. ಚಾಂಗಲೇರಾ ಪಿಡಿಒ ಸುಶಾಂತಕುಮಾರ ಕಾರ್ಯಕ್ರಮವನ್ನು ನಿರೂಪಿಸಿ, ವಂದಿಸಿದರು.

# ಮೊಬೈಲ್ ಬಿಡಿ ಪುಸ್ತಕ ಹಿಡಿ



• ಮಲ್ಲಮ್ಮ ನುಡಿ ವಾರ್ತೆಬಸವಕಲ್ಯಾಣ

ಇಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜ ಹಾಗೂ ಬಾಲಕರ ಪ್ರೌಢ ಶಾಲೆಯ ವಿಭಾಗದಲ್ಲಿ ಮೋಬೈಲ್ ಬಿಡಿ– ಪುಸ್ತಕ ಹಿಡಿ ಎಂಬ ಕಾರ್ಯಕ್ರಮವನ್ನು ಶ್ರೀ ಬಸವೇಶ್ವರ ಮಹಾವಿದ್ಯಾಲಯ ಸಹಾಯಕ ಪ್ರಾಧ್ಯಾಪಕರಾದ ಡಾ ಬಸವರಾಜ ಖಂಡಾಳೆ ಉದ್ಘಾಟಿಸಿ ಮಾತನಾಡಿ ಮೋಬೈಲ್ ಬಿಡಬೇಕಾದ ಕಾಳಜಿ ಮೊದಲು ಪಾಲಕರು ಕೈ ಹಿಡಿಯಬೇಕು ಎರಡನೇ ಜವಾಬ್ದಾರಿ ಶಿಕ್ಷಕರದಿದೆ ಎಂದರು.

ಶ್ರೀ ಬಸವೇಶ್ವರ ಕಾಲೇಜಿನ ಉಪನ್ಯಾಸಕರಾದ ವಿಠ್ಠಲ ರೆಡ್ಡಿ ಮಾತನಾಡಿ ಶಾಲೆಯ ವಿದ್ಯಾರ್ಥಿಗಳು ಮೋಬೈಲ್ ಬಿಟ್ಟು ಪುಸ್ತಕ ಹಿಡಿದು ಓದುವುದರಿಂದ ನಿಮ್ಮ ಕನಸುಗಳು ಈಡೇರುತ್ತವೆ. ಇದರಿಂದ ಸಂಸ್ಕಾರದ ಜೊತೆಗೆ ಉತ್ತಮ ವ್ಯಕ್ತಿತ್ವ ಬೆಳೆಸಿಕೊಳ್ಳಬಹುದು ಎಂದರು. ಅಧ್ಯಕ್ಷತೆ ಉಪ ಪ್ರಾಂಶುಪಾಲರಾದ ಅನೀತಾ ಸಾವಳ್ಕರ ಮಾತನಾಡಿ ಗ್ರಂಥಾಲಯಗಳು ಹಾಗೂ ವಿದ್ಯಾರ್ಥಿಗಳು ಜೀವನ ರೂಪಿಸುವ ಕೇಂದ್ರಗಳಾಗಿವೆ .ಮೋಬೈಲ್ ಬಿಡಿ ಪುಸ್ತಕ ಹಿಡಿರಿ ಎಂದರು.

ಮುಖ್ಯ ಅತಿಥಿ ಉದ್ಧವರಾವ ಉಪಾಸೆ, ಪರವೇಜ ಮೋಮಿನ, ಮಲ್ಲಿಕಾರ್ಜುನ ರೆಡ್ಡಿ. ಈ ಸಂದರ್ಭದಲ್ಲಿ ರಾಜೇಂದ್ರ ಟಿಳೆ,ಎಂಡಿ ಶರೀಫ್, ರಫಿಯೊದ್ದಿನ್,ಸಂಜೀವ ಸೂರ್ಯವಂಶಿ,ಪ್ರವೀಣ್ ಸೋಮವಂಶಿ, ಸುಜಾತಾ ಖೈರಟಕರ್,ವಿಜಯಾ ಜಾಧವ್,ನಾಜೀಯಾ,ಹಮೀದಾ ಪಠಾಣ್, ವೀರಭದ್ರಪ್ಪ,ಮಂಜುಳಾ,ಅಲ್ಕಾ ಮಠಪತಿ , ಸುನೀತಾ ಕುಪ್ಪೆ ,ವಿಶಾಲ. ಬಸವ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಶೋಭಾ ಮಠಪತಿ ಸ್ವಾಗತಿಸಿದರು, ಡಾ ಸಂಜೀವಕುಮಾರ ನಡುಕರ ನಿರೂಪಿಸಿದರು. ಎಂ ಡಿ ಲತೀಫ್ ವಂದಿಸಿದರು.

# ಗ್ರಾಮೀಣ ಭಾರತಕ್ಕೆ ಬ್ಯಾಂಕಿಂಗ್ ಸೇವೆ ತಲುಪಿಸುವಲ್ಲಿ ಎಸ್. ಬಿ. ಐ. ಪಾತ್ರ ಮಹತ್ವದ್ದು : ರಾಘವೇಂದ್ರ



• ಮಲ್ಲಮ್ಮ ನುಡಿ ವಾರ್ತೆಬಸವನಬಾಗೇವಾಡಿ

ದೇಶದ ಅತಿದೊಡ್ಡ ಸಾರ್ವಜನಿಕ ವಲಯದ ಬ್ಯಾಂಕ್ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ತನ್ನ 71 ನೇ ಸಂಸ್ಥಾಪನಾ ದಿನವನ್ನು ಪಟ್ಟಣದ ಬಸವೇಶ್ವರ ದೇವಸ್ಥಾನ ಪಕ್ಕದ ಶಾಖೆಯಲ್ಲಿ ಸಂಭ್ರಮದಿಂದ ಆಚರಿಸಿತು.

1955 ರ ಜುಲೈ 1 ರಂದು ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾವನ್ನು ರಾಷ್ಟ್ರೀಕರಣಗೊಳಿಸಿ ಎಸ್. ಬಿ. ಆಯ್ ಸ್ಥಾಪಿಸಲಾಯಿತು. ಶಾಖೆಯಲ್ಲಿ ಧ್ವಜಾರೋಹಣ ಮತ್ತು ಗ್ರಾಹಕ ಸಂವಾದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಶಾಖಾ ಪ್ರಬಂಧಕ ರಾಘವೇಂದ್ರ ಮರಿಯಪ್ಪ ಕಟ್ಟಿ ಮಾತನಾಡಿ, 71 ವರ್ಷಗಳಲ್ಲಿ ಬ್ಯಾಂಕ್ 22,500 ಕ್ಕೂ ಹೆಚ್ಚು ಶಾಖೆಗಳ ಮೂಲಕ 50 ಕೋಟಿ ಗ್ರಾಹಕರಿಗೆ ಸೇವೆ ನೀಡುತ್ತಿದೆ.ಸ್ವಾತಂತ್ರ್ಯದ ನಂತರ ಗ್ರಾಮೀಣ ಭಾರತಕ್ಕೆ ಬ್ಯಾಂಕಿಂಗ್ ಸೇವೆ ತಲುಪಿಸುವಲ್ಲಿ ಎಸ್. ಬಿ. ಆಯ್ ಮಹತ್ವದ ಪಾತ್ರ ವಹಿಸಿದೆ.ಪ್ರಸ್ತುತ ದೇಶದ ಒಟ್ಟು ಠೇವಣಿಯಲ್ಲಿ ಶೇ.23 ರಷ್ಟು ಪಾಲು ಹೊಂದಿದ್ದು, ಆಸ್ತಿ ಗಾತ್ರದಲ್ಲಿ ಜಾಗತಿಕ 43 ನೇ ಸ್ಥಾನದಲ್ಲಿದೆ.

ಬ್ಯಾಂಕಿನ 2.5 ಲಕ್ಷಕ್ಕೂ ಹೆಚ್ಚು ಉದ್ಯೋಗಿಗಳು ದೇಶ ಸೇವೆಯೇ ಮೊದಲು ಎಂಬ ಧ್ಯೇಯವಾಕ್ಯದೊಂದಿಗೆ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಸಿಬ್ಬಂದಿ ಪ್ರತಿಜ್ಞೆ ಮಾಡಿದರು.ನಂತರ ಸಿಬ್ಬಂದಿಗಳು ಹಾಗೂ ಗ್ರಾಹಕರಿಗೆ ಸಿಹಿ ಹಂಚಲಾಯಿತು. ಈ ಸಂದರ್ಭದಲ್ಲಿ ಸಿಬ್ಬಂದಿಗಳಾದ ವಿಕ್ರಮ ಗೊಂಗಡಿ, ಶೀತಲ್ ಚನ್ನಗೊಂಡ, ಹಣಮಂತ ಮ್ಯಾಗೇರಿ, ಬಸವರಾಜ್ ಬಶೆಟ್ಟಿ, ರಶೀಕಾ ಕುಲಕರ್ಣಿ, ಮಧು ಕನಕೊಂಡ ಸೇರಿದಂತೆ ಅನೇಕರು ಇದ್ದರು.

# ಅಪಾಯದ ನಡುವೆಯೂ ಮೋಜು ಮಸ್ತಿ ಮಾಡುವ ಪ್ರವಾಸಿಗರು

ನಾಗರಾಜ ಮಂಜಗುಣಿ

• ಮಲ್ಲಮ್ಮ ನುಡಿ ವಾರ್ತೆಗೋಕರ್ಣ



ಕರಾವಳಿ ಭಾಗದಿಂದ ನಿರಂತರ ಮಳೆ ಸು–ರಿಯುತ್ತಿದ್ದು, ಸಾಂಪ್ರದಾಯಿಕ ಮೀನುಗಾರರು ಮತ್ತು ಪ್ರವಾಸಿಗರು ನೀರಿಗಿಳಿಯದಂತೆ ಜಲಾಡಳಿತ ನಿಷೇಧ ಹೇರಿದೆ ಆದರೆ ಯಾವ ನಿಷೇಧಕ್ಕೂ ಕ್ಯಾರೆ ಅನ್ನದ ಪ್ರವಾಸಿಗರು ಬಂಡೆಯ ಮೇಲಿನ ಪೋಟೋ ತೆಗೆಸಿಕೊಳ್ಳುತ್ತಿರುವ ಸನ್ನಿವೇಶ ನಿಜಕ್ಕೂ ನೋಡಿದವರಿಗೆ ಭಯ ಹುಟ್ಟಿಸಿದಂತಿದೆ.

ತದಡಿ ಬೇಲೆಕಾನದ ಅಳವೆ ಆಂಜನೇಯ ದೇವಸ್ಥಾನದ ಕೆಳಗಡೆಯ ಬೀಚ್‌ನಲ್ಲಿ ನಾಲ್ವರು ಪ್ರವಾಸಿಗರು ನೀರಿನಲ್ಲಿ ಮೋಜು ಮಸ್ತಿ ಮಾಡುತ್ತಿದ್ದರು. ಕಲ್ಲಿನ ಮೇಲೆ ನಿಂತು ವಿವಿಧ ಭಂಗಿಯಲ್ಲಿ ನಿಂತು ಫೋಟೋ ತೆಗೆಸಿಕೊಳ್ಳುವಲ್ಲಿ ಮಗ್ನರಾಗಿದ್ದಾರೆಯೇ ವಿನಃ ನೀರಿನಿಂದ ಉಂಟಾಗುವ ಅಪಾಯದ ಬಗ್ಗೆ ಸ್ವಲ್ಪಾವೂ ಗಮನ ಹರಿಸಿಲ್ಲ.

ಇವರ ಬೇಜವಾಬ್ದಾರಿಯ ಮೋಜನ್ನು ಕಂಡ ಹೆಲ್ಪ್‌ಗಾರ್ಡ ಆಗಮಿಸಿ ಅವರನ್ನು ವಾಪಸ್ಸು ಬರುವಂತೆ ಸಿಗ್ನಲ್ ಮಾಡಿದರು ಆದರೂ ಕೂಡಾ ತಮ್ಮ ಈ ಮೋಜು ಮಸ್ತಿ ಮುಂದುವರೆಸಿದ್ದರಿಂದ ಹೆಲ್ಪ್‌ಗಾರ್ಡ ಅವರನ್ನು ತರಾಟೆಗೆ ತೆಗೆದುಕೊಂಡು ಇಲ್ಲಿಯ ಅಪಾಯವನ್ನು ವಿವರಿಸಿ ಮೇಲೆ ಬರುವಂತೆ ತಿಳಿಸಿ ನಂತರ ಅಲ್ಲಿಂದ ವಾಪಸ್ಸು ತೆರಳಿದರು.

# ಶಾಂತಿವರ್ಧಕ ಪಿಯು ಕಾಲೇಜಿನಿಂದ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ಜಾಗೃತಿ ಜಾಥಾ

• ಮಲ್ಲಮ್ಮ ನುಡಿ ವಾರ್ತೆ ಕಮಲನಗರ



ಪಟ್ಟಣದ ಪ್ರಮುಖ ಶಿಕ್ಷಣ ಸಂಸ್ಥೆಯಾದ ಶಾಂತಿವರ್ಧಕ ಪದವಿ ಪೂರ್ವ ಕಾಲೇಜಿನಲ್ಲಿ ಗುರುವಾರ ಭಾರತ ಚುನಾವಣಾ ಆಯೋಗದ ಆದೇಶದಂತೆ "ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ–2026" ರ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಬೃಹತ್ ಸಾರ್ವಜನಿಕ ಜಾಗೃತಿ ಜಾಥಾ ಅತ್ಯಂತ ಯಶಸ್ವಿಯಾಗಿ ಜರುಗಿತು.

ಪ್ರಜಾಪ್ರಭುತ್ವದ ಅಡಿಪಾಯವಾಗಿರುವ ಮತದಾನದ ಹಕ್ಕನ್ನು ಪ್ರತಿಯೊಬ್ಬ ಅರ್ಹ ನಾಗರಿಕನೂ ಪಡೆದುಕೊಳ್ಳಬೇಕು ಮತ್ತು ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಹಾಗೂ ತಿದ್ದುಪಡಿಗಳ ಕುರಿತು ಜನಸಾಮಾನ್ಯರಲ್ಲಿ ಅರಿವು ಮೂಡಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿತ್ತು.

ಈ ಮಹತ್ವದ ಜಾಗೃತಿ ಜಾಥಾಕ್ಕೆ ಕಾಲೇಜಿನ ಪ್ರಾಂಶುಪಾಲರಾದ ಓಂಕಾಂತ ಸೂರ್ಯವಂಶಿ ಅವರು ಚಾಲನೆ ನೀಡಿದರು. ಅವರ ಸಮರ್ಥ ನೇತೃತ್ವದಲ್ಲಿ ಹೊರಟ ಈ ಬೃಹತ್ ಮೆರವಣಿಗೆಯು ಕಾಲೇಜು ಆವರಣದಿಂದ ಆರಂಭಗೊಂಡು, ಕಮಲನಗರ ಪಟ್ಟಣದ ಪ್ರಮುಖ ರಸ್ತೆ ಹಾಗೂ ಮುಖ್ಯ ವೃತ್ತಗಳ ಮೂಲಕ ಸಾಗಿತು. ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರು ಜಾಗೃತಿ ಫಲಕಗಳನ್ನು ಪ್ರದರ್ಶಿಸುತ್ತಾ, ಘೋಷಣೆಗಳನ್ನು ಕೂಗುತ್ತಾ ಸಾರ್ವಜನಿಕರ ಗಮನ ಸೆಳೆದರು. ಮೆರವಣಿಗೆಯು ಅಂತಿಮವಾಗಿ ಇಲ್ಲಿನ ತಹಸಿಲ್ದಾರ್ ತಹಸಿಲ ಕಚೇರಿಯನ್ನು ತಲುಪಿ ಮುಕ್ತಾಯಗೊಂಡಿತು. ಈ ಜಾಗೃತಿ ಅಭಿಯಾನದಲ್ಲಿ ಕಾಲೇಜಿನ ಹಿರಿಯ ಉಪನ್ಯಾಸಕರುಗಳಾದ ಶರಣಗೌಡ ಪಾಟೀಲ್, ಕಾಳಿದಾಸ ಬೌದ್ದೆ, ನಾಗನಾಥ್ ಕೊಳ್ಳ, ಶ್ರೀಕಾಂತ್ ಪ್ಯಾಗೆ, ಶಿವಶಂಕರ್ ಕಾಂಬ್ಳೆ, ವೆಂಕಟ್ ಮೋರೆ, ಸಿದ್ದಪ್ಪ ಬಚಿಪಾಳ್ಳೆ, ಶಿವಶಂಕರ್ ವಾಡೆಕರ್, ಸುನಿಲ್ ಬಾರೊಳೆ, ಸುಭಾಷ್ ರಾಥೋಡ್, ಬಸವಂಬಿಕಾ ಚಿಮ್ಮಾ, ಅಶ್ವಿನಿ ಕಾಂಬಳೆ, ನಾಗನಾಥ್ ಬೆನಚಿಂಚೋಳೆ, ಯಲ್ಲಾಲಿಂಗ ಮೇತ್ರೆ, ಜಗನಾಥ್ ಪಾಟೀಲ್, ಚಂದ್ರಕಾಂತ್ ಬೈರೆ, ವಿಜಯಲಕ್ಷ್ಮಿ ಶಾಪೂರೆ ಸೇರಿದಂತೆ ಕಾಲೇಜಿನ ಇತರೆ ಬೋಧಕ, ಬೋಧಕೇತರ ಸಿಬ್ಬಂದಿ ವರ್ಗದವರು ಹಾಗೂ ನೂರಾರು ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# ಅಕ್ಷರಾಭ್ಯಾಸಕ್ಕೆ ಚಾಲನೆ

• ಮಲ್ಲಮ್ಮ ನುಡಿ ವಾರ್ತೆ ಹುಣಸೂರು



ಜು,02; ಎಲ್.ಕೆ.ಜಿ ಮತ್ತು ಯು.ಕೆ.ಜಿ ಮಕ್ಕಳಿಗೆ ತಟ್ಟೆಯಲ್ಲಿ ಅಕ್ಕಿ ಹಾಕಿ ಅರಿಶಿನ ಕೊಂಬಿನ ಮೂಲಕ ಓಂ ಎಂಬ ಪದಗಳನ್ನು ಚಿಕ್ಕಮಕ್ಕಳ ಕೈಹಿಡಿಸಿ ಬರೆಸಿ ಅಂಗ್ಲ ಮಾಧ್ಯಮ ಶಾಲೆಗೆ ಶಾಸಕ ಜಿಟಿ ಹರೀಶ್ ಗೌಡ ಅವರ ಪತ್ನಿ ವರ್ಷಾ ಹರೀಶಗೌಡ ಚಾಲನೆ ನೀಡಿದರು.

ತಾಲ್ಲೂಕಿನ ಮೂಕನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ರಾಜ್ಯ ಸರ್ಕಾರದ ಅದೇಶದಂತೆ ಎಲ್.ಕೆ.ಜಿ ಮತ್ತು ಯು.ಕೆ.ಜಿ ತರಗತಿಯ ಪ್ರಾರಂಭಕ್ಕೆ ಚಾಲನೆ ನೀಡಿ ಮಾತನಾಡಿದವರು ನಮ್ಮ ಸರ್ಕಾರಿ ಶಾಲೆಗಳಲ್ಲಿ ಖಾಸಗಿ ಶಾಲೆಗಳಿಗಿಂತ ಗುಣಮಟ್ಟದ ಶಿಕ್ಷಣ ದೊರಕುವುದರ ಜೊತೆಗೆ ಉತ್ತಮ ಸಂಸ್ಕರವನ್ನು ನಮ್ಮ ಮಕ್ಕಳಲ್ಲಿ ಕಲಿಸಿ ಬೆಳೆಸುತ್ತಾರೆ ಅದ್ದ–ರಿಂದ ಪೋಷಕರು ಖಾಸಗಿ ಶಾಲೆಯ ವ್ಯಮೋಹಕ್ಕೆ ಒಳಗಾಗದೆ ಸರ್ಕಾರಿ ಶಾಲೆಗಳನ್ನು ಉಳಿಸಿ ಬೆಳೆಸಕೊಂಡು ಹೋಗಬೇಕು ಎಂದು ಪೋಷಕರಿಗೆ ಕೀವಿ ಮಾತು ಹೇಳಿದರು. ರಾಜ್ಯ ಕಾಂಗ್ರೆಸ್ ಮಹಿಳಾ ಪ್ರಧಾನ ಕಾರ್ಯದರ್ಶಿ ಹಾಗೂ ಮಡಿಲು ಸಂಸ್ಥೆಯ ಸಂಸ್ಥಾಪಕಿ ಹಾಗೂ ಸಮಾಜ ಸೇವಾಕಿ ಎಂ ತ್ರಿವೇಣಿ ಮಾತನಾಡಿ ಮಕ್ಕಳು ವಿದ್ಯಾಭಾಗ್ಯ ಕಲಿಯುವ ಜೊತೆಗೆ ಗುರು ಹಿರಿಯವರಿಗೆ ಗೌರವವನ್ನು ಕೊಡುವುದನ್ನು ಕಲಿಯಬೇಕು. ನಮ್ಮ ಕರ್ನಾಟಕ ಸರ್ಕಾರವೂ ಶಾಲೆಗಳ ಅಭಿವೃದ್ಧಿಗೆ ವಿವಿಧ ಯೋಜನೆಗಳನ್ನು ಜಾರಿಗೆ ತಂದು ಬಡಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತುಕೊಡುತ್ತಿದೆ, ಅದರಲ್ಲೂ ತುಂಬ ನುರಿತ ಶಿಕ್ಷಕರನ್ನು ನೇಮಿಸಿಕೊಂಡು ಪ್ರತಿ ವರ್ಷವೂ ಅವರುಗಳಿಗೆ ವಿವಿಧ ಬಗೆಯ ತರಬೇತಿಗಳನ್ನು ನೀಡುವುದರ ಮೂಲಕ ಅವರುಗಳಲ್ಲಿಯೂ ಕೂಡ ಗುಣಮಟ್ಟವನ್ನು ಹೆಚ್ಚಿಸುವ ಕಾರ್ಯಗಳು ಮಾಡುತ್ತಿದೆ.

ಪ್ರತಿ ಹಳ್ಳಿಗಳಲ್ಲೂ ಸರ್ಕಾರಿ ಶಾಲೆಗಳು ಆ ಹಳ್ಳಿಯ ಕೀರಿಟವಿದ್ದಂತೆ ಅದನ್ನು ಉಳಿಸಿ ಬೆಳೆಸಿಕೊಂಡು ನಮ್ಮ ಮುಂದಿನ ಮಕ್ಕಳ ಭವಿಷ್ಯವನ್ನು ರೂಪಿಸುವುದರ ಜೊತೆಗೆ ನಮ್ಮ ನೆಲ–ಜಲ, ಸಂಸ್ಕೃತಿ, ಧಾರ್ಮಿಕ ಅಚಾರ–ವಿಚಾರಗಳನ್ನು ನಮ್ಮ ಮಕ್ಕಳು ಮೈಗೂಡಿಸಿಕೊಳ್ಳಲು ವೇದಿಕೆಯನ್ನು ಸೃಷ್ಠಿ ಮಾಡಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲೆ ಇರುತ್ತದೆಂದರು.

ಈ ಸಂದರ್ಭದಲ್ಲಿ ಬಿ.ಆರ್.ಸಿ ಹೇಮಾಲತಾ, ಎಸ್.ಡಿ.ಎಂ.ಸಿ ಅಧ್ಯಕ್ಷ, ವಿ.ಎಸ್.ಎಸ್.ಎನ್ ಮಾಜಿ ಅಧ್ಯಕ್ಷ ಪಾಪಣ್ಣ, ಇ.ಸಿ.ಓ ಸುನೀಲ್ ಕುಮಾರ್, ಶಾಲೆಯ ಮುಖ್ಯ ಶಿಕ್ಷಕ ಕೇಶವಮೂರ್ತಿ, ಸಹಶಿಕ್ಷಕರು ಹಾಗೂ ಪೋಷಕರು ಗ್ರಾಮಸ್ಥರು ವಾಸೇಗೌಡ ಹಾಜರಿದ್ದರು.

# ಸಹಾಯಕ ಆಯುಕ್ತರ ಕಚೇರಿ ಹಿಂಭಾಗದ ಸಾರ್ವಜನಿಕ ಶೌಚಾಲಯಕ್ಕೆ ಬೀಗ: ನಿರ್ವಹಣೆ ಕೊರತೆಗೆ ಸಾರ್ವಜನಿಕರ ಆಕ್ರೋಶ

• ಮಲ್ಲಮ್ಮ ನುಡಿ ವಾರ್ತೆ ಲಿಂಗಸಗೂರ




ಪಟ್ಟಣದ ಸಹಾಯಕ ಆಯುಕ್ತರ ಕಚೇರಿ ಹಿಂಭಾಗದ ಕಾಂಪೌಂಡ್ ಒಳಭಾಗದಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ನಿರ್ಮಿಸಲಾಗಿರುವ ಸಾರ್ವಜನಿಕ ಶೌಚಾಲಯ ಇದೀಗ ನಿರ್ವಹಣೆ ಇಲ್ಲದೆ ಬೀಗ ಹಾಕಿದ ಸ್ಥಿತಿಯಲ್ಲಿ ಇರುವುದರಿಂದ ಸಾರ್ವಜನಿಕರಲ್ಲಿ ಅಸಮಾಧಾನ ವ್ಯಕ್ತವಾಗಿದೆ. ಕರ್ನಾಟಕ ಸರ್ಕಾರದ ಖಃಒ 2.0 ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಲಿಂಗಸೂಗೂರು ಪುರ ಸಭೆಯಿಂದ ನಿರ್ಮಾಣಗೊಂಡ ಈ ಶೌಚಾಲಯವು ಸಬ್ ರಜೀಸ್ಟ್ರಾರ್ ಕಚೇರಿ ಬರುವ ಜನರು, ಸಾರ್ವಜನಿಕರು ಹಾಗೂ ಸಿಬ್ಬಂದಿಗಳ ಬಳಕೆಗೆ ಅನುಕೂಲವಾಗಬೇಕಾಗಿತ್ತು. ಆದರೆ ಸಮರ್ಪಕ ನಿರ್ವಹಣೆ ಕೊರತೆ, ನೀರಿನ ವ್ಯವಸ್ಥೆಯ ಅಭಾವ ಮತ್ತು ಸ್ವಚ್ಛತೆ ಇಲ್ಲದ ಕಾರಣದಿಂದ ಶೌಚಾಲಯವನ್ನು ಬಂದ್ ಮಾಡಲಾಗಿದ್ದು, ಇದೀಗ ಉಪಯೋಗಕ್ಕೆ ಬಾರದಂತಾಗಿದೆ ಎಂದು ಸ್ಥಳೀಯರು ದೂರಿದ್ದಾರೆ.

ಸಾರ್ವಜನಿಕರ ತೆರಿಗೆ ಹಣ ಹಾಗೂ ಸರ್ಕಾರದ ಅನುದಾನದಲ್ಲಿ ನಿರ್ಮಿಸಲಾದ ಮೂಲಭೂತ ಸೌಲಭ್ಯ ಹೀಗೆ ನಿರ್ಲಕ್ಷ್ಯಕ್ಕೆ ಒಳಗಾಗಿರುವುದು ಪ್ರಶ್ನೆಗೆ ಕಾರಣವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು, ವಿಶೇಷವಾಗಿ ಸಹಾಯಕ ಆಯುಕ್ತರು, ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಶೌಚಾಲಯವನ್ನು ಸಾರ್ವಜನಿಕ ಬಳಕೆಗೆ ಮುಕ್ತಗೊಳಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

# ಎ. ವಸಂತಕುಮಾರ್‌ಗೆ ಸಚಿವ ಸ್ಥಾನ ನೀಡುವಂತೆ ಒತ್ತಾಯ

• ಮಲ್ಲಮ್ಮ ನುಡಿ ವಾರ್ತೆ ಲಿಂಗಸಗೂರ




ಜು.1 : ರಾಜ್ಯ ಸಚಿವ ಸಂಪುಟ ವಿಸ್ತರಣೆ ಹಿನ್ನೆಲೆಯಲ್ಲಿ. ಎ ವಸಂತ ಕುಮಾರ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಮಾದಿಗ ಸಮುದಾಯದ ಮುಖಂಡರು ಒತ್ತಾಯಿಸಿದರು. ಪಟ್ಟಣದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ದಲಿತ ಮುಖಂಡ ಹನುಮಂತಪ್ಪ ಕುಣೆಕೆಲ್ಲೂರು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಸಾಮಾಜಿಕ ನ್ಯಾಯದ ತತ್ವದಡಿ ಕಾರ್ಯನಿರ್ವಹಿಸುತ್ತಿದ್ದು, ಈ ಬಾರಿ ಸಚಿವ ಸಂಪುಟ ವಿಸ್ತರಣೆಯಲ್ಲಿ ಮಾದಿಗ ಸಮುದಾಯಕ್ಕೆ ಸೂಕ್ತ ಪ್ರತಿನಿಧಿತ್ವ ಕಲ್ಪಿಸಬೇಕು ಎಂದು ಆಗ್ರಹಿಸಿದರು. ಕಲ್ಯಾಣ ಕರ್ನಾಟಕ ಭಾಗದಲ್ಲಿ ಐದು ಮೀಸಲು ವಿಧಾನಸಭಾ ಕ್ಷೇತ್ರಗಳಿದ್ದರೂ, ಮಾದಿಗ ಸಮುದಾಯಕ್ಕೆ ಸಮರ್ಪಕ ರಾಜಕೀಯ ಅವಕಾಶ ದೊರೆಯುತ್ತಿಲ್ಲ. ಈ ಹಿನ್ನಲೆಯಲ್ಲಿ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ, ಕೆಪಿಸಿಸಿ ರಾಜ್ಯ ಕಾರ್ಯಾಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯರಾಗಿರುವ ಎ. ವಸಂತಕುಮಾರ್ ಅವರಿಗೆ ಸಚಿವ ಸ್ಥಾನ ನೀಡಿ ಸಮುದಾಯಕ್ಕೆ ನ್ಯಾಯ ಒದಗಿಸಬೇಕು ಎಂದು ಹೇಳಿದರು.ಎ. ವಸಂತಕುಮಾರ್ ಅವರು ಹಲವು ವರ್ಷಗಳಿಂದ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿ ಸೇವೆ ಸಲ್ಲಿಸಿದ್ದು, ವಿವಿಧ ರಾಜ್ಯಗಳ ಚುನಾವಣೆಯಲ್ಲಿ ಪಕ್ಷದ ಪರವಾಗಿ ಸಮರ್ಥ ಸಂಘಟಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಅಲ್ಲದೆ ಕಾಂಗ್ರೆಸ್ ಪಕ್ಷದ ಜಿಲ್ಲಾ ಮಟ್ಟದ ಸಂಘಟನೆಯನ್ನು ಬಲಪಡಿಸುವಲ್ಲಿ ಮಹತ್ವದ ಪಾತ್ರವಹಿಸಿದ್ದಾರೆ ಎಂದು ತಿಳಿಸಿದರು.ರಾಯಚೂರು ಜಿಲ್ಲೆ ಸೇರಿದಂತೆ ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ ಅವರ ಆಡಳಿತಾತ್ಮಕ ಅನುಭವ ಹಾಗೂ ಸಂಘಟನಾ ಸಾಮರ್ಥ್ಯ ಉಪಯೋಗವಾಗಲಿದೆ. ಆದ್ದರಿಂದ ಅವರಿಗೆ ಸಚಿವ ಸ್ಥಾನ ನೀಡುವುದರ ಜೊತೆಗೆ ಸಮಾಜ ಕಲ್ಯಾಣ ಇಲಾಖೆಯ ಜವಾಬ್ದಾರಿ ನೀಡಬೇಕು ಎಂದು ಸರ್ಕಾರ ಹಾಗೂ ಪಕ್ಷದ ಹೈಕಮಾಂಡ್‌ಗೆ ಮನವಿ ಮಾಡಿದರು.ಸುದ್ದಿಗೋಷ್ಠಿಯಲ್ಲಿ ದುರಗಪ್ಪ ಅಗ್ರಹಾರ, ಆನಂದ್ ಪೇಂಟರ್, ಮೋಹನ್ ಗೋಸ್ಲೆ , ಮೌನೇಶ ಐದನಾಳ, ಆಂಜನೇಯ ಭಂಡಾರಿ, ಚಂದ್ರಶೇಖರ ಗೊರೇಬಾಳ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಕರ್ನಾಟಕ ಸರ್ಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಚೇರಿ, ಪ್ರಾದೇಶಿಕ ಉಪ–ವಿಭಾಗ, ಬಸವಕಲ್ಯಾಣ
ತ್ರಿಪುರಾಂತ, ಖೂಬಾ ಕಾಲೇಜು ಹತ್ತಿರ, ಬಸವಕಲ್ಯಾಣ ಜಿಲ್ಲೆ: ಬೀದರ

ಸಂಖ್ಯೆ: KFD-BDRD0A1(BGT)/3/2022-(E-687296) ದಿನಾಂಕ: 30.06.2026

ಟೆಂಡರ್ ಪ್ರಕಟಣೆ (ಇ–ಪ್ರೋಕ್ಯೂರಮೆಂಟ್ ಮೂಲಕ)

2026–27ನೇ ಸಾಲಿನಲ್ಲಿ ವಿವಿಧ ಯೋಜನೆಯಡಿ ಮುಂಗಡ ಕಾಮಗಾರಿ ಮತ್ತು ಮಾನ್ಸೂನ್ ನೆಡುತೋಪು ನಿರ್ಮಾಣ ಕಾಮಗಾರಿಗಳನ್ನು ನಿರ್ವಹಿಸಲು ಈ ವಿಭಾಗದಲ್ಲಿ ನೊಂದಣಿಯಾದ ಅರಣ್ಯ ಗುತ್ತಿಗೆದಾರರಿಗೆ ಟೆಂಡರ್‌ನ್ನು ಇ–ಪ್ರೋಕ್ಯೂರಮೆಂಟ್ ಪೋರ್ಟಲ https://kppp.karnataka.gov.inನಲ್ಲಿ ಟೆಂಡರ್ ಕರೆಯಲಾಗಿದ್ದು, ಟೆಂಡರ ಬಿಡ್ ಸ್ವೀಕರಿಸುವ **ದಿನಾಂಕ: 07–07–2026 ರಂದು ಸಂಜೆ 4:00 ಗಂಟೆ** ಒಳಗಾಗಿ ಮತ್ತು ತಾಂತ್ರಿಕ ಟೆಂಡರ ಬಿಡ್ ತೆರೆಯುವ **ದಿನಾಂಕ: 08–07–2026 ರಂದು 4:30 ಗಂಟೆಯ ವರೆಗೆ,** ಮತ್ತು ಆರ್ಥಿಕ ಟೆಂಡರ ಬಿಡ್ ತೆರೆಯುವ **ದಿನಾಂಕ: 09–07–2026 ರಂದು 4:30 ಗಂಟೆಯ ವರೆಗೆ ನಿಗಧಿಪಡಿಸಲಾಗಿದೆ.** ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾ ದಿನಗಳನ್ನು ಹೊರತುಪಡಿಸಿ) ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ: 08482–226358/ ಮೊಬೈಲ್ ಸಂಖ್ಯೆ: 9535818193 ಗೆ ಸಂಪರ್ಕಿಸಿ ಮಾಹಿತಿಯನ್ನು ಪಡೆಯಬಹುದಾಗಿದೆ.

ಸಹಿ/–ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು,
ಪ್ರಾದೇಶಿಕ ಉಪ–ವಿಭಾಗ, ಬಸವಕಲ್ಯಾಣ.

ವಾ.ಸಾ.ಸಂ.ಇ/ಬೀದರ/76/ಕೆ.ಎಸ್.ಎಂ.ಸಿ.&ಎ/2026–27

# ಗ್ಯಾರಂಟಿ ಯೋಜನೆಗಳಿಂದ ಅಭಿವೃದ್ಧಿಗೆ ಹಿನ್ನಡೆ : ಶಾಸಕ ಶರಣಗೌಡ ಕಂದಕೂರ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಸರ್ಕಾರದಿಂದ ಸಮರ್ಪಕವಾಗಿ ಅನುದಾನ ಬಿಡುಗಡೆಯಾಗದೇ ಇರುವುದಿರಿಂದ ಹಳ್ಳಿಗಳಲ್ಲಿ ಮೂಲಸೌಕರ್ಯಗಳು ಸೇರಿದಂತೆ ಯಾವದೇ ಅಭಿವೃದ್ಧಿಗೆ ಸಹಕರಿಸಲಾಗುತ್ತಿದ್ದು, ಈ ಗ್ಯಾರಂಟಿ ಯೋಜನೆಗಳಿಂದ ಅಭಿವೃದ್ಧಿಗೆ ಹಿನ್ನಡೆಯಾಗುತ್ತಿದೆ ಎಂದು ಗುರುಮಠಕಲ್ ಶಾಸಕ ಶರಣಗೌಡ ಕಂದಕೂರ ಅಸಮಾಧಾನವ್ಯಕ್ತಪಡಿಸಿದರು.

ಗುರುಮಠಕಲ್ ಕ್ಷೇತ್ರದ ಗೋಪಾಳಪುರ ಗ್ರಾಮದಲ್ಲಿ ಕೆಕೆಆರ್ಡಿ ವತಿಯಿಂದ ಶಾಲಾ ತರಗತಿ ನಿರ್ಮಾಣ, ಚಿನ್ನಾಕಾರ ಗ್ರಾಮದಲ್ಲಿ ಕೆಕೆಆರ್ಡಿಬಿ ವತಿಯಿಂದ ಅಂಗನವಾಡಿ ಕಟ್ಟಡ 2 ನಿರ್ಮಾಣಕ್ಕೆ ಅಡಿಗಲ್ಲು ಬೆಟ್ಟದಳ್ಳಿ ಗ್ರಾಮದಲ್ಲಿ 15 ಲಕ್ಷ ರೂ. ವೆಚ್ಚದಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣ ಹಾಗೂ ಧರ್ಮಪುರತಾಂಡಾದಲ್ಲಿ 40 ಲಕ್ಷ ರೂ.ಗಳ ವೆಚ್ಚದಲ್ಲಿ ಸರ್ಕಾರಿ ಶಾಲೆಗೆ 2 ಕೋಣೆಗಳ ನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು.

ಬೆಟ್ಟದಳ್ಳಿಯಲ್ಲಿ ಗ್ರಾಮಸ್ಥರು ನಮಗೆ ಮೂರು ಬಾರಿ ಚುನಾವಣೆಯಲ್ಲಿ ಲೀಡ್ ಕೊಟ್ಟಿದ್ದೀರಿ. ಆದರೆ, ಕಳೆದ ಚುನಾವಣೆಯಲ್ಲಿ ನನ್ನ ಮೇಲೆ ಮುನಿಸಿಕೊಂಡಿರಿ. ಆದರೂ ಈ ಎತ್ತು ದುಡಿಯುವುದನ್ನು ನಿಲ್ಲಿಸಿಲ್ಲ. ಕ್ಷೇತ್ರದ ಅಭಿವೃದ್ಧಿಯೊಂದೆ ಪ್ರಮುಖ ಗುರಿಯಾಗಿ ಇಟ್ಟುಕೊಂಡು ನಾನು ಮುನ್ನಡೆಯುತ್ತಿದ್ದೇನೆ ಎಂದರು. ಕೆಲಸ ಮಾಡಿದ ವ್ಯಕ್ತಿಗೆ ಕಡಿಮೆ ಕೂಲಿ ಕೊಟ್ಟರೂ ನಾನು ದುಡಿಯುವುದನ್ನು ನಿಲ್ಲಿಸಿಲ್ಲ ಎಂದು ಶಾಸಕ ಕಂದಕೂರ ಮಾರ್ಮಿಕವಾಗಿ ನುಡಿದರು.

ಗೋಪಾಳಪುರ ಗ್ರಾಮ : ಜನರ ಕುಂದು ಕೊರತೆ ಆಲಿಸಿದ ಶಾಸಕರು, ಪ್ರತಿ ವರ್ಷ ನಮಗೆ ಸರ್ಕಾರದಿಂದ ಬರುವ ಅನುದಾನ ಬಿಡುಗಡೆಯಾಗಿ ಕಾಮಗಾರಿ ಆರಂಭಿಸಬೇಕಾದರೆ ಸ್ವಲ್ಪ ಸಮಯ ಹಿಡಿಯುತ್ತದೆ. ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿ ಗ್ರಾಮಕ್ಕೆ 10 ಲಕ್ಷ ರೂ.ಬಿಡುಗಡೆ ಮಾಡುವ ಬಗ್ಗೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ನವಾಬುರ್ಜ್–ಗೋಪಾಳಪುರ ರಸ್ತೆ ಸುಧಾರಣೆಗೆ ಮುಂದಿನ ದಿನಗಳಲ್ಲಿ ಕ್ರಮ ಕೈಗೊಳ್ಳಲಾಗುವುದು. ಗ್ರಾಮದಲ್ಲಿನ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಸರ್ಕಾರದಿಂದ ಅನುದಾನ ಬರಬೇಕಾದರೆ ಮೊದಲು ಟ್ರಸ್ಟ್ ಇರಬೇಕು. ಅಂದಾಗ ಮಾತ್ರ ಹಣ ಬಿಡುಗಡೆ ಮಾಡಿಸಬಹುದು ಎಂದರು.

ಕಲ್ಯಾಣ ಕರ್ನಾಟಕ ಭಾಗದಲ್ಲಿ 5 ಸಾವಿರ ಶಿಕ್ಷಕರ ನೇಮಕಾತಿಗೆ ಸರ್ಕಾರ ಮುಂದಾದರೆ ನಮ್ಮ ಕ್ಷೇತ್ರದಲ್ಲಿ ಶಿಕ್ಷಕರ ಸಮಸ್ಯೆ ನೀಗಲಿದೆ. 2015–16ರಲ್ಲಿ ಕೆರೆಗಳ ಹೂಳೆತ್ತಲು ಬಂದಿದ್ದ ಸುಮಾರು 5 ಕೋಟಿ ರೂ.ಗಳ ಅಧಿಕಾರಿ, ಜನಪ್ರತಿನಿಧಿಗಳು ಅನಾಮತ್ತಾಗಿ ಎತ್ತಿ ಹಾಕಿದ ಕಾರಣ ಮತ್ತೆ ಸರ್ಕಾರದಿಂದ ನಯಾಪೈಸೆ ಹಣ ಬಿಡುಗಡೆ ಮಾಡಿಲ್ಲ ಎಂದು ಹೇಳಿದರು.

ಚಿನ್ನಾಕಾರ ಗ್ರಾಮ : ಇಲ್ಲಿ ಸರ್ಕಾರಿ ಪ್ರಾಥಮಿಕ ಶಾಲಾ ಕಟ್ಟಡ ಸುಸಜ್ಜಿತವಾಗಿದ್ದು, ಇಡೀ ಕ್ಷೇತ್ತದಲ್ಲಿ ಇಂಥ ಕಟ್ಟಡವಿಲ್ಲ. ನಮ್ಮ ತಂದೆ ಶಾಸಕರಿದ್ದಾಗ ನಿರ್ಮಾಣವಾದ ಈ ಕಟ್ಟಡ ಉದ್ಘಾಟನೆಗೆ ಅನಿವಾರ್ಯವಾಗಿ ಅವರು ಬರಲು ಸಾದ್ಯವಾಗಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಗ್ರಾಮದ ದೊಡ್ಡ ಬೆಟ್ಟಕ್ಕೆ ಹೋಗುವ ರಸ್ತೆ ನಿರ್ಮಾಣ ಕಾಮಗಾರಿಗೆ ಸರ್ಕಾರ ಅನುಮೋದನೆ ನೀಡಿದೆ. ಜಿಪಂನಿಂದ ಮುಖ್ಯಮಂತ್ರಿಗಳು ಹಿಂದಿನ ಸಿಎಂ ಸಿದ್ದರಾಮಯ್ಯ 10 ಕೋಟಿ ರೂ.ಅನುದಾನ ನೀಡಿದ್ದರು. ಅದರಲ್ಲಿ ಮೂರು ಕೋಟಿ ಅನುದಾನ ಬಿಡುಗಡೆ–ಯಾಗಿದ್ದು, ಒಂದೆರಡು ವಾರಗಳಲ್ಲಿ ಕಾಮಗಾರಿ ಆರಂಭಿಸಲಾಗುವುದು.

ಕೆಕೆಆರ್ಡಿಬಿಯಿಂದ ಬರುವ ಅನುದಾನವನ್ನು ಪರಮೇಶಪಲ್ಲಿವರೆಗೂ ರಸ್ತೆ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುವುದು. ಸಾರ್ವಜನಿಕ ಶೌಚಗೃಹ ನಿರ್ಮಾಣ ಮಾಡಬಹುದು ಆದರೆ, ಮುಂದಿನ ದಿನಗಳಲ್ಲಿ ಯಾರು ನಿರ್ವಹಣೆ ಮಾಡಬೇಕು ಎಂಬ ಪ್ರಶ್ನೆ ಎಸುರಾಗುತ್ತದೆ. ಹೀಗಾಗಿ ವೈಯಕ್ತಿಕ ಶೌಚಗೃಹ ನಿರ್ಮಿಸಿಕೊಳ್ಳಲು ಮುಂದಾದರೆ ಒಳ್ಳೆಯದು ಎಂದು ಸಲಹೆ ಮಾಡಿದರು.

ಗ್ರಾಪಂನಲ್ಲಿ ಪಿಡಿಒಗಳು ಹಳ್ಳಿಗಳಲ್ಲಿ ಇರುವ ಸಣ್ಣಪುಟ್ಟ ಸಮಸ್ಯೆಗಳು ಬಗೆಹರಿಸಲು ಪ್ರಯತ್ನಿಸಬೇಕು. ಗ್ರಾಮದಲ್ಲಿ ಬೋರವೆಲ್ ಬೇಡಿ–ಕೆ ಇದೆ. ಆದರೆ, ಇಲ್ಲಿಂದಲೇ ಬೆಳೆದು ಹೋದವರು ನಮಗೆ ಅನುದಾನವನ್ನೇ ಕೊಡಲಿಲ್ಲ ಎಂದರು. ಕೆಕೆಆರ್ಡಿಬಿಯಿಂದ ಅನುದಾನ ಬಿಡುಗಡೆಯಾಗಲಿದ್ದು ಗ್ರಾಮಸ್ಥರನ್ನು ಕರೆದು ನಿಮಗೆ ಅವಶ್ಯಕತೆ ಇರುವ ಕೆಲಸ ಮಾಡಿಕೊಡುವೆ ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯ ಎಇಇ ಶರಣಬಸವ, ನಿರ್ಮಿತಿ ಕೇಂದ್ರದ ಅಧಿಕಾರಿ ಕಿರಣಕುಮಾರ, ಉಪ ತಹಸೀಲ್ದಾರ ಬಸವರಾಜ ಸಜ್ಜನ್, ಬಿಇಒ ಈರಪ್ಪ ಕನ್ನಳ್ಳಿ, ಸಿಡಿಪಿಒ ಶರಣಬಸವ, ಪಿಡಿಒ ಮಲ್ಲಿಕಾರ್ಜುನ ಸಜ್ಜನ್, ಅನುರಾಧ, ಜೆಡಿಎಸ್ ಜಿಲ್ಲಾಧ್ಯಕ್ಷರಾದ ಸುಭಾಷ್ಚಂದ್ರ ಕಟಕಟಿ, ಅಜಯರಡ್ಡಿ ಎಲ್ಹೇರಿ, ಮಹೇಂದ್ರರಡ್ಡಿ ಕಂದಕೂರ, ಈಶ್ವರ ನಾಯಕ, ಮಲ್ಲಿಕಾರ್ಜುನ ಅರುಣಿ, ಆನಂದ ವಡವಟ, ನರಸಿಂಹಲು ಚಿಂತಗುಂಟಾ, ಆನಂದ ಶಿಳ್ಳೆ, ನಾರಾಯಣ ಕೊಂಕಲ್, ಭೀಮರಾಯ ಕೊಂಕಲ್, ಶರಣಗೌಡ ಗುಂಜನೂರ, ಮೋದಿನ್‌ಸಾಬ ಗುಂಜನೂರ, ಬಸವರಾಜ ಹಳ್ಳಿ, ಬುಗ್ಗಾರಡ್ಡಿ ಧರ್ಮಾಪೂರ, ಚಿನ್ನಾಕರ ಗ್ರಾಮದ ಶರಣಗೌಡ ಚಂದಾನೂರ, ಶರಣಗೌಡ ಚಿನ್ನಾಕಾರ, ಸಿದ್ದಪ್ಪಗೌಡ ಹಳಿಮನಿ, ವಿಜಯರಡ್ಡಿ, ಪ್ರವೀಣ, ಗೋಪಾಳಪುರ ಗ್ರಾಮದ ಅನಂತರಡ್ಡಿ, ಆನಂದ, ಹಣಮರಡ್ಡಿ, ಮಹಾದೇವಪ್ಪ, ಸೂಗಪ್ಪ ಸಾಹು ಗಣಪೂರ, ಮಲ್ಲಣ್ಣ ಗಣಪೂರ, ಬೆಟ್ಟದಳ್ಳಿ ತಾಂಡಾದ ಶಂಕರ ರಾಠೋಡ, ಗೋಪಾಲ ರಾಠೋಡ, ಪತ್ತು ರಾಠೋಡ, ಧಮಾಪೂರ ತಾಂಡಾದ ಸುರೇಶ ಚಿನ್ನಾರಾಠೋಡ, ಡಿ.ಕೆ.ರವಿ ಸೇರಿದಂತೆ ಇತರರಿದ್ದರು.

## ನಿಮ್ಮ ಸೇವಕನಾಗಿ ಕೆಲಸ ಮಾಡುವೆ

5 ವರ್ಷ ನಿಮ್ಮ ಸೇವಕನಾಗಿ ಕೆಲಸ ಮಾಡಲು ಅವಕಾಶ ಮಾಡಿ ಕೊಟ್ಟಿದ್ದೀರಿ. ಕಳೆದ ಅವಧಿಗೆ ನಮ್ಮ ತಂದೆ ದಿ.ನಾಗನಗೌಡ ಅವಕಾಶ ಮಾಡಿಕೊಟ್ಟಿದ್ದೀರಿ. 2023ರಲ್ಲಿ ನನಗೆ ಆಶೀರ್ವಾದ ಮಾಡಿದ್ದೀರಿ. ನಿಮ್ಮ ಸೇವಕನಾಗಿ ಕೆಲಸ ಮಾಡುವುದು ನನ್ನ ಕರ್ತವ್ಯ ಎಂದು ಶಾಸಕ ಶರಣಗೌಡ ಕಂದಕೂರ ಹೇಳಿದರು.

ತಾಂಡಾ ನಿವಾಸಿಗಳು ಮೊದಲು ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಿ. ನಿಮ್ಮ ಮಕ್ಕಳಿಗೆ ಅನುಕೂಲವಾಗಲು ಎಲ್ಲ ರೀತಿಯ ಸೌಲಭ್ಯ ಒದಗಿಸಲು ನಾನು ಬದ್ಧ. ಇದುವರೆಗೂ ಯಾರು ನಿಮ್ಮ ಊರು, ತಾಂಡಾಗಳಿಗೆ ಬಂದು ಸಮಸ್ಯೆ ಆಲಿಸಿರಲಿಲ್ಲ. ಆದರೆ, ನಾನು ಸ್ಥಳೀಯನಿದ್ದೇನೆ.

ಮೊದಲು ಮಕ್ಕಳಿಗೆ ಶಿಕ್ಷಣ ಕೊಡಿಸಿ ಎಂದು ಸಲಹೆ ನೀಡಿದರು.

## ಪಡಿತರಕ್ಕಾಗಿ, ಕುಡಿವ ನೀರಿಗಾಗಿ ಪರದಾಟ

ರಾಜ್ಯದಲ್ಲಿ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳು ಕಳೆದರೂ 8 ದಶಕಗಳಿಂದ ನಾವು ನಮ್ಮ ಕ್ಷೇತ್ರದ ಜನ ಇನ್ನೂ ಪಡಿತರ ಪಡೆಯಲು, ಶುದ್ಧ ಕುಡಿವ ನೀರು ಪಡೆಯಲು, ವಿದ್ಯುತ್ ಪಡೆಯಲು ಪರದಾಡುವಂತ ಪರಿಸ್ಥಿತಿ ಇರುವುದು ನಮಗೆ ಶೇಮ್ ಎನ್ನುತ್ತಿದೆ. ಎಷ್ಟೋ ಗ್ರಾಮಗಳಲ್ಲಿ ಚರಂಡಿ ಹೋಳೆತ್ತಲೂ ಕೂಡ ದುಡ್ಡಿಲ್ಲದೇ ಗ್ರಾಪಂನವರು ಪರದಾಡುತ್ತಿದ್ದಾರೆ ಎನ್ನುವುದು ಕಳವಳಕಾರಿ ಸಂಗತಿ.

**–ಶರಣಗೌಡ ಕಂದಕೂರ ಶಾಸಕರು, ಗುರುಮಠಕಲ್ ಮತಕ್ಷೇತ್ರ**

## ಚರಂಡಿ ಸ್ವಚ್ಛ ಮಾಡಲು ಅನುದಾನವಿಲ್ಲವೇ?

ಗ್ರಾಮೀಣ ಭಾಗದಲ್ಲಿ ಚರಂಡಿ ಸ್ವಚ್ಛ ಮಾಡಲೂ ಪಂಚಾಯಿತಿಯಲ್ಲಿ ದುಡ್ಡಿಲ್ಲ ಎಂದರೆ ನಿಜಕ್ಕೂ ತಲೆ ತಗ್ಗಿಸುವ ಸಂಗತಿ. ಜನತೆ ನಾವು ಭೇಟಿ ನೀಡಿದಾಗ ಅಂಗನವಾಡಿ, ಶಾಲಾ ಕಟ್ಟಡ, ಆರೋಗ್ಯ ಅನುದಾನ ಕೇಳಿದರೆ ಶಾಸಕರಾಗಿ ನಾವು ಕೊಡಬಹುದು. ಆದರೆ, ಚರಂಡಿ ಸ್ವಚ್ಛಗೊಳಿಸಲು, ಶುದ್ಧ ಕುಡಿಯುವ ನೀರಿಗೂ ಶಾಸಕರೇ ಅನುದಾನ ಕೊಡಬೇಕಾ? ಎಂದು ಆರ್ಡಿಪಿಆರ್ ಇಲಾಖೆ ಮೇಲಧಿಕಾರಿಗಳಿಗೆ ತರಾಟೆಗೆ ತೆಗೆದುಕೊಂಡು, ಅಧಿಕಾರಿಗಳು ಕೆಲಸ ಮಾಡಲಿಲ್ಲ ಎಂದರೆ, ಜನತೆ ನೇರವಾಗಿ ಜನಪ್ರತಿನಿಧಿಗಳಿಗೆ ಬಯ್ಯುತ್ತಾರೆ. ಸಣ್ಣಪುಟ್ಟ ಕೆಲಸ ಮಾಡಲು ನಿಮ್ಮಲ್ಲಿ ಹಣ ಇಲ್ಲ ಎಂದು ನನಗೆ ಪತ್ರ ಕೊಡಿ ನಾನೇ ಶಾಸಕರ ಅನುದಾನ ಕೊಡುತ್ತೇನೆ ಎಂದರು.

## ಯಪ್ಪಾ ಹ್ಯಾಂಗರ ಮಾಡಿ ರೊಕ್ಕ ಬರಂಗ ಮಾಡು

ಯಾದಗಿರಿ : ಯಪ್ಪಾ ಗೌಡ ಹೆಂಗಾರ ಮಾಡು ನಮಗಾ ರೊಕ್ಕಾ ಬರಂಗ ಮಾಡು 3 ತಿಂಗಳಾತು ಇಲ್ಲಿಗೆ ಒಂದ್ ಪೈಸೆ ರೊಕ್ಕಾ ಬಂದಿಲ್ಲ, ನಮ್ ಜೀವಾನ ಅದರಿಂದ ನಡದಾದ ಕೈ ಮುಗಿತಿವಿ ಹೆಂಗಾರ ಮಾಡಿ ಕೊಡಿಸು ಯಪ್ಪಾ ಎನ್ನುತಾ ತಮ್ಮ ಕೈಗಳನ್ನು ಮುಗಿದು ಅಂಗವಿಕಲ, ವೃದ್ಯಾಪ್ಯ ವೇತನ ಬಾರದ ಮಹಿಳೆಯರಾದ ಭೀಮವ್ವ ಗೋಪಾಳಪೂರ, ಲಚಮವ್ವ ಗೋಪಾಳಪೂರ ಇವರು ಗೋಪಾಳಪುರದಲ್ಲಿ ಶಾಸಕ ಶರಣಗೌಡ ಕಂದಕೂರ ಎದುರು ತಮ್ಮ ನೋವು ತೋಡಿಕೊಂಡರು.

ಮಹಿಳೆಯರ ಸಮಸ್ಯೆ ಕೇಳಿದ ಶಾಸಕರು ಸ್ಥಳದಲ್ಲಿ ಅಧಿಕಾರಿಗಳನ್ನು ಪ್ರಶ್ನಿಸಿದಾಗ ರಾಜ್ಯದಲ್ಲಿ ಸರ್ಕಾರಿ ಸೌಲಭ್ಯಗಳ ಪರಿಷ್ಕರಣೆ ನಡೆಯುತ್ತಿದ್ದು, ಇದರಲ್ಲಿ ಹಲವು ಫಲಾನುಭವಿಗಳಿಗೆ ಹಣ ಬರುತ್ತಿಲ್ಲವೆಂದು ಅಧಿಕಾರಿಗಳು ತಿಳಿಸಿದರು. ರಾಜ್ಯದಲ್ಲಿ 18ಲಕ್ಷಕ್ಕೂ ಹೆಚ್ಚು ಫಲಾನುಭವಿಗಳಿಗೆ ಸೌಲಭ್ಯ ಸಿಗದೇ ಪರದಾಡುತ್ತಿದ್ದು, ಅಧಿಕಾರಿಗಳು ಪ್ರತಿಯೊಂದು ಗ್ರಾಮದಲ್ಲಿ ಸ್ಥಳದಲ್ಲಿಯೇ ಇದ್ದು ಜನರ ಸಮಸ್ಯೆ ಕೇಳಿ ಅವರ ತಾಂತ್ರಿಕ ತೊಂದರೆಗಳನ್ನು ನಿವಾರಿಸಬೇಕು ಎಂದು ಸೂಚಿಸಿದರು.

‘ ರಾಜ್ಯದಲ್ಲಿ ಪಡಿತರ ವಿತರಣೆ ವ್ಯವಸ್ಥೇಯಲ್ಲಿನ ಲೋಪ ಸರಿಪಡಿಸುವಂತೆ ಕಳೆದ ಭಾರಿ ಅಧಿವೇಶನದಲ್ಲಿ ಮಾತನಾಡಿದ್ದೇ ಕೆಲವು ರಾಜಕೀಯ ಘಟನೆಗಳ ಹಿನ್ನಲೆ ತಾಂತ್ರಿಕ ತೊಂದರೆಯಾಗಿತ್ತು, ಯಾವಾ ಗ್ರಾಮದಲ್ಲಿ, ತಾಂಡಾದಲ್ಲಿ, ವಾರ್ಡ್ನಲ್ಲಿ ಹೆಚ್ಚು ಜನರಿದ್ದು ಒಂದು ನ್ಯಾಯ ಬೆಲೆ ಅಂಗಡಿ ಇದ್ದಲ್ಲಿ ಮತ್ತೊಂದು ಹೊಸ ನ್ಯಾಯ ಬೆಲೆ ಅಂಗಡಿ ತೆರೆಯಬೇಕು,ಜನಸಂಖ್ಯೆ ಹೆಚ್ಚಳದಿಂದ ಹಲವು ಗ್ರಾಮಗಳಲ್ಲಿ ಪಡಿತರಕ್ಕಾಗಿ ಜನರು ಪರಡಾಡುವಂತಹ ಪರಿಸ್ಥಿತಿ ಇದೆ ಎಂದು ಮಂತ್ರಿಗಳ ಗಮನಕ್ಕೆ ತಂದಾಗ ಮಾಡಿಕೊಡುವುದಾಗಿ ಭರವಸೆ ನೀಡಿದ್ದಾರೆ. ನಮ್ಮ ಮತಕ್ಷೇತ್ರದಲ್ಲಿ ಚಿತ್ರದುರ್ಗದ ನಮ್ಮ ಅಭಿಮಾನಿಯೋರ್ವ ಯಾದಗಿರಿಗೆ ಬಂದು ತಮ್ಮ ಸ್ವಂತ ಖರ್ಚಿನಿಂದ ಪಡಿತರ ಚೀಟಿದಾರರ ಸಂಪೂರ್ಣ ಮಾಹಿತಿ ಪಡೆಯುತ್ತಿದ್ದು, ಆತನೂ ಮಾಹಿತಿ ಪಡೆದು ಫಲಾನುಭವಿಗಳ ವಿವರ ಬಂದ ನಂತರ ಅದರಲ್ಲಿನ ಅಂಶಗಳನ್ನಿಟ್ಟುಕೊಂಡು ಮಂತ್ರಿ ಬಳಿ ತೆರಳಿ ಹೊಸ ನ್ಯಾಯ ಬೆಲೆ ಅಂಗಡಿಗಳನ್ನು ಪ್ರಾರಂಭಿಸಲು ಮನವಿ ಮಾಡುವುದಾಗಿ ತಿಳಿಸಿದರು.

---

## ನಿರಂತರ ಅಧ್ಯಯನದಿಂದ ಯಶಸ್ಸು ಸಾಧ್ಯ: ಜೈನಾಪುರ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ವಿದ್ಯಾರ್ಥಿಗಳು ಸತತ ಅಧ್ಯಯನ ಹಾಗೂ ನಿರಂತರ ಪರಿಶ್ರಮದಿಂದ ಮಾತ್ರ ಯಶಸ್ಸು ಕಾಣಲು ಸಾಧ್ಯವಾಗುತ್ತದೆ ಎಂದು ಸಾಹಿತಿ ಶರಣಗೌಡ ಪಾಟೀಲ ಜೈನಾಪುರ ಹೇಳಿದರು,

ರಂಗಂಪೇಟೆಯ ಬಸವೇಶ್ವರ ಪದವಿ ಪೂರ್ವ ಕಾಲೇಜಿನಲ್ಲಿ ಇಂದು ನಡೆದ ಪಿ.ಯು.ಸಿ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು ವಿದ್ಯಾರ್ಥಿಗಳು ಸಾಧನೆ ಮಾಡಬೇಕೆಂಬ ಧೃಡಸಂಕಲ್ಪ ಹೊಂದಿರಬೇಕು ಉತ್ತಮವಾದ ಗುರಿ ಉದ್ದೇಶಗಳನ್ನ ಇಟ್ಟುಕೊಂಡು ಯಾರು ಮುನ್ನಡೆಯುತ್ತಾರೋ ಅವರು ಜೀವನದಲ್ಲಿ ಯಶಸ್ಸು ಕಾಣಲು ಸಾಧ್ಯವಾಗುತ್ತದೆ,ವಿದ್ಯಾರ್ಥಿ ಜೀವನ ಅತ್ಯಂತ ಮಹತ್ವದ ಜೀವನ, ಹೆಚ್ಚು ಶ್ರಮ ಹಾಗೂ ಪರಿಶ್ರಮ ಪಡುವ ಮೂಲಕ ವಿದ್ಯಾರ್ಥಿಗಳು ಸಾಧನೆ ಹಾದಿಯಲ್ಲಿ ಮುನ್ನಡೆಯಬೇಕು ಪಠ್ಯವಿಷಯಗಳ ಜೊತೆ ಪಠ್ಯೇತರ ವಿಷಯಗಳನ್ನ ಅಭ್ಯಾಸಮಾಡುವ ಮೂಲಕ ಸ್ಪರ್ಧಾತ್ಮಕ ಬದುಕಿನಲ್ಲಿ ಸಾಧನೆಯತ್ತ ಹೆಜ್ಜೆ ಇಡಬೇಕು ಎಂದು ಸಲಹೆ ನೀಡಿದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಜನನಿ ಮಹಿಳಾ ಕಾಲೇಜಿನ ಪ್ರಾಂಶುಪಾಲ ತಿರುಪತಿ ಮಾತನಾಡಿ ಇಂದಿನ ವಿದ್ಯಾರ್ಥಿಗಳು ಶ್ರಮದ ಕಲ್ಪನೆಯನ್ನು ಮರೆತಿದ್ದಾರೆ, ಸಾಧನೆ ಎಂಬುದು ಯಾವತ್ತಿಗೂ ಸಾಧಕನ ಸ್ವತ್ತಾಗಿರುತ್ತದೆ.ಆ ಹಿನ್ನೆಲೆಯಲ್ಲಿ ಸಾಧನೆಯ ಹಾದಿಯತ್ತ ವಿದ್ಯಾರ್ಥಿಗಳು ಮುನ್ನಡೆಯಬೇಕು ಎಂದ ಅವರು ಗ್ರಾಮೀಣ ಪ್ರದೇಶದ ಬಡ ಕುಟುಂಬದಿಂದ ಬಂದ ವಿದ್ಯಾರ್ಥಿಗಳಿಗೆ ಕುಟುಂಬವನ್ನು ನಿರ್ವಹಿಸಬೇಕೆಂಬ ಜವಾಬ್ದಾರಿ ಜೊತೆಗೆ ಉತ್ತಮವಾಗಿ ಅಭ್ಯಾಸಮಾಡಿ ಉದ್ಯೋಗಸ್ಥನಾಗುತ್ತೇನೆ ಎಂಬ ನಂಬಿಕೆ ನಿಮ್ಮಲ್ಲಿರಲಿ ಎಂದು ಸಲಹೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷರಾದ ಪ್ರಕಾಶ ಅಂಗಡಿ ಕನ್ನೆಳ್ಳಿ ವಹಿಸಿದ್ದರು. ಕಾಲೇಜಿನ ಪ್ರಾಚಾರ್ಯ ವಿರೇಶ ಹಳಿಮನಿ ಪ್ರಾಸ್ತಾವಿಕವಾಗಿ ಮಾತನಾಡಿದರು, ಇದೇ ಸಂದರ್ಭದಲ್ಲಿ ಫ.ಗು. ಹಳಕಟ್ಟಿ ಅವರ ಜಯಂತಿ ಆಚರಿಸಲಾಯಿತು. ಉಪನ್ಯಾಸಕ ಬಲಭೀಮ ಪಾಟೀಲ ಸ್ವಾಗತಿಸಿದರು, ಕುಮಾರಿ ನಿರೂಪಿಸಿದರು, ಸೃಜನ ಜಗಶೆಟ್ಟಿ ವಂದಿಸಿದರು.ಉಪನ್ಯಾಸಕರಾದ ರುದ್ರಪ್ಪ ಕೆಂಭಾವಿ, ಚಂದ್ರು ಸುರಪುರ, ಭಾರತಿ ರಂಗಂಪೇಟ ಮೇಘಾ ದಾಯಿಪುಲೆ ಸೇರಿದಂತೆ ಇತರರಿದ್ದರು.

## ವಚನ ಸಾಹಿತ್ಯದ ಉಳಿವಿಗೆ ಫ.ಗು.ಹಳಕಟ್ಟಿ ಅವರ ಕೊಡುಗೆ ಅಪಾರ: ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ಜು:2: ವಚನ ಸಾಹಿತ್ಯದ ಉಳಿವಿಗೆ ಫ.ಗು.ಹಳಕಟ್ಟಿ ಅವರ ಕೊಡುಗೆ ಅಪಾರವಿದೆ. ಅವರು ಈ ಸಮಾಜದ ವಚನಗುಮ್ಮಟ ಎಂದು ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ ಬಣ್ಣಿಸಿದರು.ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಇಲ್ಲಿನ ಲಿಂಗೇರಿ ಕೊನಪ್ಪ ಶಿಕ್ಷಣ ಸಂಸ್ಥೆಯಲ್ಲಿ ಗುರುವಾರ ಆಯೋಸಿದ್ದ ವಚನ ಪಿತಾಮಹಾ ಡಾ. ಫ.ಗು.ಹಳಕಟ್ಟಿ ಅವರ ಜನ್ಮದಿನ ಮತ್ತು ವಚನ ಸಂರಕ್ಷಣಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಗೌರವ ಅರ್ಪಿಸಿ, ಕಾರ್ಯಕ್ರಮಕ್ಕೆ ಚಾಲನೆ ಅವರು ಮಾತನಾಡಿದರು.ಮನೆ, ಮಠ, ಜಗುಲಿಗಳಲ್ಲಿ ಪೂಜಿಸುತ್ತಿದ್ದ ತಾಡೋಲೆಗಳನ್ನು ಹುಡುಕಿ ತಂದು, ಅದರಲ್ಲಿನ ಅರ್ಥ ಬಿಡಿಸಿ ಬರೆದ ಇವರು, ತಾವು ಸಂಗ್ರಹಿಸಿದ ರಾಶಿ,ರಾಶಿ ವಚನಗಳನ್ನು ಮುದ್ರಿಸಿ ಆ ಸಾಹಿತ್ಯ ಜನರಿಗೆ ತಲುಪಲು 1925ರಲ್ಲಿ ಹಿತಚಿಂತಕ ಮುದ್ರಣಾಲಯ ಆರಂಭಿಸಿದರು. ಮುದ್ರಣ ಯಂತ್ರ ಖರೀದಿಸಲು ಆರ್ಥಿಕ ತೊಂದರೆ ಉಂಟಾದಾಗ ವಕೀಲಿ ವೃತ್ತಿಯಿಂದ ಸಂಪಾದಿಸಿ ಕಟ್ಟಿದ್ದ ತಾವಿದ್ದ ಮನೆಯನ್ನೇ ಮಾರಿ ಬಾಡಿಗೆ ಮನೆಯಲ್ಲಿ ಅಂದು ಜೀವನ ಸಾಗಿಸಿದ ಮಹಾನ ವ್ಯಕ್ತಿ ಎಂದು ಬಣ್ಣಿಸಿದರು.ಹಳಕಟ್ಟಿಯವರು ಸ್ವತಃ ಮೊಳೆಗಳನ್ನು ಜೋಡಿಸಿ. ಅಚ್ಚು ಹಾಕಿ ತಮ್ಮ ಕಾಲುಗಳಿಂದ ಪೆಡಲ್ ತುಳಿದು, ಮುದ್ರಿಸಿ ಪ್ರಕಟಿಸಿದ ಸಾಹಿತ್ಯದಿಂದ 250 ವಚನಕಾರರ ವಚನಗಳನ್ನು, ಸಾಹಿತ್ಯವನ್ನು ಹೊರತಂದರು. ಇವರ ಈ ಕಾರ್ಯ ಕೈಗೊಳ್ಳುವ ಮುಂಚೆ ಕೇವಲ 50 ವಚನಕಾರರ ವಚನಗಳು ಮಾತ್ರ ಬೆಳಕು ಕಂಡಿದ್ದವು. ಇದು ವಚನ ಸಾಹಿತ್ಯಕ್ಕೆ ಇವರು ನೀಡಿದ ಅಪಾರ ಕೊಡುಗೆ ಎಂದು ಶಾಸಕರು ಮಾರ್ಮಿಕವಾಗಿ ಹೇಳಿದರು.1880 ಜುಲೈ 2 ರಂದು ಜನಿಸಿದ್ದ ಇವರು, ಬದುಕಿನುದ್ದಕ್ಕೂ ಸಂಘರ್ಷಗಳನ್ನೆ ಎದುರಿಸಿ,ಸಾಮಾಜಿಕ, ಶೈಕ್ಷಣಿಕ, ವಚನ ಸಾಹಿತ್ಯ, ಪತ್ರಿಕಾ ರಂಗಕ್ಕೆ ಅವಿರತ ಶ್ರಮ ಹಾಕಿದ ವಚನ ಪಿತಾಮಹಾ ಎಂದು ಹೇಳಿದ ಶಾಸಕರು,ಇವರ ಜೀವನಾದರ್ಶಗಳನ್ನು ಎಲ್ಲರೂ ಅಳವಡಿಸಿಕೊಳ್ಳಬೇಕೆಂದು ಕರೆ ನೀಡಿದರು. ಉಪನ್ಯಾಸಕ ಸತೀಶಕುಮಾರ್ ಹವಾಲ್ದಾರ ಮಾತನಾಡಿ, ನಾಡಿನ ಶ್ರೇಷ್ಠ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದ ಫ.ಗು.ಹಳಕಟ್ಟಿ ಅವರು,ವಿಜಯಪುರ ನಗರಸಭೆ ಅಧ್ಯಕ್ಷರಾಗಿದ್ದಾಗ ಬೆಳೆಯುತ್ತಿರುವ ನಗರಕ್ಕೆ ಕುಡಿಯುವ ನೀರು ಒದಗಿಸಲು ಸರ್ ಎಂ.ವಿಶ್ವೇಶ್ವರಯ್ಯನವರನ್ನು ಅಲ್ಲಿಗೆ ಕರೆಯಿಸಿ, ಅವರ ತಾಂತ್ರಿಕ ಸಹಾಯ ಪಡೆದು ನಗರದ ಹೊರವಲಯದಲ್ಲಿ ಭೂತನಾಳ ಕೆರೆಯನ್ನು ಸ್ಥಾಪಿಸಿದ್ದು ಅವರ ದೂರದೃಷ್ಟಿಗೆ ಸಾಕ್ಷಿ. ಈ ಕೆರೆಯ ಕುಡಿಯುವ ನೀರಿನ ಯೋಜನೆ ನೂರು ವರ್ಷಗಳ ನಂತರ ಇಂದಿಗೂ ನಗರದ ಶೇ.30 ಭಾಗಕ್ಕೆ ಶುದ್ಧ ಕುಡಿಯುವ ನೀರು ಒದಗಿಸುತ್ತಿದೆ ಎಂದು ಹೇಳಿದರು.

ಮುಂಬೈ ವಿಧಾನಪರಿಷತ್ ಸದಸ್ಯರಾಗಿ ಬಿಜಾಪುರದಲ್ಲಿ ಬರಗಾಲ ನಿವಾರಣಾ ಸಂಸ್ಥೆ ಆರಂಭಿಸಿ. ಕೃಷಿ ಪರ್ಯಾಯ ಚಟುವಟಿಕೆ ಕೇಂದ್ರವಾಗಿಸಿದರು.ಹಳಕಟ್ಟಿಯವರು ಸ್ಥಾಪಿಸಿದ ಬಿ.ಎಲ್.ಡಿ.ಇ. ಸಂಸ್ಥೆ ಅಧ್ಯಕ್ಷರಾದ ಎಂ.ಬಿ. ಪಾಟೀಲರು ಹಳಕಟ್ಟಿ ಸ್ಮಾರಕ ಭವನ ನಿರ್ಮಿಸಿ ಅವರನ್ನು ಜೀವಂತಗೊಳಿಸಲು ವಚನಸಾಹಿತ್ಯ ಸಂಶೋಧನ ಕೇಂದ್ರ ಆರಂಭಿಸಿ, ಹಳಕಟ್ಟಿಯವರು ಜೀವಿತಾವಧಿಯಲ್ಲಿ ಪ್ರಕಟಿಸಿದ ಎಲ್ಲ ಸಾಹಿತ್ಯವನ್ನು 15 ಸಮಗ್ರ ಸಂಪುಟಗಳಲ್ಲಿ ಹತ್ತು ಸಾವಿರ ಪುಟಗಳಲ್ಲಿ ಹೊರತಂದಿದ್ದಾರೆ. ಹಳಕಟ್ಟಿಯವರ ಜನ್ಮದಿನವನ್ನು ಸರ್ಕಾರ ವಚನ ಸಾಹಿತ್ಯ ಸಂರಕ್ಷಣಾ ದಿನವಾಗಿ ಘೋಷಣೆ ಮಾಡಿದೆ ಎಂದು ಅವರು ವಿವರಿಸಿದರು.ಕಾರ್ಯಕ್ರಮದಲ್ಲಿ ಯುಡಾ ಅಧ್ಯಕ್ಷರಾದ ಬಾಬುರಾವ ಕಾಡ್ಲೂರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ಉತ್ತರಾದೇವಿ, ಉಪನ್ಯಾಸಕರಾದ ಬಸವರಾಜ ಜುಗೇರಿ, ಕಾಲೇಜಿನ ಪ್ರಾಂಶುಪಾಲರಾದ ಗುರುಪ್ಪಚಾರ್ಯ ಎಂ. ವಿಶ್ವಕರ್ಮ ಸೇರಿದಂತೆ ವಿದ್ಯಾರ್ಥಿಗಳು ಇದ್ದರು. ಆರಂಭದಲ್ಲಿ ಅಶೋಕ ರಾಜನಕೋಳ್ಳೂರ ಮತ್ತು ಸಂಗಡಗರಿಂದ ನಾಡಗೀತೆ ನಡೆಯಿತು.

---

## ವೈದ್ಯರ ಸೇವೆ, ಪತ್ರಿಕೋದ್ಯಮದ ಮಹತ್ವ ಮತ್ತು ಓದುವ ಹವ್ಯಾಸ ಕುರಿತು ಮಕ್ಕಳಿಗೆ ವಿಶೇಷ ಅರಿವು

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಶಹಾಪುರ ಸಮೀಪದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಅಂಬೇಡ್ಕರ್ ನಗರ, ಹತ್ತಿಗೂಡೂರುದಲ್ಲಿ ರಾಷ್ಟ್ರೀಯ ವೈದ್ಯರ ದಿನಾಚರಣೆ ಹಾಗೂ ಪತ್ರಿಕಾ ದಿನಾಚರಣೆಯನ್ನು ಅತ್ಯಂತ ಅರ್ಥಪೂರ್ಣವಾಗಿ ಹಾಗೂ ಸಂಭ್ರಮದಿಂದ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಯುವ ಬರಹಗಾರ, ಪತ್ರಕರ್ತ ಹಾಗೂ ಅಭಿಯಂತರ ದೇವಿಂದ್ರ ಹುಲ್ಕಲ್ (ಜೆ) ಅವರು ವೈದ್ಯಕೀಯ ಸೇವೆ ಮತ್ತು ಪತ್ರಿಕೋದ್ಯಮದ ಮಹತ್ವದ ಕುರಿತು ವಿದ್ಯಾರ್ಥಿಗಳಿಗೆ ಸರಳ, ಮನಮುಟ್ಟುವ ಹಾಗೂ ಪ್ರೇರಣಾದಾಯಕವಾಗಿ ತಿಳಿಸಿದರು.ವೈದ್ಯರ ದಿನಾಚರಣೆಯ ಅಂಗವಾಗಿ ಮಾತನಾಡಿದ ಅವರು, "ವೈದ್ಯೋ ನಾರಾಯಣೋ ಹರಿ" ಎಂಬ ನುಡಿಯನ್ನು ಉಲ್ಲೇಖಿಸಿ, ವೈದ್ಯಕೀಯ ವೃತ್ತಿಯು ಕೇವಲ ಉದ್ಯೋಗವಲ್ಲ, ಅದು ಮಾನವ ಜೀವ ಉಳಿಸುವ ಪವಿತ್ರ ಸೇವೆಯಾಗಿದೆ ಎಂದು ಹೇಳಿದರು. ಹಗಲು–ರಾತ್ರಿ ಎನ್ನದೆ ರೋಗಿಗಳ ಜೀವ ಉಳಿಸಲು ಶ್ರಮಿಸುವ ವೈದ್ಯರ ಸೇವೆ ಸಮಾಜಕ್ಕೆ ಅನನ್ಯವಾದದ್ದು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.ಇದೇ ವೇಳೆ ಇತ್ತೀಚಿನ ದಿನಗಳಲ್ಲಿ ಕೆಲವು ಖಾಸಗಿ ಆಸ್ಪತ್ರೆಗಳಲ್ಲಿ ಸೇವೆಗಿಂತ ಹಣ ಗಳಿಕೆಗೆ ಹೆಚ್ಚಿನ ಆದ್ಯತೆ ನೀಡುತ್ತಿರುವ ಘಟನೆಗಳು ಕಂಡುಬರುತ್ತಿದ್ದು, ವೈದ್ಯಕೀಯ ವೃತ್ತಿಯ ಪಾವಿತ್ರ್ಯ ಮತ್ತು ನೈತಿಕ ಮೌಲ್ಯಗಳನ್ನು ಎಲ್ಲ ವೈದ್ಯರು ಕಾಪಾಡಿಕೊಳ್ಳಬೇಕು ಎಂದು ಅಭಿಪ್ರಾಯಪಟ್ಟರು.ಪತ್ರಿಕಾ



ದಿನಾಚರಣೆಯ ಅಂಗವಾಗಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ರಾಜ್ಯಮಟ್ಟದ, ಪ್ರಾದೇಶಿಕ ಹಾಗೂ ಸ್ಥಳೀಯ ಪತ್ರಿಕೆಗಳ ಕಾರ್ಯವೈಖರಿ, ಪತ್ರಕರ್ತರ ಸಾಮಾಜಿಕ ಜವಾಬ್ದಾರಿ, ಸಾರ್ವಜನಿಕರ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುವಲ್ಲಿ ಪತ್ರಿಕೆಗಳ ಪಾತ್ರ ಹಾಗೂ ಪತ್ರಕರ್ತರು ಎದುರಿಸುವ ಸವಾಲುಗಳ ಕುರಿತು ಮಕ್ಕಳಿಗೆ ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ವಿವರಿಸಿದರು.ತಮಗೆ ಪತ್ರಿಕೆ ಓದುವುದು ವಿಶೇಷ ಅಭಿರುಚಿಯಾಗಿದ್ದು, ಪ್ರತಿಯೊಬ್ಬ ವಿದ್ಯಾರ್ಥಿಯೂ ಪ್ರತಿದಿನ ಕನ್ನಡ ಪತ್ರಿಕೆಗಳನ್ನು ಓದುವ ಅಭ್ಯಾಸ ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು. ಪತ್ರಿಕೆಯನ್ನು ಹೇಗೆ ಓದಬೇಕು, ಸುದ್ದಿಗಳನ್ನು ಹೇಗೆ ಅರ್ಥೈಸಿಕೊಳ್ಳಬೇಕು ಹಾಗೂ ಜ್ಞಾನವನ್ನು ಹೇಗೆ ವೃದ್ಧಿಸಿಕೊಳ್ಳಬೇಕು ಎಂಬುದನ್ನು ಪತ್ರಿಕೆಯ ಮೂಲಕವೇ ಪ್ರಾಯೋಗಿಕವಾಗಿ ಪ್ರದರ್ಶಿಸಿ ಮಕ್ಕಳಲ್ಲಿ ಓದುವ ಆಸಕ್ತಿಯನ್ನು ಮೂಡಿಸಿದರು.ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಿ, ತಮ್ಮಲ್ಲಿರುವ ಮಿಮಿಕ್ರಿ ಕಲೆಯ ಮೂಲಕ ಕನ್ನಡದ ಖ್ಯಾತ ನಟರ ಧ್ವನಿಗಳನ್ನು ಅನುಕರಿಸಿ ಮಕ್ಕಳನ್ನು ರಂಜಿಸಿದರು. ಅಲ್ಲದೆ, ತಮ್ಮ ಗಾಯನ ಪ್ರತಿಭೆಯನ್ನು ಪ್ರದರ್ಶಿಸಿ ಹಾಡುಗಳನ್ನು ಹಾಡುವ ಮೂಲಕ ವಿದ್ಯಾರ್ಥಿಗಳ ಮುಖದಲ್ಲಿ ಸಂತಸ ಕಂಡರು. ಮಕ್ಕಳು ಚಪ್ಪಾಳೆ ತಟ್ಟುವ ಮೂಲಕ ಸಂತಸ ವ್ಯಕ್ತಪಡಿಸಿದರು, ವೈದ್ಯರ ಸೇವೆಯ ಮಹತ್ವ, ಪತ್ರಿಕೋದ್ಯಮದ ಸಾಮಾಜಿಕ ಹೊಣೆಗಾರಿಕೆ ಹಾಗೂ ಓದುವ ಹವ್ಯಾಸದ ಕುರಿತು ಮಕ್ಕಳಲ್ಲಿ ಜಾಗೃತಿ ಮೂಡಿಸಿದ ಈ ಸರಳ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ಹಾಗೂ ಅರ್ಥಪೂರ್ಣವಾಗಿ ನೆರವೇರಿತು.

## ಪರಿಶ್ರಮವೇ ಯಶಸ್ಸಿನ ಮೂಲ : ನಾಗಮ್ಮ ಆಗೇರ



• **ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ**

ಕಠಿಣ ಪರಿಶ್ರಮದಿಂದ ಯಶಸ್ಸು ಕಾಣಲು ಸಾಧ್ಯ. ವಿದ್ಯಾರ್ಥಿಗಳು ಶಿಸ್ತನ್ನು ಅಳವಡಿಸಿಕೊಂಡು ಸಿಗುವ ಅವಕಾಶಗಳನ್ನು ಸರಿಯಾಗಿ ಬಳಸಿಕೊಳ್ಳಬೇಕು ಎಂದು ವಿ.ಕೆ.ಹೈಸ್ಕೂಲಿನ ಮುಖ್ಯಾಧ್ಯಾಪಕಿ ನಾಗಮ್ಮ ಟಿ. ನಾಯಕ ಹೇಳಿದರು.

ಪಟ್ಟಣದ ಕೆಎಲ್‌ಇ ಸಂಸ್ಥೆಯ ಪದವಿ ಪೂರ್ವ ವಿದ್ಯಾಲಯದ 2026–27 ನೇ ಸಾಲಿನ ಒಕ್ಕೂಟದ ಉದ್ಘಾಟನಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಪದವಿಪೂರ್ವ ಪ್ರಾಚಾರ್ಯ ಸೋಮಶೇಖರ ನಾಯಕ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಮೌಲ್ಯಯುತ ಸಂಸ್ಕಾರಯುತ ಶಿಕ್ಷಣ ಪಡೆದುಕೊಳ್ಳುವಂತೆ ಹೇಳಿದರು.

ಪದವಿ ಪ್ರಾಚಾರ್ಯ ಅಶ್ವತ್ಥನಾರಾಯಣ ಹೆಗಡೆ ಮಾತನಾಡಿ, ವಿದ್ಯಾರ್ಥಿ ಜೀವನ ಅಮೂಲ್ಯವಾದುದು ಅದರ ಸದುಪಯೋಗ ಪಡೆದುಕೊಳ್ಳಿ ಎಂದರು. ಸ್ಥಳೀಯ ಆಡಳಿತ ಮಂಡಳಿಯ ಸದಸ್ಯ ಡಾ. ಮಿನಲ್ ನಾರ್ವೇಕರ, ಡಾ. ಸ್ಮಿತಾ ಪಾತ್ರೇಪೆಕರ ಮಾತನಾಡಿದರು.

ಉಪನ್ಯಾಸಕಿ ವರ್ಷಾ ನಾಯ್ಕ ಸ್ವಾಗತಿಸಿದರು. ವಿದ್ಯಾ ಆಗೇರ ಪರಿಚಯಿಸಿದರು. ಶಿಲ್ಪಾ ಶಾನಭಾಗ ವಂದಿಸಿದರು. ಜಯಾ ಗಾಂವಕರ ನಿರೂಪಿಸಿದರು. ಸಂತೋಷ ಬಂಟ, ವಿದ್ಯಾರ್ಥಿಗಳು, ಬೋಧಕೇತರ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ನಾಗರಾಜ ರಾಯ್ಕರ ಪದೋನ್ನತಿ

• **ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ**



ತಾಲೂಕಿನ ಹಿಲ್ಲೂರು ಸರಕಾರಿ ಪ್ರೌಢಶಾಲೆಯಲ್ಲಿ ನಾಗರಾಜ ರಾಯ್ಕರ ಅವರು ಕಳೆದ 22 ವರ್ಷಗಳಿಂದ ಮುಖ್ಯಾಧ್ಯಾಪಕರಾಗಿ ಸೇವೆ ಸಲ್ಲಿಸಿ ಈಗ ಶಿರಸಿ ಶೈಕ್ಷಣಿಕ ಜಿಲ್ಲೆಯ ಅಕ್ಷರದಾಸೋಹ ಅಧಿಕಾರಿಯಾಗಿ ಪದೋನ್ನತಿ ಪಡೆದಿದ್ದಾರೆ. ತಮ್ಮ ಸೇವಾವಧಿಯಲ್ಲಿ ಶಾಲೆಯ ಬೆಳಿಹಬ್ಬ ಸೇರಿದಂತೆ ಅನೇಕ ವಿದಾಯಕ ಕಾರ್ಯಗಳನ್ನು ಮಾಡಿದ್ದರು.

## ಕಂದಕಕ್ಕೆ ಉರುಳಿದ ಖಾಸಗಿಬಸ್ : 20 ಪ್ರಯಾಣಿಕರಿಗೆ ಗಾಯ



• **ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ**

ಬೆಂಗಳೂರಿನಿಂದ ಕಾರವಾರಕ್ಕೆ ತೆರಳುತ್ತಿದ್ದ ಖಾಸಗಿ ಬಸ್ಸೊಂದು ತಾಲೂಕಿನ ರಾಷ್ಟ್ರೀಯ ಹೆದ್ದಾರಿ 66ರ ಹಾರವಾಡ ಕ್ರಾಸ್ ಸಮೀಪ ಗುರುವಾರ ಬೆಳಿಗ್ಗೆ ಚಾಲಕನ ನಿಯಂತ್ರಣ ತಪ್ಪಿ ರಸ್ತೆಯ ಪಕ್ಕದ ಕಂದಕಕ್ಕೆ ಮುಗುಚಿಬಿದ್ದ ಘಟನೆ ನಡೆದಿದೆ. ಬಸ್‌ನಲ್ಲಿದ್ದ ಸುಮಾರು 20 ಪ್ರಯಾಣಿಕರು ಸಣ್ಣಪುಟ್ಟ ಗಾಯಗೊಂಡು ಭಾರಿ ಅನಾಹುತದಿಂದ ಪಾರಾಗಿದ್ದಾರೆ.

ಬೆಂಗಳೂರಿನಿಂದ ಕಾರವಾರದತ್ತ ತೆರಳುತ್ತಿದ್ದ ಬಸ್, ಅವರ್ಸಾ ಗಡಿ ಪ್ರದೇಶದ ಕಿರು ಸೇತುವೆ ಅಂಚಿನ ತಗ್ಗು ಪ್ರದೇಶದ ಬಳಿ ಅದಾವುದೋ ಕಾರಣದಿಂದ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿಯ ತಗ್ಗು ಪ್ರದೇಶಕ್ಕೆ ಪಲ್ಟಿಯಾಗಿದೆ. ಒಂದುಬಾರಿ ಮಾತ್ರ ಪಲ್ಟಿಯಾಗಿದ್ದು ಅಲ್ಲಿ ಮರ ಇದ್ದುದರಿಂದಾಗಿ ಮತ್ತೆ ಪಲ್ಟಿಯಾಗಲು ತಡೆಯೊಡ್ಡಿದಂತಾಯಿತು. ಇದರಿಂದಾಗಿ ನಡೆಯಬಹುದಾದ ಬಹುದೊಡ್ಡ ಅನಾಹುತ ತಡೆದಂತಾಗಿದೆ.

ತಕ್ಷಣ ಸ್ಥಳೀಯರು ಎನ್‌ಎಚ್‌ಎಐ ಅಂಬುಲೆನ್ಸ್ ಮೂಲಕ ಗಾಯಾಳುಗಳನ್ನು ಅಂಕೋಲಾ ತಾಲೂಕು ಆಸ್ಪತ್ರೆಗೆ ದಾಖಲಿಸಿದರು. ಪಿಐ ಚಂದ್ರಶೇಖರ್ ಮಠಪತಿ ಹಾಗೂ ಪೊಲೀಸ್ ಸಿಬ್ಬಂದಿಗಳು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಕಾನೂನು ಕ್ರಮ ಕೈಗೊಂಡಿದ್ದಾರೆ. ಬಸ್‌ಚಾಲಕ ಸ್ಥಳೀಯ ಕಾಕರಮಠದ ನಿವಾಸಿ ರಫಿಕ್ ಎಂದು ತಿಳಿದುಬಂದಿದೆ.

## ಜಿ. ಸಿ. ಕಾಲೇಜಿನಲ್ಲಿ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ



• **ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ**

ವಚನ ಪಿತಾಮಹ ಫ. ಗು. ಹಳಕಟ್ಟಿ ಅವರ 147 ನೇಯ ಜನ್ಮದಿನದ ಪ್ರಯುಕ್ತ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆಯನ್ನು ಗುರುವಾರ ಪಟ್ಟಣದ ಗೋಖಲೆ ಸೆಂಟನರಿ ಕಾಲೇಜಿನಲ್ಲಿ ಆಚರಿಸಲಾಯಿತು. ಪ್ರಾಚಾರ್ಯ ಸಿದ್ದಲಿಂಗಸ್ವಾಮಿ ವಸ್ತದ ಮಾತನಾಡಿ, ಕನ್ನಡದ ತವ ನಿಧಿಯಾಗಿರುವ ವಚನ ಸಾಹಿತ್ಯ ಸಂಗ್ರಹ, ಸಂಶೋಧನೆ ಮೂಲಕ ನಾಡಿನ ಸಾಂಸ್ಕೃತಿಕ ಹಿರಿಮೆಯನ್ನು ಹಳಕಟ್ಟಿ ಅವರು ಉಳಿಸಿದ್ದಾರೆ. ವಚನ ಸಾಹಿತ್ಯ ಮುದ್ರಣ, ಪ್ರಸಾರಕ್ಕಾಗಿ ಸ್ವಂತ ಮನೆಯನ್ನು ಅವರು ಮಾರಾಟ ಮಾಡಿದ್ದರು. ಇಂತಹ ಮಹನೀಯರ ಜನ್ಮದಿನವನ್ನು ವಚನ ಸಂರಕ್ಷಣೆ ದಿನವನ್ನಾಗಿ ಸರಕಾರ ಘೋಷಿಸಿರುವುದು ಶ್ಲಾಘನೀಯ ಎಂದರು.

ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳು ಹಳಕಟ್ಟಿ ಅವರ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸಿದರು. ಗ್ರಂಥಪಾಲಕ ನಂಜುಂಡಯ್ಯ ಸಿಬ್ಬಂದಿಗಳಾದ ಪ್ರವೀಣ ನಾಯ್ಕ, ಸುಲಕ್ಷಾ ನಾಯ್ಕ, ಪೃಥ್ವಿ ನಾಯಕ, ರೇಣುಕಾ ಮೇಥಾ, ಮಂಜು ಆಗೇರ, ಭರತ ಗುನಗಾ, ಕವಿತಾ ನಾಯಕ, ಸಚಿನ್ ಶೆಟ್ಟಿ, ನಾಗರಾಜ ಶೆಟ್ಟಿ ಇತರರಿದ್ದರು.

## ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಅಣಕು ತುರ್ತು ಪರಿಸ್ಥಿತಿ ಅಭ್ಯಾಸ

• **ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು**

ಜು02 :ಸಾರ್ವಜನಿಕರ ತುರ್ತುಪರಿಸ್ಥಿತಿನಿರ್ವಹಣಾಸಾಮರ್ಥ್ಯವನ್ನು ಹೆಚ್ಚಿಸುವ ಹಾಗೂ ವಿವಿಧ ಇಲಾಖೆಗಳ ನಡುವಿನ ಸಮನ್ವಯವನ್ನು ಬಲಪಡಿಸುವಉದ್ದೇಶದಿಂದರಾಜ್ಯದ30ಜಿಲ್ಲೆಗಳವಿವಿಧ ಸಾರ್ವಜನಿಕ ಸ್ಥಳಗಳಲ್ಲಿ ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ವತಿಯಿಂದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿಅಣಕು ತುರ್ತು ಪರಿಸ್ಥಿತಿಅಭ್ಯಾಸ(MockDrillವನ್ನುಬುಧವಾರ(ಜು.2) ಯಶಸ್ವಿಯಾಗಿ ನಡೆಸಲಾಯಿತುಅಗ್ನಿಶಾಮಕಮತ್ತು ತುರ್ತು ಸೇವೆಗಳು ಮತ್ತು ರಾಜ್ಯವಿಪತ್ತುಸ್ಪಂದನಾಪಡೆ ಇಲಾಖೆಯ ಅಧಿಕಾರಿ ಸಿಬ್ಬಂದಿಗಳುಈಅಭ್ಯಾಸದಲ್ಲಿ ಸಕ್ರಿಯವಾಗಿಭಾಗವಹಿಸಿತುರ್ತುಪರಿಸ್ಥಿತಿಯಲ್ಲಿಕೈಗೊಳ್ಳಬೇಕಾದ ಕ್ರಮಗಳನ್ನು ಪ್ರಾಯೋಗಿಕವಾಗಿ ಪ್ರದರ್ಶಿಸಿದರು.

## ರೈತರು ಮೊಬೈಲನಲ್ಲಿ ಬೆಳೆ ವಿವರ ಆಪ್ ಲೋಡ ಮಾಡಿದರೆ ಸಿಗಲಿದೆ ಸಾಲ, ವಿಮೆ ಪರಿಹಾರದ ಭದ್ರತೆ ಡಿಜಿಟಲ್ ಸಮೀಕ್ಷೆ : ಬೆರಳ ತುದಿಯಲ್ಲಿ ಬೆಳೆ ಮಾಹಿತಿ

**ಮಲ್ಲಮ್ಮ ನುಡಿ ವಾರ್ತೆ ಇಂಡಿ:**

ಕೃಷಿಕ್ಷೇತ್ರದಲ್ಲಿ ಪಾರದರ್ಶಕತೆ ಹೆಚ್ಚಿಸಲು ಹಾಗೂ ಸರಕಾರದ ವಿವಿಧ ಸೌಲಭ್ಯಗಳು ನಿಜವಾದ ರೈತರಿಗೆ ತಲುಪುವಂತೆ ಮಾಡಲು 2026–27 ನೇ ಸಾಲಿನ ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆ ಯೋಜನೆ ಆರಂಭವಾಗಿದೆ. ಈ ಬಾರಿ ರೈತರು ತಮ್ಮ ಜಮೀನದಲ್ಲಿ ಬೆಳೆದಿರುವ ಬೆಳೆಗಳ ಮಾಹಿತಿಯನ್ನು ತಾವೇ ತಮ್ಮ ಮೋಬೈಲ ಮೂಲಕ ಆಪ್ ಲೋಡ ಮಾಡುವ ಅವಕಾಶ ಕಲ್ಪಿಸಲಾಗಿದೆ. ಹಿಂದಿನ ವರ್ಷಗಳಲ್ಲಿ ಸರಕಾರಿ ಸಿಬ್ಬಂದಿ ಅಥವಾ ಖಾಸಗಿ ನಿವಾಸಿಗಳು ನಡೆಸುತ್ತಿದ್ದ ಬೆಳೆ ಸಮೀಕ್ಷೆಯಲ್ಲಿ ಕೆಲವೊಮ್ಮೆ ಬೆಳೆ ಮಾಹಿತಿ ತಪ್ಪಾಗಿ ದಾಖಲಾಗಿರುವದು ವಿಳಂಬವಾಗುವದು ಅಥವಾ ರೈತರು ಸೌಲಭ್ಯಗಳಿಂದ ವಂಚಿತವಾಗುವಂತಹ ಸಮಸ್ಯೆಗಳು ಎದುರಾಗುತ್ತಿದ್ದವು. ಈ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ನೀಡುವ ಉದ್ದೇಶದಿಂದ ಸರಕಾರ ರೈತರ ಬೆಳೆ ಸಮೀಕ್ಷೆ ಮೊಬೈಲ್ ಆಪ್ 2026–27 ಅನ್ನು ಮತ್ತಷ್ಟು ಸರಳಗೊಳಿಸಿದೆ. ಈ ಆಪ್ ಅನ್ನು ಪ್ರ್ಯೂಟ್ ತಂತ್ರಾಂಶ ದೊಂದಿಗೆ ಸಂಯೋಜಿಸಲಾಗಿದ್ದು ರೈತರ ಗುರುತಿನ ಸಂಖ್ಯೆ ಮೂಲಕ ಪಹಣಿ ಸರ್ವೇ ನಂಬರ ಜಿಐಎಸ್ ಮ್ಯಾಪ್



ಹಾಗೂ ಜಮೀನಿನ ವಿವರಗಳು ಸ್ವಯಂ ಚಾಲಿಕವಾಗಿ ಲಭ್ಯವಾಗುತ್ತದೆ.ಹೀಗಾಗಿ ರೈತರು ತಮ್ಮ ಜಮೀನಿನ ಗಡಿಯೊಳಗೆ ನಿಂತು ಬೆಳೆ ವಿವರ ಗಳನ್ನು ದಾಖಲಿಸಿ ಬೆಳೆಯ ವಿಸ್ತೀರ್ಣ ದೊಂದಿಗೆ ಎರಡು ಭಾವಚಿತ್ರಗಳನ್ನು ಆಪ್ ಲೋಡ ಮಾಡಿದರೆ ಸಮೀಕ್ಷೆ ಪೂರ್ಣಗೊಳ್ಳುತ್ತದೆ.ಬೆಳೆ ಸಮೀಕ್ಷೆ ಕೇವಲ ಅಂಕಿ ಅಂಶ ಸಂಗ್ರಹವಲ್ಲ. ಇದು ರೈತರ ಭವಿಷ್ಯದ ಅರ್ಥಿಕ ಭದ್ರತೆಯ ಪ್ರಮುಖ ದಾಖಲೆ. ಬೆಳೆಸಾಲ, ಬೆಳೆ ವಿಮೆ ಬೆಳೆ ಹಾನಿ ಪರಿಹಾರ ಬೆಂಬಲ ಬೆಲೆಯಡಿ ಖರೀದಿ ಸೇರಿದಂತೆ ಹಲವು ಯೋಜನೆಗಳ ಲಾಭ ಪಡೆಯಲು ಈ ಮಾಹಿತಿಯೇ ಆಧಾರವಾಗುತ್ತದೆ. ಅಲ್ಲದೆ ಪಹಣಿಯಲ್ಲಿ ವಿವರ ದಾಖಲಿಸಲು ಸಹ ಇದೇ ಮಾಹಿತಿಯನ್ನು ಬಳಸಲಾಗುತ್ತದೆ.

ರೈತರು ಮೊದಲಿಗೆ ಪ್ಲೇ ಸ್ಟೋರ್ ನಿಂದ ಆಪ್ ಡೌನ ಲೋಡ ಮಾಡಿಕೊಂಡು ಆಧಾರ್ ಸಂಖ್ಯೆಯ ಮೂಲಕ ಇ ಕೆವೈಸಿ ಪೂರ್ಣ ಗೊಳಿಸಬೇಕು. ನಂತರ ಬರುವ ಒಟಿಪಿ ದಾಖಲಿಸಿ ಆಪ್ ಸಕ್ರಿಯಗೊಳಿಸಬಹುದು. ಒಮ್ಮೆ ಸಕ್ರಿಯಗೊಳಿಸಿದ ಬಳಿಕ ಮುಂದಿನ ಎಲ್ಲ ಹಂಗಾಮುಗಳಲ್ಲೂ ಇದೇ ಆಪ್ ಬಳಸುವ ಅವಕಾಶವಿದೆ.

ತಾಲೂಕಿನ ರೈತರು ನಿಗದಿತ ಅವಧಿಯೊಳಗೆ ತಮ್ಮ ಬೆಳೆ ಮಾಹಿತಿಯನ್ನು ಆಪ್ ಲೋಡ ಮಾಡುವದು ಅತ್ಯಗತ್ಯವಾಗಿದೆ. ಮೊಬೈಲ ಬಳಕೆಯಲ್ಲಿ ತೊಂದರೆ ಇದ್ದಲ್ಲಿ ಗ್ರಾಮದ ಖಾಸಗಿ ಸಮೀಕ್ಷೆದಾರರ ಹಾಗೂ ಕಂದಾಯ ಕೃಷಿ ತೋಟಗಾರಿಕೆ ರೇಷ್ಮೇ ಮತ್ತು ಸಾಂಖ್ಯಿಕ ಇಲಾಖೆಗಳ ಅಧಿಕಾರಿಗಳ ನೆರವು ಪಡೆಯಬಹುದು.

> ಬೆಳೆ ಸಮೀಕ್ಷೆ ಮಾಹಿತಿ ಸರಕಾರದ ಯೋಜನೆಗಳ ಲಾಭ ಪಡೆಯಲು ಮೂಲಕ ದಾಖಲೆ ಆದ್ದರಿಂದ ಪ್ರತಿಯೊಬ್ಬ ರೈತರು ನಿಗದಿತ ಸಮಯ ದೊಳಗೆ ತಮ್ಮ ಬೆಳೆ ವಿವರಗಳನ್ನು ಸ್ವತಃ ಮೊಬೈಲ್ ಆಪ್ ಮೂಲಕ ದಾಖಲಿಸಿ ಸೌಲಭ್ಯಗಳಿಂದ ವಂಚಿತವಾಗದಂತೆ ನೋಡಿಕೊಳ್ಳಬೇಕು.
>
> **ಚಂದ್ರಕಾಂತ ಪವಾರ ಕೃಷಿ ಉಪ ನಿರ್ದೇಶಕರು ಇಂಡಿ**

## ವೈದ್ಯಕೀಯ ನೀತಿಶಾಸ್ತ್ರದ ಸ್ತಂಭವಾಗಿದೆ : ಡಾ. ಎಂ.ವ್ಹಿ ಜೋಷಿ

• **ಮಲ್ಲಮ್ಮ ನುಡಿ ವಾರ್ತೆಮುದಗಲ್**



ವೈದ್ಯಕೀಯ ನೀತಿಶಾಸ್ತ್ರದ ಪ್ರಮುಖ ಸ್ತಂಭವಾಗಿದೆ ಎಂದು ಹಿರಿಯ ವೈದ್ಯ ಎಂ.ವ್ಹಿ ಜೋಷಿ ಬುಧುವಾರ ಸಂಜೆ ಹೇಳಿದರು.ಪಟ್ಟಣದ ಶ್ರೀ ವಿಜಯ ಮಹಾಂತೇಶ ಮಠ ಸಮೀಪದ ರಾಘವೇಂದ್ರ ಸುರಪುರ ನಿವಾಸದ ಪಕ್ಕದಲ್ಲಿ ಔಷಧಿ ವಿತರಕ ವರ್ತಕರ ಸಂಘದ ವತಿಯಿಂದ ಆಯೋಜಿಸಿದ್ದ ವೈದ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಜ್ಯೋತಿ ಬೆಳಸಿ ಮಾತನಾಡಿದ ಅವರು ಡಾ.ಬಿ.ಸಿ. ರಾಯ್ ಅವರ ನೆನಪಿಗಾಗಿ ಪ್ರತಿವರ್ಷ ಜುಲೈ 1 ರಂದು ವೈದ್ಯರ ದಿನವನ್ನು ಆಚರಿಸಲಾಗುತ್ತದೆ. ಜನರ ಜೀವನವನ್ನು ಸುಧಾರಿಸುವ ಮತ್ತು ತಮ್ಮ ಪರಿಣತಿಯಿಂದ ಅಸಂಖ್ಯಾತ ಜೀವಗಳನ್ನು ಉಳಿಸುವ ಎಲ್ಲ ವೈದ್ಯರಿಗೂ ಸಲ್ಲಿಸುವ ಗೌರವವಾಗಿದೆ ಎಂದು ಮಾತನಾಡಿದರು.

ಡಾ! ಗುರುರಾಜ ದೇಶಪಾಂಡೆ ಮಾತನಾಡಿ ವೈದ್ಯೋ ನಾರಾಯಣೋ ಹರಿ ಎಂಬ ಪ್ರಾಚೀನ ಸಂಸ್ಕೃತ ನುಡಿಗಟ್ಟು ತುಂಬಾ ಅರ್ಥಗರ್ಭಿತವಾಗಿದೆ. ಡಾ.ಬಿ.ಸಿ.ರಾಯ್ ರಾಜಕೀಯದಲ್ಲಿದ್ದರೂ ವೈದ್ಯ ವೃತ್ತಿಯ ಮೇಲಿದ್ದ ಅಪಾರವಾದ ಗೌರವದಿಂದ ಇಂದು ಅವರನ್ನು ಇಡೀ ಪ್ರಪಂಚವೇ ಗೌರವಿಸುತ್ತಿದೆ. ದಣಿವರಿಯದೇ ಕೆಲಸ ಮಾಡಿದರು. ರಾಜಕೀಯ ರಂಗದಲ್ಲಿ ಅಂತಹ ಗೌರವ ಇಲ್ಲ. ಆದರೆ, ವೈದ್ಯ ವೃತ್ತಿ ಹಾಗಲ್ಲ. ಒಬ್ಬ ವ್ಯಕ್ತಿಯ ಜೀವ ಉಳಿಸುವ ಮಹತ್ತರವಾದ ವೃತ್ತಿ ಆಗಿದೆ. ವೈದ್ಯರು ಸಮಾಜದಲ್ಲಿ ಆದರ್ಶಪ್ರಾಯರಾಗಿರಬೇಕು ಎಂದು ತಿಳಿಸಿದರು. ಡಾ! ವಿಶ್ವನಾಥ ಮಾಟೂರು ಮಾತನಾಡಿ ವೈದ್ಯಕೀಯ, ಶಸ್ತ್ರಚಿಕಿತ್ಸೆಯ ಕಲೆ ಮತ್ತು ವಿಜ್ಞಾನದ ಕೆಲಸವು ಪೈಪೋಟಿಯಿಂದ ಮಾಡುವ ಕೆಲಸವಲ್ಲ. ವೈದ್ಯ ವೃತ್ತಿಯಲ್ಲಿ ವೃತ್ತಿ ಬಗ್ಗೆ ಮಾಹಿತಿ ಇಲ್ಲದೆ ರೋಗಿಗಳಿಗೆ ಆದಿ ತಪ್ಪಿಸುವ ಕೆಲಸ ಮಾಡಬಾರದು. ತುರ್ತು ಚಿಕಿತ್ಸೆಯ ರೋಗಿಗಳಿಗೆ ಶೀಘ್ರ ಗುಣಮುಖರಾಗುವ ಆತ್ಮಸ್ಥೈರ್ಯದ ಭರವಸೆ ನೀಡಬೇಕು. ರಕ್ತನಾಳ ಹೆಪ್ಪುಗಟ್ಟಿರುವ ರೋಗಿಗಳ ಆರೈಕೆ ಮಾಡಿ ನಮ್ಮಲ್ಲಿ ಚಿಕಿತ್ಸೆ ನೀಡಲಾಗಿದೆ ಇದಕ್ಕೆ ಮುಖ್ಯವಾಗಿ ಸಾರ್ವಜನಿಕರ ಸಹಕಾರ ಅವಶ್ಯಕತೆ ಇದೆ ಎಂದು ಮಾತನಾಡಿದರು.

ಕಾರ್ಯಕ್ರಮದಲ್ಲಿ ಸೂಗೂರು ಆಸ್ಪತ್ರೆ ರೇಡಿಯೋಲ್ಜಿಸ್ಟ್ ಡಾ.ವಿಷ್ಣುವರ್ಧನ, ಮಕ್ಕಳ ಆಸ್ಪತ್ರೆ ಡಾ. ಸುನಿಲ್ ಮೈತ್ರಿ, ಸಂಗಮೇಶ ಸರಗಣಾಚಾರಿ ಮಾತನಾಡಿದರು.

ಔಷಧಿ ವಿತರಕ ವರ್ತಕರ ಸಂಘದ ಪದಾಧಿಕಾರಿಗಳು ವೆಂಕಟೇಶ ಕುಲಕರ್ಣಿ, ಅಶ್ವಿನಿ, ಸುಜಿತ್ ಸುರಪುರ, ರಾಜು ಬುಜೂರ್ಕರ್, ಮುದಿವೀರಪ್ಪ ಜಿಡಿ, ಶರಣಬಸವ, ಅಲಂ ಖಾನ್, ದೊಡ್ಡನಗೌಡ ಸೇರಿದಂತೆ ಇತರರಿದ್ದರು.

## ವಚನ ಸಾಹಿತ್ಯ ಸಂರಕ್ಷಣೆಗೆ ಡಾ. ಫ.ಗು. ಹಳಕಟ್ಟಿ ಅವರ ಕೊಡುಗೆ ಅಪಾರ: ಡಾ. ಔದ್ರಾಮ



ವಿಜಯಪುರ,ಜು.02: 12ನೇ ಶತಮಾನದ ಶರಣರ ವಚನ ಸಾಹಿತ್ಯವನ್ನು ಸಂಗ್ರಹಿಸಿ, ಸಂರಕ್ಷಿಸಿ ಮನುಕುಲಕ್ಕೆ ತಲುಪಿಸಿದ ಮಹಾನ್ ದಾರ್ಶನಿಕ ಡಾ. ಫ.ಗು. ಹಳಕಟ್ಟಿ ಅವರ ಸೇವೆ ಕನ್ನಡ ಸಾಹಿತ್ಯ ಲೋಕಕ್ಕೆ ಅನನ್ಯ ಕೊಡುಗೆ–ಯಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಡಾ. ಔದ್ರಾಮ ಹೇಳಿದರು. ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಗುರುವಾರ ಡಾ. ಫ.ಗು. ಹಳಕಟ್ಟಿ ಅವರ ಜನ್ಮದಿನದ ಅಂಗವಾಗಿ ಹಮ್ಮಿಕೊಂಡಿದ್ದ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ವಚನಗಳು ಕೇವಲ ಸಾಹಿತ್ಯವಲ್ಲ, ಬದುಕಿನ ಮೌಲ್ಯಗಳನ್ನು ಬೋಧಿಸುವ ಅಮೂಲ್ಯ ಸಂದೇಶಗಳಾಗಿವೆ. ಅವು ವಿವಿಧ ಭಾಷೆಗಳಿಗೆ ಭಾಷಾಂತರಗೊಂಡು ಜಗತ್ತಿನಾದ್ಯಂತ ಪಸರಿಸಬೇಕು. ವಚನ ಸಾಹಿತ್ಯವನ್ನು ಸಂಗ್ರಹಿಸಿ ಮುಂದಿನ ಪೀಳಿಗೆಗೆ ಉಳಿಸಿಕೊಟ್ಟ ಡಾ. ಫ.ಗು. ಹಳಕಟ್ಟಿ ಅವರ ಸಾಧನೆ ಯುವಜನರಿಗೆ ಪ್ರೇರಣೆಯಾಗಬೇಕು. ವಿದ್ಯಾರ್ಥಿಗಳು ಇಂತಹ ಮಹನೀಯರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಉಪನ್ಯಾಸ ನೀಡಿದ: ಡಾ. ವಿ.ಡಿ.ಐಹೊಳ್ಳಿ ಅವರು ಡಾ. ಫ.ಗು. ಹಳಕಟ್ಟಿ ಅವರ ಜೀವನ, ಸಾಹಿತ್ಯ ಸೇವೆ ಹಾಗೂ ವಚನ ಸಾಹಿತ್ಯ ಸಂರಕ್ಷಣೆಗೆ ಅವರು ನೀಡಿದ ಅಮೂಲ್ಯ ಕೊಡುಗೆ ಹಾಗೂ ಶರಣರ ವಚನಗಳನ್ನು ಸಂಗ್ರಹಿಸಿ, ಸಂರಕ್ಷಿಸಿ ಮುಂದಿನ ಪೀಳಿಗೆಗೆ ತಲುಪಿಸಿದ ಡಾ. ಫ.ಗು. ಹಳಕಟ್ಟಿ ಅವರ ಸೇವೆ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಅಜರಾಮರವಾಗಿದೆ ಎಂದು ಅವರು ಹೇಳಿದರು. ವಚನ ಸಾಹಿತ್ಯದಲ್ಲಿರುವ ಮಾನವೀಯ ಮೌಲ್ಯಗಳು, ಸಮಾನತೆ ಮತ್ತು ಸಾಮಾಜಿಕ ನ್ಯಾಯದ ಸಂದೇಶಗಳನ್ನು ಯುವಜನತೆ ಅಳವಡಿಸಿಕೊಳ್ಳುವ ಅಗತ್ಯವಿದೆ ಎಂದು ತಿಳಿಸಿದರು. ಡಾ. ಫ.ಗು. ಹಳಕಟ್ಟಿ ಅವರ ಜೀವನ, ಸಾಧನೆ ಕುರಿತು ಸಹ ವಿಸ್ತಾರವಾಗಿ ಆರ್ಥಿಕ ಸಂಕಷ್ಟಗಳ ನಡುವೆಯೂ ತಮ್ಮ ವಕೀಲ ವೃತ್ತಿಯನ್ನು ತ್ಯಜಿಸಿ ಶರಣರ ವಚನಗಳನ್ನು ಸಂಗ್ರಹಿಸುವುದು, ಮುದ್ರಿಸುವುದು ಹಾಗೂ ಪ್ರಸಾರಗೊಳಿಸುವ ಕಾರ್ಯಕ್ಕೆ ಜೀವನವನ್ನೇ ಮುಡಿಪಾಗಿಟ್ಟಿದ್ದ ಡಾ. ಫ.ಗು. ಹಳಕಟ್ಟಿ ಅವರು ನಿಸ್ವಾರ್ಥ ಸೇವೆಯ ಪ್ರತೀಕವಾಗಿದ್ದರು. ಸಂಶೋಧಕ, ಸಮಾಜಸೇವಕ ಹಾಗೂ ಕನ್ನಡದ ಅಭಿಮಾನಿಯಾಗಿದ್ದ ಅವರು ವಿಜಯಪುರ ನಗರದ ಅಭಿವೃದ್ಧಿ ಮತ್ತು ಕನ್ನಡ ಭಾಷೆಯ ಬೆಳವಣಿಗೆಗೂ ಮಹತ್ವದ ಕೊಡುಗೆ ನೀಡಿದರು ಎಂದು ಹೇಳಿದರು. ವಿಜಯಪುರ ನಗರಸಭೆಯ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಹೆಣ್ಣುಮಕ್ಕಳ ಶಿಕ್ಷಣಕ್ಕೆ ವಿಶೇಷ ಒತ್ತು ನೀಡಿದ ಅವರು, ನಗರದ ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕಾಗಿ ಸರ್ ಎಂ. ವಿಶ್ವೇಶ್ವರಯ್ಯ ಅವರ ಮಾರ್ಗದರ್ಶನದಲ್ಲಿ ಭೂತನಾಳ ಕೆರೆ ನಿರ್ಮಾಣಕ್ಕೆ ಶ್ರಮಿಸಿದರು. ಎಂದು ತಿಳಿಸಿದರು. ಡಾ. ಫ.ಗು. ಹಳಕಟ್ಟಿ ಅವರು ಸಂರಕ್ಷಿಸಿದ ವಚನ ಸಾಹಿತ್ಯದ ಸಂದೇಶಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ ಎಂದು ಅವರು ಹೇಳಿದರು. ಸಮಾಜ ಮುಖಂಡ ಬಿ.ಎನ್. ನೂಲವಿ ಅವರು ಮಾತನಾಡಿದರು. ಡಾ. ಫ.ಗು. ಹಳಕಟ್ಟಿ ಅವರ ಜೀವನ ಚರಿತ್ರೆ ಹಾಗೂ ವಚನ ಸಂರಕ್ಷಣೆ ಕುರಿತು ಶಾಲಾ–ಕಾಲೇಜಗಳ ಪಠ್ಯ ಪುಸ್ತಕದಲ್ಲಿ ಸೇರಿಸಲು ಮನವಿ ಮಾಡಿಕೊಂಡರು.

ಕಾರ್ಯಕ್ರಮದಲ್ಲಿ ಜಿಲ್ಲಾ ಆಯುಷ ಇಲಾಖೆ ಅಧಿಕಾರಿ ವಿದ್ಯಾವತಿ ಅಥಣಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ ಭೋವಿ, ಅಡಿವೆಪ್ಪ ಸಾಲಗಲ್, ಭೀಮರಾಯ ಜಿಗಜಿಣಗಿ, ಸೋಮನಗೌಡ ಕಲ್ಲೂರು, ವಿದ್ಯಾವತಿ ಅಂಕಲಗಿ, ಡಾ. ಎಮ್.ಆರ್. ಗುರಿಕರ, ಅಶೋಕ ಅಂಕದ, ಸಂಗಮೇಶ ಮೇತ್ರಿ ಹಾಗೂ ಕೆ.ಎಮ್.ಅಂಕಲಗಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

## ಒಂದು ದಿನದ ಉದ್ಯಮಶೀಲತಾಭಿವೃದ್ಧಿ ಜಾಗೃತಿ ಶಿಬಿರ ಹೆಸರು ನೋಂದಣಿ ಮಾಡಿಕೊಳ್ಳಲು ಜಂಟಿ ನಿರ್ದೇಶಕರ ಸೂಚನೆ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ**

ಜು.02–ಕಲಬುರಗಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ ಇವರ ಪ್ರಾಯೋಜಕತ್ವದಲ್ಲಿ ಕಲಬುರಗಿ(ಸಿಡಾಕ್) ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ ಮುಖಾಂತರ ಸ್ವಯಂ ಉದ್ಯೋಗ ಪ್ರಾರಂಭಿಸಲು ಆಸಕ್ತಿಯುಳ್ಳ ಎಲ್ಲಾ ವರ್ಗದ ಮಹಿಳೆಯರಿಗೆ ಒಂದು ದಿನದ ಉದ್ಯಮಶೀಲತಾಭಿವೃದ್ಧಿ

ಜಾಗೃತಿ ಶಿಬಿರವನ್ನು ಕಲಬುರಗಿ ಜೇವರ್ಗಿ ಕ್ರಾಸ್ ಹತ್ತಿರದ (ಬಸ್ ಡಿಪೋನಂ.1ರ ಎದುರುಗಡೆ) ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ (ವಿಭಾಗೀಯ ಕಚೇರಿ) ಜಂಟಿ ನಿರ್ದೇಶಕರ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕಲಬುರಗಿ ಸಿಡಾಕ್ ಸಲಹೆಗಾರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಈ ಶಿಬಿರದಲ್ಲಿ ಉದ್ಯಮಶೀಲತೆಯ ಪರಿಚಯ,

ಸ್ವ ಉದ್ಯಮವನ್ನು ಸ್ಥಾಪಿಸಲು ಅನುಸರಿಸಬೇಕಾದ ಕ್ರಮಗಳು, ಬ್ಯಾಂಕಿನ ವ್ಯವಹಾರ, ಉದ್ಯಮಗಳನ್ನು ಪ್ರಾರಂಭಿಸಲು ಸಾಲ ಸೌಲಭ್ಯಕ್ಕಾಗಿ ಇರುವ ಸರ್ಕಾರದ ಯೋಜನೆಗಳು ಮತ್ತು ಮತ್ತಿತರ ವಿಷಯಗಳ ಕುರಿತು ಮಾಹಿತಿ ನೀಡಲಾಗುತ್ತದೆ. ವಯೋಮಿತಿ 20 ವರ್ಷ ರಿಂದ 40 ವರ್ಷದೊಳಗಿನ ಮತ್ತು ಕನಿಷ್ಠ ಎಸ್.ಎಸ್.ಎಲ್.ಸಿ. ಉತ್ತೀರ್ಣ/ಅನುತ್ತೀರ್ಣರಾದ ಎಲ್ಲಾ ವರ್ಗದ ಮಹಿಳೆಯರು ಮೋಬೈಲ್ ಸಂಖ್ಯೆ 8884872109, 9108972833 ಗಳಿಗೆ ಕರೆ ಮಾಡಿ ಅಥವಾ ಕಲಬುರಗಿ (ಸಿಡಾಕ್) ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರದ ಕಚೇರಿಗೆ ಬಂದು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

# ವಾರ್ಡ್ 33ರ ವಿನಾಯಕ ನಗರದಲ್ಲಿ 1.50 ಕೋಟಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ , ಮೂಲಸೌಕರ್ಯ ಅಭಿವೃದ್ಧಿಗೆ ಮತ್ತೊಂದು ಹೆಜ್ಜೆ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ನಗರದ ವಾರ್ಡ್ ಸಂಖ್ಯೆ 33ರ ವಿನಾಯಕ ನಗರ ಪ್ರದೇಶದಲ್ಲಿ ಸುಮಾರು ?1.50 ಕೋಟಿ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಪಾಲಿಕೆ ಸದಸ್ಯೆ ಜಾನಕಿ ಅವರಿಂದ ಗುರುವಾರ ಭೂಮಿ ಪೂಜೆ ನೆರವೇರಿತು. ನಗರದ ಮೂಲಸೌಕರ್ಯವನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಕೈಗೆತ್ತಿಕೊಳ್ಳಲಾಗಿರುವ ಈ ಕಾಮಗಾರಿ ಸ್ಥಳೀಯ ನಿವಾಸಿಗಳ ಬಹುಕಾಲದ ಬೇಡಿಕೆಯಾಗಿದ್ದು, ಕಾಮಗಾರಿ ಪೂರ್ಣಗೊಂಡ ಬಳಿಕ ಸಂಚಾರ ವ್ಯವಸ್ಥೆಯಲ್ಲಿ ಗಣನೀಯ ಸುಧಾರಣೆ ಆಗುವ ನಿರೀಕ್ಷೆಯಿದೆ.

ಭೂಮಿ ಪೂಜೆ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಪಾಲಿಕೆ ಸದಸ್ಯೆ ಜಾನಕಿ ಅವರು, "ಸಾರ್ವಜನಿಕರಿಗೆ ಉತ್ತಮ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದು ಜನಪ್ರತಿನಿಧಿಗಳ ಪ್ರಮುಖ ಜವಾಬ್ದಾರಿಯಾಗಿದೆ. ರಸ್ತೆ, ಕುಡಿಯುವ ನೀರು, ಒಳಚರಂಡಿ, ಬೀದಿ ದೀಪ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಹಂತ ಹಂತವಾಗಿ ಒದಗಿಸುವ ಕೆಲಸವನ್ನು ನಮ್ಮ ಅವಧಿಯಲ್ಲಿ ನಿರಂತರವಾಗಿ ಮಾಡಿದ್ದೇವೆ. ವಾರ್ಡ್ 33ರ ಸಮಗ್ರ ಅಭಿವೃದ್ಧಿಗೆ ನಾವು ಬದ್ಧರಾಗಿದ್ದೇವೆ. ಜನರ ಸಹಕಾರದಿಂದ ಹಲವು ಅಭಿವೃದ್ಧಿ ಕಾಮಗಾರಿಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದೇವೆ. ಈಗ ರಸ್ತೆ ಅಭಿವೃದ್ಧಿ ಕಾಮಗಾರಿಯೂ ಅದೇ ದಿಸೆಯಲ್ಲಿ ಮತ್ತೊಂದು ಮಹತ್ವದ ಹೆಜ್ಜೆಯಾಗಿದೆ," ಎಂದು ಹೇಳಿದರು.

ಅವರು ಮುಂದುವರಿದು, "ವಿನಾಯಕ ನಗರ ಸೇರಿದಂತೆ ವಾರ್ಡ್‌ನ ವಿವಿಧ ಬಡಾವಣೆಗಳಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಆದ್ಯತೆ ನೀಡಲಾಗಿದೆ. ಸಾರ್ವಜನಿಕರ ಅನುಕೂಲಕ್ಕಾಗಿ ಗುಣಮಟ್ಟದ ರಸ್ತೆ ನಿರ್ಮಾಣವಾಗಲಿದ್ದು, ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ," ಎಂದು ತಿಳಿಸಿದರು.

ಡಿಪಿಆರ್ ಸಿದ್ಧಬಳ್ಳಾರಿ ನಗರ ಪಾಲಿಕೆಯ ವತಿಯಿಂದ ಮಹಾತ್ಮ ಗಾಂಧಿ ನಗರ ವಿಕಾಸ



ಯೋಜನೆ (MGNVY-2) 2024–25 ಅಡಿಯಲ್ಲಿ ಪ್ಯಾಕೇಜ್–6, ಉಪ ಅಂದಾಜು–4ರಡಿ ವಾರ್ಡ್ ಸಂಖ್ಯೆ 33ರಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ವಿವರವಾದ ಯೋಜನಾ ವರದಿ (DPR) ಸಿದ್ಧಪಡಿಸಲಾಗಿದೆ.

ಈ ಯೋಜನೆಯಡಿ ವಿನಾಯಕ ನಗರದ ಘಾಖಿಕಯಿಂದ ರೈಲ್ವೆ ಟ್ರ್ಯಾಕ್ ರಸ್ತೆಯವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗುತ್ತಿದೆ. ಕಾಮಗಾರಿಯ ಒಟ್ಟು ಅಂದಾಜು ವೆಚ್ಚ ?1.50 ಕೋಟಿ (150 ಲಕ್ಷ ರೂ.) ಎಂದು ನಿಗದಿಪಡಿಸಲಾಗಿದೆ.

ಯೋಜನೆಗೆ ಇಂಜಿನಿಯರಿಂಗ್ ಸಲಹೆಗಾರರಾಗಿ ಜಲವಾಹಿನಿ ಮ್ಯಾನೇಜ್ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್, ಧಾರವಾಡ ಕಾರ್ಯನಿರ್ವಹಿಸುತ್ತಿದೆ. ರಸ್ತೆ ಅಭಿವೃದ್ಧಿಯ ಮೂಲಕ ವಾಹನ ಸಂಚಾರ ಸುಗಮಗೊಳಿಸುವುದು, ಧೂಳು ಹಾಗೂ ಮಳೆಗಾಲದ ಸಮಸ್ಯೆಗಳನ್ನು ಕಡಿಮೆ ಮಾಡುವುದು, ಸಾರ್ವಜನಿಕರಿಗೆ ಸುರಕ್ಷಿತ ಹಾಗೂ ಗುಣಮಟ್ಟದ ರಸ್ತೆ ಸಂಪರ್ಕ ಕಲ್ಪಿಸುವುದು ಯೋಜನೆಯ ಪ್ರಮುಖ ಉದ್ದೇಶವಾಗಿದೆ.

ನಗರದ ಮೂಲಸೌಕರ್ಯ ಅಭಿವೃದ್ಧಿಗೆ ಈ ಯೋಜನೆ ಮಹತ್ವದ ಕೊಡುಗೆ ನೀಡಲಿದ್ದು, ಕಾಮಗಾರಿ ಪೂರ್ಣಗೊಂಡ ನಂತರ ವಾರ್ಡ್ 33ರ ನಿವಾಸಿಗಳಿಗೆ ಉತ್ತಮ ರಸ್ತೆ ಸಂಪರ್ಕ, ಸುಗಮ ಸಂಚಾರ ಹಾಗೂ ಅಭಿವೃದ್ಧಿ ಹೊಂದಿದ ನಗರ ವಾತಾವರಣ ದೊರೆಯಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭೂಮಿ ಪೂಜೆ ಕಾರ್ಯಕ್ರಮದಲ್ಲಿ ಸ್ಥಳೀಯ ಮುಖಂಡರಾದ ಬಿ. ಶ್ರೀನಿವಾಸಲು, ಬಿ. ಲೋಕನಾಥ, ಹಿರಿಯ ಪತ್ರಕರ್ತ ಎಂ. ಜಂಬುನಾಥ, ಸೂರಿ, ಶೇಖರ್. ಬಿ. ಗೋವಿಂದ, ಗೋವಿಂದ ನಾಯಕ್, ಚಕ್ರವರ್ತಿ, ಮಾರೆಣ್ಣ, ಹನುಮಂತು, ಡಿಸ್ ಶೇಖರ್, ಶಿವ, ಮೇಕಲಾ ಹನುಮಂತ, ಸೋಮು ,ಚಕಾಲಿ ರಾಮಣ್ಣ, ಸೇರಿದಂತೆ ಅನೇಕ ಗಣ್ಯರು, ಸ್ಥಳೀಯ ನಿವಾಸಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿ ಕಾಮಗಾರಿಗೆ ಶುಭ ಹಾರೈಸಿದರು.

ಸ್ಥಳೀಯರು ಸಹ ಈ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಸ್ವಾಗತಿಸಿದ್ದು, ಹಲವು ವರ್ಷಗಳಿಂದ ರಸ್ತೆ ಹದಗೆಟ್ಟಿದ್ದರಿಂದ ಸಂಚಾರಕ್ಕೆ ಉಂಟಾಗುತ್ತಿದ್ದ ತೊಂದರೆ ನಿವಾರಣೆಯಾಗಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು. ಯೋಜನೆಯು ನಿಗದಿತ ಅವಧಿಯಲ್ಲಿ ಪೂರ್ಣಗೊಂಡರೆ ವಾರ್ಡ್ 33ರ ಅಭಿವೃದ್ಧಿಗೆ ಹೊಸ ಆಯಾಮ ಸಿಗಲಿದೆ ಎಂದು ಸಾರ್ವಜನಿಕರು ಅಭಿಪ್ರಾಯಪಟ್ಟಿದ್ದಾರೆ.

# ಮುಂದುವರೆದ ಸರ್ಕಾರಿ ಜಾಗ ಒತ್ತುವರಿ ತೆರವು ಕಾರ್ಯಾಚರಣೆ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ನಗರದ ವಿವಿಧ ವಾರ್ಡ್ಗಳಲ್ಲಿರುವ ಕೋಟ್ಯಂತರ ರೂಪಾಯಿ ಮೌಲ್ಯದ ಸರ್ಕಾರಿ ಜಾಗ ಹಾಗೂ ಅಂಗನವಾಡಿ ಕೇಂದ್ರಗಳಿಗೆ ಕಾಯ್ದಿರಿಸಿದ ಜಾಗಗಳಲ್ಲಿ ಅತಿಕ್ರಮವಾಗಿ ಆಕ್ರಮಿಸಿಕೊಂಡಿರುವುದನ್ನು ಖಚಿತಪಡಿಸಿಕೊಂಡು ಜಿಲ್ಲಾಡಳಿತ ಗುರುವಾರ ಒತ್ತುವರಿ ಕಾರ್ಯಾಚರಣೆ ನಡೆಸಿದೆ.

ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರ ನಿರ್ದೇಶನದಂತೆ ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್., ಸಹಾಯಕ ಆಯುಕ್ತ ರಾಜೇಶ್ ಹೆಚ್.ಡಿ ಹಾಗೂ ತಹಶೀಲ್ದಾರ್ ಟಿ.ರೇಖಾ ನೇತೃತ್ವದ ಅಧಿಕಾರಿಗಳ ತಂಡವು ನಗರದ ವಿವಿಧೆಡೆ ಭೇಟಿ ನೀಡಿ ಪರಿಶೀಲನೆ ನಡೆಸಿ ಸಾರ್ವಜನಿಕ ಮತ್ತು ಸರ್ಕಾರಿ ಜಾಗಗಳನ್ನು ರಕ್ಷಿಸಲಾಯಿತು.

ಬೆಳ್ಳಂಬೆಳಗ್ಗೆ ವಿವಿಧ ಯಂತ್ರೋಪಕರಣಗಳ ಮೂಲಕ ಸರ್ಕಾರಕ್ಕೆ ಸೇರಬೇಕಾದ ಜಾಗಗಳನ್ನು ಜಿಲ್ಲಾಡಳಿತದ ವತಿಯಿಂದ ತೆರವುಗೊಳಿಸಲಾಯಿತು.

ಬಳ್ಳಾರಿ ನಗರದ ಸಿಟಿಎಸ್ ವಾರ್ಡ್ ನಂ. 21, ಬ್ಲಾಕ್ ನಂ. 03 ರ ಟಿ.ಎಸ್ ನಂ. 41 ರಲ್ಲಿದ್ದ 0.08 ಸೆಂಟ್ಸ್ ಜಾಗವನ್ನು ಅಂಗನವಾಡಿ ಕೇಂದ್ರಕ್ಕೆ ನಿಗದಿಪಡಿಸಲಾಗಿದ್ದು, ಇಲ್ಲಿ ಅತಿಕ್ರಮಣಗೊಂಡ ಜಾಗವನ್ನು ಸುಪರ್ದಿಗೆ ಪಡೆದುಕೊಂಡು ಅತಿಕ್ರಮಣದಾರರ ವಿರುದ್ಧ ಕಾನೂನು ಕ್ರಮ ಜರುಗಿಸುವುದಾಗಿ ಬೋರ್ಡ್ ಹಾಕಲಾಗಿದೆ.

ವಾರ್ಡ್ ನಂ. 22, ಬ್ಲಾಕ್ ನಂ. 11 ರ ಟಿ.ಎಸ್ ನಂ. 94 ವಿ ಯಲ್ಲಿರುವ ಸುಮಾರು 0.49.6 ಸೆಂಟ್ಸ್ ವಿಸ್ತೀರ್ಣದ ಕರ್ನಾಟಕ ಸರ್ಕಾರದ ಬಯಲು ಜಾಗವನ್ನು ಜಿಲ್ಲಾಡಳಿತ ತೆರವುಗೊಳಿಸಿದೆ.

ಅದೇ ರೀತಿ ವಾರ್ಡ್ ನಂ. 21, ಬ್ಲಾಕ್ ನಂ. 03 ರ ಟಿ.ಎಸ್ ನಂ. 43 ರ ಪೈಕಿ ವಿ ಯಲ್ಲಿರುವ 0.75 ಸೆಂಟ್ಸ್ ಜಾಗವು ಸಂಪೂರ್ಣ ಸರ್ಕಾರಿ ಸ್ವತ್ತಾಗಿದ್ದು, ಅಕ್ರಮ ಪ್ರವೇಶ ಅಥವಾ ಒತ್ತುವರಿ ಮಾಡುವವರ ವಿರುದ್ಧ ಕಠಿಣ ಕ್ರಮದ ಎಚ್ಚರಿಕೆ ನೀಡಲಾಗಿದೆ.

ನಗರದ ಬುಡಾ ಪಾರ್ಕ್, ನಾರಾಯಣಪ್ಪ ಕಾಂಪೌಂಡ್, ಕೋಟೆ ಪ್ರದೇಶ ಹಾಗೂ ಸಿದ್ಧಾರ್ಥ ನಗರ, ದೇವಿ ನಗರದ ಸರ್ಕಾರಿ ಜಾಗಗಳಿಗೆ ಕಂದಾಯ ನಿರೀಕ್ಷಕರು, ಗ್ರಾಮ ಆಡಳಿತಾಧಿಕಾರಿಗಳು ಹಾಗೂ ಪೊಲೀಸ್ ಸಿಬ್ಬಂದಿಗಳೊಂದಿಗೆ ಭೇಟಿ ನೀಡಿ ಒತ್ತುವರಿ ತೆರವು ಹಾಗೂ ರಕ್ಷಣಾ ಕಾರ್ಯ ಕೈಗೊಂಡರು.

ಸರ್ಕಾರಿ ಆಸ್ತಿಯನ್ನು ಸಾರ್ವಜನಿಕರ ಹಿತಬಲಿಗಾಗಿ ಕಾಯ್ದಿರಿಸಲಾಗಿದ್ದು, ಯಾವುದೇ ವ್ಯಕ್ತಿ ಅಥವಾ ಸಂಸ್ಥೆಗಳು ಇದನ್ನು ಅಕ್ರಮವಾಗಿ ವಶಪಡಿಸಿಕೊಳ್ಳಲು ಯತ್ನಿಸಿದರೆ ಮುಲಾಜಿಲ್ಲದೆ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾಡಳಿತ ತಿಳಿಸಿದೆ.

ತೆರವು ಕಾರ್ಯಾಚರಣೆ ಸಂದರ್ಭದಲ್ಲಿ ಡಿಡಿಎಲ್ಆರ್ ಪ್ರಮೋದ್, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಜಿ.ಖಲೀಲ್ ಸಾಬ್ ಸೇರಿದಂತೆ ಇತರರಿದ್ದರು.

# ಎಸ್ಐಆರ್ ಜಾಗೃತಿ ಅಂಗವಾಗಿ ಬೈಕ್ ರ್ಯಾಲಿ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಮತದಾರರ ಪಟ್ಟಿಯನ್ನು ಅತ್ಯಂತ ಪಾರದರ್ಶಕ ಮತ್ತು ದೋಷರಹಿತವಾಗಿ ಸಿದ್ಧಪಡಿಸಲು ಭಾರತೀಯ ಚುನಾವಣಾ ಆಯೋಗವು ಹಮ್ಮಿಕೊಂಡಿರುವ 'ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ' (ಎಸ್ಐಆರ್) ಪ್ರಕ್ರಿಯೆಯಲ್ಲಿ ಪ್ರತಿಯೊಬ್ಬ ಅರ್ಹ ನಾಗರಿಕರು ಪಾಲ್ಗೊಳ್ಳಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿಯೂ ಆದ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ 'ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ (ಎಸ್ಐಆರ್)' ಅಂಗವಾಗಿ ಸ್ವೀಪ್ ಚಟುವಟಿಕೆ ಕುರಿತು ಅರಿವು ಮೂಡಿಸಲು ನಗರದ ಹೊಸ ಜಿಲ್ಲಾಡಳಿತ ಭವನದ ಆವರಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಬೈಕ್ ರ್ಯಾಲಿಗೆ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಈಗಾಗಲೇ ಬೂತ್ ಮಟ್ಟದ ಅಧಿಕಾರಿಗಳು ಮನೆ–ಮನೆಗೆ ಭೇಟಿ ನೀಡಿ ಸಾರ್ವಜನಿಕರಿಗೆ ಗಣತಿ ನಮೂನೆಗಳನ್ನು ವಿತರಿಸುತ್ತಿದ್ದಾರೆ. ಅಧಿಕಾರಿಗಳು ಭೇಟಿ ನೀಡಿದಾಗ ಸರಿಯಾದ ಮಾಹಿತಿ ನೀಡಿ, ನಮೂನೆಗಳನ್ನು ಭರ್ತಿ ಮಾಡಿಕೊಡಬೇಕು ಎಂದು ತಿಳಿಸಿದರು.ಜಿಲ್ಲಾ ಸ್ವೀಪ್ ಸಮಿತಿಯ ಅಧ್ಯಕ್ಷರೂ ಆದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್ ಅವರು ಮಾತನಾಡಿ, ಮತದಾರರ ಪಟ್ಟಿಯಲ್ಲಿ ಹೆಸರುಗಳ ನಿಖರತೆ ಕಾಪಾಡುವುದು, ಅರ್ಹ ಮತದಾರರ ಹೆಸರು ಸೇರ್ಪಡೆ, ಅನರ್ಹ ಅಥವಾ ಪುನರಾವರ್ತಿತ ಹೆಸರುಗಳ ತಿದ್ದುಪಡಿ ಹಾಗೂ ಅಗತ್ಯ ದಾಖಲಾತಿಗಳನ್ನು ಸಲ್ಲಿಸುವುದು ಎಸ್ಐಆರ್ ಪ್ರಕ್ರಿಯೆಯ ಪ್ರಮುಖ ಉದ್ದೇಶವಾಗಿದೆ ಎಂದು ಹೇಳಿದರು.ಈ ಮನೆ–ಮನೆ ಪರಿಶೀಲನಾ ಅಭಿಯಾನವು ಜುಲೈ 29 ರವರೆಗೆ ನಡೆಯಲಿದೆ.




ಈ ಪ್ರಕ್ರಿಯೆಯ ನಂತರ ಆಗಸ್ಟ್ 5 ರಂದು ಕರಡು ಮತದಾರರ ಪಟ್ಟಿ ಪ್ರಕಟವಾಗಲಿದ್ದು, ಸೆಪ್ಟೆಂಬರ್ 4 ರವರೆಗೆ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶವಿರುತ್ತದೆ. ಅಂತಿಮ ಪಟ್ಟಿಯು ಅಕ್ಟೋಬರ್ 7 ರಂದು ಪ್ರಕಟಗೊಳ್ಳಲಿದೆ ಎಂದು ತಿಳಿಸಿದರು.ಬೈಕ್ ರ್ಯಾಲಿಯು ಹೊಸ ಜಿಲ್ಲಾಡಳಿತ ಭವನದ ಆವರಣದಿಂದ ಆರಂಭಗೊಂಡು ಇಂದಿರಾ ವೃತ್ತ, ಗಡಿಗಿ ಚೆನ್ನಪ್ಪ ವೃತ್ತದ ಮಾರ್ಗವಾಗಿ ಹಳೆಯ ಜಿಲ್ಲಾಧಿಕಾರಿಗಳ ಕಚೇರಿಯ ಆವರಣದವರೆಗೆ ನಡೆಯಿತು.ಈ ವೇಳೆ ಮಹಾನಗರ ಪಾಲಿಕೆ ಆಯುಕ್ತ ಪಿ.ಎಸ್. ಮಂಜುನಾಥ್, ಜಿಪಂ ಉಪಕಾರ್ಯದರ್ಶಿ ಶಶಿಕಾಂತ್ ಶಿವಪುರೆ, ಅಬಕಾರಿ ಉಪ ಆಯುಕ್ತ ಮಂಜುನಾಥ್, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಸೋಮಸುಂದರ್, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಜಲಾಲಪ್ಪ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎನ್. ಬಸರೆಡ್ಡಿ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿ– ಸಿಬ್ಬಂದಿ ಹಾಗೂ ಜಿಲ್ಲೆಯ ಬೈಕ್ ರೈಡರ್ಸ್ ಭಾಗವಹಿಸಿದ್ದರು.

# ಮನೆ–ಪೋಷಕರಲ್ಲಿ ಎಸ್ಐಆರ್ ಅರಿವು ಮೂಡಿಸಿ ವಿದ್ಯಾರ್ಥಿಗಳಿಗೆ ಡಿಸಿ ನಾಗೇಂದ್ರ ಪ್ರಸಾದ್ ಕಿವಿಮಾತು

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಭಾರತೀಯ ಚುನಾವಣಾ ಆಯೋಗದ ನಿರ್ದೇಶನದಂತೆ, ಅರ್ಹ ನಾಗರಿಕರು ಮತದಾರರ ಪಟ್ಟಿಗೆ ಹೆಸರು ಸೇರಿಸಲು ಮತ್ತು ತಿದ್ದುಪಡಿ ಮಾಡಿಕೊಳ್ಳಲು ಹಮ್ಮಿಕೊಳ್ಳಲಾಗಿರುವ 'ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ' ಪ್ರಕ್ರಿಯೆ ಕುರಿತು ಪೋಷಕರಲ್ಲಿ ಅರಿವು ಮೂಡಿಸಲು ಸರ್ಕಾರಿ (ಮಾ.ಪು) ಪದವಿ ಪೂರ್ವ (ಪಿಯು) ಕಾಲೇಜು ವಿದ್ಯಾರ್ಥಿಗಳಿಂದ ಬೃಹತ್ ಜಾಗೃತಿ ಜಾಥಾವನ್ನು ಗುರುವಾರ ಹಮ್ಮಿಕೊಳ್ಳಲಾಗಿತ್ತು.



ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಸ್ವೀಪ್ ಸಮಿತಿ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯ ಜಂಟಿ ಆಶ್ರಯದಲ್ಲಿ ಸರ್ಕಾರಿ (ಮಾ.ಪು) ಪದವಿ ಪೂರ್ವ ಕಾಲೇಜು ಸಭಾಂಗಣದಲ್ಲಿ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಮಾತನಾಡಿ, ಮತದಾರರ ಪಟ್ಟಿಯು ಪ್ರಜಾಪ್ರಭುತ್ವದ ಅಡಿಪಾಯವಾಗಿದ್ದು, ಪ್ರತಿಯೊಬ್ಬ ನಾಗರಿಕರು ತಮ್ಮ ಮಾಹಿತಿಯನ್ನು ಸರಿಯಾಗಿ ಪರಿಶೀಲಿಸಿ ಎಸ್ಐಆರ್ ಗಣತಿ ನಮೂನೆಗಳನ್ನು ಭರ್ತಿ ಮಾಡಿ ಸಂಬಂಧಿಸಿದ ಚುನಾವಣಾ ಅಧಿಕಾರಿಗಳಿಗೆ ಸಲ್ಲಿಸಬೇಕು. ಇದರಿಂದ ಪಾರದರ್ಶಕ ಹಾಗೂ ವಿಶ್ವಾಸಾರ್ಹ ಮತದಾರರ ಪಟ್ಟಿ ಸಿದ್ಧಗೊಳ್ಳಲು ಸಾಧ್ಯವಾಗುತ್ತದೆ. ಈ ಕುರಿತು ತಮ್ಮ ಮನೆಗಳಲ್ಲಿ ಹಾಗೂ ಪೋಷಕರಿಗೆ ಅರಿವು ಮೂಡಿಸಬೇಕು ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.18 ವರ್ಷ ತುಂಬಿದ ಪ್ರತಿಯೊಬ್ಬರಿಗೂ ಮತದಾನದ ಹಕ್ಕು ಸಂವಿಧಾನಬದ್ಧವಾಗಿ ಸಿಕ್ಕಿದೆ. 18 ವರ್ಷ ತುಂಬುವ ಯುವಕ–ಯುವತಿಯರು ಸಹ ಫಾರ್ಮ್–6 ರ ಮೂಲಕ ಹೆಸರು ನೋಂದಾಯಿಸಿಕೊಳ್ಳಬಹುದು. ಈ ವಿಶೇಷ ಸಮಗ್ರ ಪರಿಷ್ಕರಣೆ ಅವಧಿಯಲ್ಲಿ ಸಾರ್ವಜನಿಕರು ಮತದಾರರ ಪಟ್ಟಿಯಲ್ಲಿರುವ ತಪ್ಪುಗಳ ತಿದ್ದುಪಡಿ (ಫಾರ್ಮ್–8) ಹಾಗೂ ಮರಣ ಹೊಂದಿದವರ ಅಥವಾ ಸ್ಥಳಾಂತರಗೊಂಡವರ ಹೆಸರುಗಳ ಪತ್ತೆ ಮತ್ತು ತೆಗೆದುಹಾಕುವಿಕೆಗೆ ಸಹಕರಿಸಬೇಕು ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್ ಅವರು ಮಾತನಾಡಿ, ಸಾರ್ವಜನಿಕರು ಕಚೇರಿಗಳಿಗೆ ಅಲೆಯದೆ ವೋಟರ್ ಹೆಲ್ಪ್ ಲೈನ್ ಆಪ್ ಅಥವಾ ವೋಟರ್ ಸರ್ವೀಸ್ ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲೇ ಸುಲಭವಾಗಿ ಮತದಾರರ ಪಟ್ಟಿ, ಹೆಸರು ಸೇರ್ಪಡೆ ಹಾಗೂ ತಿದ್ದುಪಡಿ ಮಾಡಿಕೊಳ್ಳಬಹುದು ಎಂದು ಮಾಹಿತಿ ನೀಡಿದರು. ಜುಲೈ 29ರ ವರೆಗೆ ಬಿಎಲ್ಓ ಗಳು ಮನೆ ಮನೆಗೆ ಭೇಟಿ ನೀಡಿ ಸಮೀಕ್ಷೆ ಹಾಗೂ ಪರಿಶೀಲನೆ ನಡೆಸಿ ಗಣತಿ ನಮೂನೆ ನೀಡಲಿದ್ದಾರೆ. ನಂತರ ಆ. 5ರಂದು ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುವುದು ಎಂದ ಅವರು, ಗಣತಿ ನಮೂನೆ ಭರ್ತಿ ಮಾಡುವ ಕಾರ್ಯ ಚಟುವಟಿಕೆ ಕುರಿತು ಸುದೀರ್ಘವಾಗಿ ವಿವರಿಸಿ, ಈ ಬಗ್ಗೆ ಪೋಷಕರಲ್ಲಿ, ಸಾರ್ವಜನಿಕರಲ್ಲಿ ಹೆಚ್ಚಿನ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಕೈಜೋಡಿಸಬೇಕು ಎಂದರು.

ಬಳಿಕ ಗಣ್ಯರು ಹಸಿರು ನಿಶಾನೆ ತೋರಿಸುವ ಮೂಲಕ ಜಾಗೃತಿ ಜಾಥಾಗೆ ಚಾಲನೆ ನೀಡಿದರು.ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಶಶಿಕಾಂತ್ ಶಿವಪುರೆ, ಜಿಪಂ ಸಹಾಯಕ ನಿರ್ದೇಶಕ ಬಸವರಾಜ ಹಿರೇಮಠ, ಸರ್ಕಾರಿ (ಮಾ.ಪು) ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಸುಂಕಪ್ಪ ಸೇರಿದಂತೆ ಪ್ರಾಧ್ಯಾಪಕರು ಹಾಗೂ ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಿದ್ದರು.

*ಆಕರ್ಷಕ ಘೋಷಣಾ ಫಲಕಗಳು:*ಜಾಥಾದಲ್ಲಿ ಪಾಲ್ಗೊಂಡಿದ್ದ ನೂರಾರು ವಿದ್ಯಾರ್ಥಿಗಳು ಘೋಷಣಾ ಫಲಕಗಳಲ್ಲಿ 'ಇದೀಗ ಬಂದಿದೆ. ವಿಶೇಷ ಸಮಗ್ರ ಪರಿಷ್ಕರಣೆ–2026 ಪ್ರತಿಯೊಬ್ಬ ಅರ್ಹ ನಾಗರಿಕ, ಒಂದು ಮತ, ಒಂದು ಗುರುತು', 'ದೋಷರಹಿತ ಮತದಾರರ ಪಟ್ಟಿಗಳು ಪ್ರಜಾಪ್ರಭುತ್ವವನ್ನು ಬಲಪಡಿಸುತ್ತವೆ', 'ಗಣತಿ–ದಾರರ ಪ್ರತಿಯನ್ನು ದ್ವಿ–ನಮೂನೆಯಲ್ಲಿ ನೀಡಲಾಗುವುದು', 'ಗಣತಿ ನಮೂನೆಯಲ್ಲಿ ತಮ್ಮ ಇತ್ತೀಚಿನ ಭಾವಚಿತ್ರವನ್ನು ಬದಲಿಸಕೊಳ್ಳಬಹುದು' ಎಂಬ ಘೋಷಣಾ ಫಲಕಗಳನ್ನು ಹಿಡಿದು ಸಾರ್ವಜನಿಕರ ಗಮನ ಸೆಳೆದರು.

ಜಾಥಾವು ಸರ್ಕಾರಿ (ಮಾ.ಪು) ಪದವಿ ಪೂರ್ವ ಕಾಲೇಜಿನ ಮುಂಭಾಗದಿಂದ ಆರಂಭಗೊಂಡು ಇಂದಿರಾ ವೃತ್ತದ ಮೂಲಕ ಗಡಿಗಿ ಚೆನ್ನಪ್ಪ ವೃತ್ತದ ಮೂಲಕ ಮರಳಿ ಕಾಲೇಜು ಆವರಣದಕ್ಕೆ ತಲುಪಿ ಅಂತ್ಯಗೊಂಡಿತು.

# ವಚನ ಸಾಹಿತ್ಯದ ಪುನರುಜ್ಜೀವಕ ಡಾ. ಫ.ಗು.ಹಳಕಟ್ಟಿ: ಸಿದ್ಧರಾಮ ಕಲ್ಮಠ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಹನ್ನೆರಡನೇ ಶತಮಾನದ ಕಲ್ಯಾಣ ಕ್ರಾಂತಿಯ ನಂತರ ಚಲ್ಲಾಪಿಲ್ಲಿಯಾಗಿ ಕಣ್ಮರೆಯಾಗುತ್ತಿದ್ದ ವಚನ ಸಾಹಿತ್ಯವನ್ನು ಮರುಸಂಗ್ರಹಿಸಿ, ಸಂಪಾದಿಸಿ, ಪ್ರಕಟಿಸುವ ಮೂಲಕ ಕನ್ನಡ ಜನತೆಗೆ ವಚನಗಳ ಬೆಳಕನ್ನು ನೀಡಿದ 'ವಚನ ಪಿತಾಮಹ' ಡಾ. ಫಕೀರಪ್ಪಗುರುಬಸಪ್ಪ ಹಳಕಟ್ಟಿ ಅವರ ಕೊಡುಗೆಅಪಾರ ಎಂದು ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿದ್ಧರಾಮ ಕಲ್ಮಠ ಅವರು ಹೇಳಿದರು.ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಡಾ.ರಾಜ್‌ಕುಮಾರ್ ರಸ್ತೆಯ ಸಾಂಸ್ಕೃತಿಕ ಸಮುಚ್ಚಯದ ಹೊಂಗಿರಣ ಸಭಾಂಗಣದಲ್ಲಿ ಗುರುವಾರ ಏರ್ಪಡಿಸಿದ್ದ ಡಾ.ಫ.ಗು. ಹಳಕಟ್ಟಿಯವರ ಜನ್ಮದಿನ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸಕರಾಗಿ ಭಾಗವಹಿಸಿ ಅವರು ಮಾತನಾಡಿದರು.12 ನೇ ಶತಮಾನದಲ್ಲಿ ಬಸವಾದಿ ಶರಣರು ಅನುಭವ ಮಂಟಪದಲ್ಲಿ ಅಪಾರ ಪ್ರಮಾಣದ ವಚನ ಸಾಹಿತ್ಯವನ್ನು ಸೃಷ್ಟಿಸಿದ್ದರು. ಆದರೆ ಕಲ್ಯಾಣ ಕ್ರಾಂತಿಯ ನಂತರ, ಶರಣರನ್ನು ಹಿಮ್ಮೆಟ್ಟಿಸುವ ಹಾಗೂ ವಚನಗಳನ್ನು ನಾಶಮಾಡುವ ಸಂಚು ನಡೆದಾಗ ವಚನಗಳನ್ನು ರಕ್ಷಿಸುವ ಕಾರ್ಯವನ್ನು ಫ. ಗು. ಹಳಕಟ್ಟಿಯವರು ಕೈಗೆತ್ತಿಕೊಂಡಿದ್ದವರು ಎಂದು ತಿಳಿಸಿದರು.19 ನೇ ಶತಮಾನದ ಆರಂಭದಲ್ಲಿ ಕೇವಲ 25 ವಚನಕಾರರ ಬೆರಳೆಣಿಕೆಯಷ್ಟು ವಚನಗಳು ಮಾತ್ರ ಬೆಳಕಿನಲ್ಲಿದ್ದವು. ಅಂತಹ ಸಂದರ್ಭದಲ್ಲಿ ಹಳಕಟ್ಟಿಯವರು ಸುಮಾರು 22,000 ವಚನಗಳನ್ನು ದೇಶದ ಮೂಲೆ ಮೂಲೆಗಳಿಂದ ಸಂಗ್ರಹಿಸಿದರು ಎಂದರು.1880 ರಲ್ಲಿ ಧಾರವಾಡದಲ್ಲಿ ಜನಿಸಿದ ಹಳಕಟ್ಟಿಯವರ ಮೂಲ ಊರು ಬೆಳಗಾವಿ ಜಿಲ್ಲೆಯ ಪರಸಗಡ ಹತ್ತಿರದ ಹಳಕಟ್ಟಿ. ಇವರ ತಂದೆ ಗುರುಬಸಪ್ಪನವರು ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದು ಉತ್ತಮ ಲೇಖಕರಾಗಿದ್ದರು. ಇವರ ಸಂಸ್ಕಾರ ಹಳಕಟ್ಟಿಯವರಿಗೆ ಬಾಲ್ಯದಲ್ಲೇ ದೊರೆತಿತ್ತು. ಮೂರನೇ ವಯಸ್ಸಿನಲ್ಲಿಯೇ ತಾಯಿಯನ್ನು ಕಳೆದುಕೊಂಡ ಇವರನ್ನು ಅಜ್ಜಿ ಬಸ್ಸಮ್ಮ ಸಾಕಿ ಬೆಳೆಸಿದರು ಎಂದರು.ಧಾರವಾಡದಲ್ಲಿ ಪ್ಲೇಗ್ ರೋಗ ಹರಡಿದಾಗ ಹೆಂಡತಿಯ ಊರಾದ ಬನಹಟ್ಟಿಗೆ ತೆರಳಿದ್ದ ಸಂದರ್ಭದಲ್ಲಿ ಮಾವನವರು



ನೀಡಿದ 'ಷಟಸ್ಥಲ' ಮತ್ತು 'ಪ್ರಭುದೇವರ ವಚನಗಳು' ಎಂಬ ತಾಡೋಲೆ ಪುಸ್ತಕಗಳು ಹಳಕಟ್ಟಿಯವರ ಜೀವನದ ದಿಕ್ಕನ್ನೇ ಬದಲಿಸಿದವು. ವಚನಗಳ ಮಹತ್ವವನ್ನು ಅರಿತ ಅವರು, ತಮ್ಮ ಇಡೀ ಜೀವನವನ್ನು ವಚನ ಸಾಹಿತ್ಯಕ್ಕಾಗಿ ಮುಡಿಪಾಗಿಡಲು ಸಂಕಲ್ಪಿಸಿದವರು ಎಂದು ತಿಳಿಸಿದರು.ಬಡತನ, ಅನಾರೋಗ್ಯ ಕಾಡುತ್ತಿದ್ದರೂ ಲೆಕ್ಕಿಸದೆ ವಚನಗಳ ಹುಡುಕಾಟಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡರು. ಶಿಕ್ಷಣ ಕ್ಷೇತ್ರ ಮತ್ತು ಸಾರ್ವಜನಿಕ ಸೇವೆಯಲ್ಲೂ ಅಪಾರವಾಗಿ ಶ್ರಮಿಸಿದ ಇವರ ವ್ಯಕ್ತಿತ್ವವು, ಶರಣರು ಹೇಳಿದಂತೆ "ಎಲ್ಲೇ ಇದ್ದರೂ ಪರಿಮಳ ಬೀರುವ ಗಂಧದ ಮರದಂತೆ" ಇತ್ತು. ಅಂದು ಹಳಕಟ್ಟಿಯವರು ಶ್ರಮಿಸದೇ ಹೋಗಿದ್ದರೆ ಇಂದು ನಮಗೆ ಸುಮಾರು 250 ಕ್ಕೂ ಹೆಚ್ಚು ವಚನಕಾರರ ಅಮೂಲ್ಯ ವಚನಗಳು ಲಭ್ಯವಾಗುತ್ತಿರಲಿಲ್ಲ. ಕತ್ತಲೆಯಲ್ಲಿದ್ದ ವಚನಗಳ ಬೆಳಕನ್ನು ನಾಡಿಗೆ ತಂದ ಈ ಮಹಾನ್ ಚೇತನಕ್ಕೆ ಕನ್ನಡಿಗರು ಸದಾ ಕೃತಜ್ಞರಾಗಿರಬೇಕಾಗಿದೆ ಎಂದರು.ಸತ್ಯಂ ಶಿಕ್ಷಣ ಮಹಾವಿದ್ಯಾಲಯದ ಪ್ರಾಧ್ಯಾಪಕ ಆಲಂಭಾಷಾ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ವಚನ ಎನ್ನುವ ಮೂರಕ್ಷರದ ಪದದ ಹಿನ್ನೆಲೆಯನ್ನು ವಿವರಿಸಿದ ಅವರು, ವಚನ ಎಂದರೆ ಕೇವಲ ಸಾಲುಗಳಲ್ಲ; 'ವ' ಎಂದರೆ ವಚಿಸುವುದು ಅಂದರೆ ಕೇಳಲು ಇಷ್ಟವಾಗುವುದು, 'ಚ' ಎಂದರೆ ಚಲಿಸುವುದು ಅಂದರೆ 12ನೇ ಶತಮಾನದಿಂದ ಹಿಡಿದು 21ನೇ ಶತಮಾನದವರೆಗೂ ನಿರಂತರವಾಗಿ ಸಾಗಿಬಂದಿರುವುದು, ಮತ್ತು 'ನ' ಎಂದರೆ ನಯನಿಸುವುದು ಅಂದರೆ ಕಣ್ಣಿಗೆ ಸುಂದರವಾಗಿ ಕಾಣುವುದು ಎಂದು ಅರ್ಥೈಸಿದರು.ಬಳ್ಳಾರಿ ತಾಲ್ಲೂಕು ಗ್ರೇಡ್–2 ತಹಶೀಲ್ದಾರ ವಿನಾಯಕ ಗೋಡ್ಬಾಳೆ ಅವರು ಕಾರ್ಯಕ್ರಮ ಉದ್ಘಾಟಿಸಿದರು. ಬಳ್ಳಾರಿಯ ಎಂ. ನಾಗಭೂಷಣ ಬಾಪುರೆ ತಂಡ ವಚನ ಸಂಗೀತ ಕಾರ್ಯಕ್ರಮ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಸಂವಿಧಾನ ಪ್ರಸ್ತಾವನೆಯನ್ನು ಬೋಧಿಸಲಾಯಿತು.ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಸೇರಿದಂತೆ ಸರ್ಕಾರಿ (ಮಾ.ಪು) ಪದವಿಪೂರ್ವ ಕಾಲೇಜಿನ ಪ್ರಾಧ್ಯಾಪಕರು, ಕಾಲೇಜು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.



# ಶರಣಬಸವ ವಿವಿಯಿಂದ ಅನುಪಮ್ ಪಾಟೀಲಗೆ ಪಿಎಚ್. ಡಿ.

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಶ್ರೀ ಅನುಪಮ್ ಅಶೋಕ ಪಾಟೀಲ ಅವರು ಮಂಡಿಸಿದ "ಐಡೆಂಟಿಫಿಕೇಶನ್ ಆಫ್ ಡಿಸಿಸ್ಡ್ ಪೀಜನ್ ಪೀ ಲೀವ್ಸ್ ಯುಸಿಂಗ್ ಇಮೇಜ್ ಪ್ರೋಸೆಸಿಂಗ್ ಆ್ಯಂಡ್ ಮಷೀನ್ ಲರ್ನಿಂಗ್ ಅಪ್ರೋಚೆಸ್" ಎಂಬ ಮಹಾಪ್ರಭಂದಕ್ಕೆ ಕಲಬುರಗಿಯ ಶರಣಬಸವ ವಿಶ್ವವಿದ್ಯಾಲಯದಿಂದ ಪಿಎಚ್. ಡಿ. ಪದವಿ ಪಡೆದಿದ್ದಾರೆ. ವಿವಿಯ ಕಂಪ್ಯೂಟರ್ ಅಪ್ಲಿಕೇಶನ್ ನಿಕಾಯದ ಡಾ. ವಿರುಪಾಕ್ಷಪ್ಪ ಇವರ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡಿದ್ದಾರೆ.

## ಬೇವೂರ ಸಜ್ಜನ ಕಾಲೇಜಿಗೆ ಪವಿತ್ರಾ ಪ್ರಥಮ



**ಬಾಗಲಕೋಟೆ:** ತಾಲೂಕಿನ ಬೇವೂರ ಗ್ರಾಮದ ಆದರ್ಶ ವಿದ್ಯಾವರ್ಧಕ ಸಂಘದ ಪರಪ್ಪ ಸಂಗಪ್ಪ ಸಜ್ಜನ ಕಲಾ ಮಹಾವಿದ್ಯಾಲಯದ ವಿದ್ಯಾರ್ಥಿನಿ ಪವಿತ್ರಾ ಮಾಗನೂರ ಆರನೇ ಸೆಮಿಸ್ಟರ್ ಪರೀಕ್ಷೆಯಲ್ಲಿ ಶೇ.96ರಷ್ಟು ಅಂಕ ಗಳಿಸಿ ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ.

ಬಾಗಲಕೋಟೆ ವಿಶ್ವವಿದ್ಯಾಲಯದ ಅಡಿಯಲ್ಲಿ ಜರುಗಿದ ಪರೀಕ್ಷೆಯಲ್ಲಿ ಸಜ್ಜನ ಕಾಲೇಜಿಗೆ ಶೇ.91.35 ಫಲಿತಾಂಶ ಬಂದಿದ್ದು, ಪವಿತ್ರಾ ಮಾಗನೂರ ಶೇ.96 ಅಂಕ ಪಡೆದು ಪ್ರಥಮ, ವಿಜಯಲಕ್ಷ್ಮೀ ಬಂಡಿವಡ್ಡರ ಶೇ.94.61 ಅಂಕ ಗಳಿಸಿ ದ್ವಿತೀಯ ಹಾಗೂ ಫಾತಿಮಾ ನದಾಫ ಶೇ.94 ಅಂಕ ಪಡೆದು ತೃತೀಯ ಸ್ಥಾನ ಪಡೆದಿದ್ದಾರೆ.

ಕಾಲೇಜಿನ ಫರಿಜಾನ್ ಮುಲ್ಲಾ ಇತಿಹಾಸ ಹಾಗೂ ಫಾತಿಮಾ ನದಾಫ, ಪವಿತ್ರಾ ಮಾಗನೂರ, ವಿಜಯಲಕ್ಷ್ಮೀ ಬಂಡಿವಡ್ಡರ ಅವರುಗಳು ಅರ್ಥಶಾಸ್ತ್ರ ವಿಷಯಗಳಲ್ಲಿ 100ಕ್ಕೆ 100 ಅಂಕ ಪಡೆದಿದ್ದಾರೆ ಎಂದು ಸಂಸ್ಥೆಯ ಅಧ್ಯಕ್ಷ ಜಿ.ಜಿ.ಮಾಗನೂರ ಹಾಗೂ ಪ್ರಾಚಾರ್ಯ ಜಗದೀಶ ಭೈರಮಟ್ಟಿ ತಿಳಿಸಿದ್ದಾರೆ.

## ಡಾ.ಫ.ಗು.ಹಳಕಟ್ಟಿ ಜಯಂತಿ ಆಚರಣೆ



**ಬಾಗಲಕೋಟೆ:** ನಗರದ ಬಿವಿವಿ ಸಂಘದ ಅಕ್ಕನ ಬಳಗ ಹಾಗೂ ಕದಳಿ ಮಹಿಳಾ ವೇದಿಕೆ ತಾಲೂಕು ಘಟಕ ಇವರ ಸಂಯುಕ್ತ ಆಶ್ರಯದಲ್ಲಿ ಗುರುವಾರ ಬಸವೇಶ್ವರ ಹೆಣ್ಣುಮಕ್ಕಳ ಮಾಧ್ಯಮಿಕ ಶಾಲೆಯಲ್ಲಿ ವಚನ ಗುಮ್ಮಟ ಡಾ.ಫ.ಗು.ಹಳಕಟ್ಟಿ ಅವರ ಜಯಂತಿ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಅಕ್ಕನ ಬಳಗದ ಹಿರಿಯ ಸದಸ್ಯೆ ಕಮಲಾ ರುದ್ರಾಕ್ಷಿ ಅತಿಥಿ ಉಪನ್ಯಾಸ ನೀಡಿ, ಡಾ.ಫ.ಗು.ಹಳಕಟ್ಟಿಯವರು ವಚನ ಸಾಹಿತ್ಯವನ್ನು ಸಂಗ್ರಹಿಸಿ ಉಳಿಸುವ ಮೂಲಕ ಕನ್ನಡ ನಾಡು-ನುಡಿಗೆ ಅಪಾರ ಸೇವೆ ಸಲ್ಲಿಸಿದ ಮರೆಯಲಾಗದ ಮಾಣಿಕ್ಯ ಎಂದು ಬಣ್ಣಿಸಿದರು. ಅಧ್ಯಕ್ಷತೆಯನ್ನು ಶಾಲೆಯ ಮುಖ್ಯಾಧ್ಯಾಪಕಿ ಎಲ್.ಎಸ್.ಖೋತ ವಹಿಸಿದ್ದರು. ಅಕ್ಕನ ಬಳಗದ ಉಪಾಧ್ಯಕ್ಷೆ ವಿಜಯಾ ರೇವಡಿಗಾರ ಉಪಸ್ಥಿತರಿದ್ದರು.

ವಿದ್ಯಾರ್ಥಿನಿಯರ ವಚನ ಗಾಯನದೊಂದಿಗೆ ಕಾರ್ಯಕ್ರಮ ಆರಂಭಗೊಂಡಿತು. ಕಾರ್ಯಕ್ರಮವನ್ನು ಶ್ರೀಮತಿ ಪಟ್ಟಣಶೆಟ್ಟಿ ನಿರೂಪಿಸಿದರು. ನರೇಗಲ್ ಸ್ವಾಗತಿಸಿದರು. ಕದಳಿ ಮಹಿಳಾ ವೇದಿಕೆ ಬಾಗಲಕೋಟೆ ಜಿಲ್ಲಾ ಘಟಕದ ಕಾರ್ಯದರ್ಶಿ ವಿಜಯಲಕ್ಷ್ಮಿ ಭದ್ರಶೆಟ್ಟಿ, ಶಿವಲೀಲಾ ಸಂಬಣ್ಣನವರ ಮಕ್ಕಳಿಗೆ ಸಿಹಿ ವಿತರಿಸಿದರು.

## ಗೃಹಲಕ್ಷ್ಮಿ ಯೋಜನೆ ವಿತರಣೆಯಲ್ಲಿ ಭಾರಿ ಅಕ್ರಮ



**ಹಳಿಯಾಳ:** ರಾಜ್ಯ ಸರ್ಕಾರ ತಂದಿರುವ ಗ್ಯಾರಂಟಿ ಯೋಜನೆಗಳ ಪೈಕಿ ಒಂದಾದ ಗೃಹಲಕ್ಷ್ಮಿ ಯೋಜನೆಯ ಹಣ ವಿತರಣೆಯಲ್ಲಿ ಭಾರೀ ಅಕ್ರಮ ನಡೆದಿದೆ ಹಾಗೂ ಸುಮಾರು 19,000 ಮಹಿಳೆಯರ ಹಣ ಒಂದೇ ಬ್ಯಾಂಕ್ ಖಾತೆಗೆ ಜಮೆಯಾಗಿದೆ. ಈ ಹಣ ಕಾಂಗ್ರೆಸ್‌ನ ಹುಂಡಿಗೆ ಹೋಗಿರುವ ಅನುಮಾನ ವ್ಯಕ್ತಪಡಿಸಿದರು.

ಹಾಗೂ ದಾಖಲೆಗಳಿಲ್ಲದ ಖಾತೆಗಳಿಗೆ ಹಣ ಜಮೆ ಮಾಡಿ ಸುಮಾರು ₹46 ಕೋಟಿ ಲೂಟಿ ನಡೆದಿದೆ ಎಂದು ಮಾಜಿ ಶಾಸಕ ಸುನಿಲ್ ಹೆಗಡೆ ಆರೋಪಿಸಿದರು.

ತಮ್ಮ ಪಕ್ಷದ ಕಚೇರಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಮಾಜಿ ಶಾಸಕರು ತಾಂತ್ರಿಕ ತೊಂದರೆ ದಾಖಲೆಗಳ ಕೊರತೆ ಹಾಗೂ ಭಯೋಮೆಟ್ರಿಕ್ ನಂತಹ ಕಾರಣಗಳನ್ನು ನೀಡಿ ಮಹಿಳೆಯರನ್ನು ಸಂಕಷ್ಟಕ್ಕೆ ತಳ್ಳಲಾಗಿದೆ ಎಂದು ಟೀಕಿಸಿದರು.

ಈ ಸಮಸ್ಯೆಯಿಂದ ಮಹಿಳೆಯರು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿದ್ದು ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ತಕ್ಕ ಉತ್ತರ ನೀಡಲಿದ್ದಾರೆ ಹಾಗೂ ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯರಿಗೆ ಮಾತ್ರ ಹಣ ಸರಿಯಾಗಿ ಹೋಗುತ್ತಿರುವುದು ಅನುಮಾನಕ್ಕೆ ಕಾರಣವಾಗಿದೆ ಎಂದು ಪ್ರಶ್ನಿಸಿದರು 125 ಕೋಟಿ ಹಗರಣ ನಡೆದಿದೆ ಎಂದು ಸಿಎಜಿ ವರದಿಯಲ್ಲಿ ಉಲ್ಲೇಖಿಯ ಆಗಿದೆ ಎಂದು ಕಟುವಾಗಿ ಆರರೊಪಿಸಿದರು. ಕಳೆದ ಕೆಲದಿನಗಳ ಹಿಂದೆ ಹಳೆಯಾಳದ ಮೌರ್ಯ ಹೋಟೆಲ್ ಗಲಾಟೆ ಪ್ರಕರಣ ಹಾಗೂ ಕಾಳಗಿನಕೊಪ್ಪ ಗ್ರಾಮದಲ್ಲಿ ನಡೆದ ನಾಡ ಬಾಂಬ ಪ್ರಕರಣಗಳು ತಾಲೂಕಿನ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂದು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹಳಿಯಾಳ ದಾಂಡೇಲಿ ಜೋಯಿಡಾ ಭಾಗಗಳಲ್ಲಿ ಈ ವರ್ಷ ವಾಡಿಕೆಗಿಂತ ಕಡಿಮೆ ಮಳೆಯಾಗಿರುವುದರಿಂದ ರೈತರು ತೀವ್ರ ಸಂಕಷ್ಟದಲ್ಲಿ ಇದ್ದಾರೆ ಅಗತ್ಯ ಪರಿಹಾರ ಮತ್ತು ವಿಶೇಷ ಪ್ಯಾಕೇಜ್ ನೀಡುವಂತೆ ಸರ್ಕಾರವನ್ನು ಒತ್ತಾಯಿಸುತ್ತಾ ಇಂತಹ ಸಂಕಷ್ಟದ ಸಮಯದಲ್ಲಿ ಸ್ಥಳೀಯ ಶಾಸಕರು ಜನರ ಸಮಸ್ಯೆಗಳಿಗೆ ಸ್ಪಂದಿಸುವ ಬದಲು ಬೆಂಗಳೂರು ಮತ್ತು ದೆಹಲಿಯಲ್ಲಿ ಸಚಿವ ಸ್ಥಾನಕ್ಕಾಗಿ ಹೋರಾಡುತ್ತಿರುವುದು ಒಂದು ತಿಂಗಳ ಕಾಲ ಬೆಂಗಳೂರಲ್ಲೇ ಉಳಿದುಕೊಂಡು ರೈತರಿಗೆ ಸಾರ್ವಜನಿಕರಿಗೆ ಸ್ಪಂದಿಸದಿರುವುದು ಅತ್ಯಂತ ಕಂಡನೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅದೇ ರೀತಿ ಎಸ್ಐಆರ್ ಮತದಾರ ಪಟ್ಟಿ ಪರಿಷ್ಕರಣೆ ಕಾರ್ಯ ಈಗಾಗಲೇ ಆರಂಭವಾಗಿದೆ ಆದ್ದರಿಂದ ಸಮಸ್ತ ಮತದಾರ ಬಂಧುಗಳು ತಮ್ಮ ವ್ಯಾಪ್ತಿಯ ಬಿ ಎಲ್ ಓ ಅವರನ್ನು ಸಂಪರ್ಕಿಸಿ ದಾಖಲೆಗಳನ್ನು ಹಾಗೂ ಮಾಹಿತಿಯನ್ನು ಸರಿಯಾದ ಸಮಯಕ್ಕೆ ಒದಗಿಸಿ ಸಂಪೂರ್ಣ ಸಹಕಾರ ನೀಡಿ ಮತದಾನದ ಹಕ್ಕು ಉಳಿಸಿಕೊಳ್ಳಲು ಮನವಿ ಮಾಡಿದರು. ಈ ಸಂದರ್ಭದಲ್ಲಿ ಮಂಡಲ ಅಧ್ಯಕ್ಷರಾದ ವಿಠ್ಠಲ ಸಿದ್ದನವರ್ ಮುಖಂಡರಾದ ಮಂಗೇಶ್ ದೇಶಪಾಂಡೆ ಸಂತೋಷ ಘಟಕಾಂಬಳೆ ಯಲ್ಲಪ್ಪ ಹೇಳವರ್, ಯಲ್ಲಪ್ಪ ಹೊನ್ನೊಜಿ ತಾನಾಜಿ ಪಟ್ಟೇಕರ್ ಶಾಂತ ಹಿರೇಕರ್ ರತ್ನಮಾಲ ಮೂಳೆ ಮುಂತಾದವರು ಉಪಸ್ಥಿತರಿದ್ದರು

# ಡಾ.ಫ.ಗು.ಹಳಕಟ್ಟಿಯವರ ಸೇವೆ ಅವಿಸ್ಮರಣೀಯ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**



ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಹಾಗೂ ಐತಿಹಾಸಿಕ ಪರಂಪರೆಯ ಸಂರಕ್ಷಣೆಯಲ್ಲಿ ಡಾ.ಹಳಕಟ್ಟಿ ಅವರ ಸೇವೆ ಅವಿಸ್ಮರಣೀಯವಾಗಿದೆ ಎಂದು ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ ತಿಳಿಸಿದರು.

ನವನಗರದ ಸರಕಾರಿ ಆದರ್ಶ ವಿದ್ಯಾಲಯದ ಸಭಾಭವನದಲ್ಲಿ ಗುರುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಡಾ.ಫ.ಗು.ಹಳಕಟ್ಟಿಯವರ ಜನ್ಮದಿನದ ಅಂಗವಾಗಿ ಹಮ್ಮಿಕೊಂಡ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಡಾ.ಫ.ಗು. ಹಳಕಟ್ಟಿಯವರು ಕನ್ನಡ ನಾಡು, ನುಡಿ ಮತ್ತು ಸಂಸ್ಕೃತಿಯ ಉಳಿವಿಗಾಗಿ ಸಲ್ಲಿಸಿದ ಸೇವೆ ಸ್ಮರಣೀಯವಾದುದು ಎಂದರು.

ವಕೀಲ ವೃತ್ತಿಯ ಜೊತೆಗೆ ಕನ್ನಡ ನಾಡು, ನುಡಿ, ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯ ಉಳಿವು ಬೆಳವಣಿಗೆಗಾಗಿ ಅವರ ಜೀವನವಿಡಿ ನಡೆಸಿದ ಶ್ರಮ ಇಂದಿನ ಪೀಳಿಗೆಗೆ ಆದರ್ಶವಾಗಿದೆ. ಅವರ ಸಾಧನೆಗಳು ಕನ್ನಡಿಗರಿಗೆ ಸದಾ ಸ್ಪೂರ್ತಿದಾಯಕವಾಗಿದ್ದು, ಅವರ ಆದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ದಾಖಲೆಗಳನ್ನು ಮನೆಗೆ ಸೀಮಿತವಾಗಿರಿಸದೇ ಹೊರ ಪ್ರಪಂಚಕ್ಕೆ ತರುವ ಕೆಲಸ ಮಾಡಿದ್ದಾರೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿ ಸಂಗಪ್ಪ ಅವರು ಮಾತನಾಡಿ, ಒಂದು ರಾಷ್ಟ್ರದ ನಿಜವಾದ ಸಂಪತ್ತು ಅದರ ಸಂಸ್ಕೃತಿ, ಭಾಷೆ ಮತ್ತು ಸಾಹಿತ್ಯದಲ್ಲಿದೆ. ಆ ಅಮೂಲ್ಯ ಸಂಪತ್ತನ್ನು ಮುಂದಿನ ಪೀಳಿಗೆಗೆ ಉಳಿಸುವ ಕಾರ್ಯವೇ ಅತ್ಯಂತ ಶ್ರೇಷ್ಠ ಸೇವೆಯಾಗಿದ್ದು, ಈ ಸೇವೆಯನ್ನು ತಮ್ಮ ಜೀವನದ ಧ್ಯೇಯವನ್ನಾಗಿ ಮಾಡಿಕೊಂಡವರು ಡಾ.ಫ.ಗು.ಹಳಕಟ್ಟಿಯವರು. ಬಸವಾದಿ ಶರಣರ ಸಾವಿರಾರು ವಚನಗಳು ಕಾಲಗರ್ಭದಲ್ಲಿ ಮರೆಯಾಗುತ್ತಿದ್ದ ಸಂದರ್ಭದಲ್ಲಿ ಊರುರು ಸುತ್ತಿ ಮಠ-ಮಂದಿರಗಳು ಹಾಗೂ ಖಾಸಗಿ ಮನೆಗಳಲ್ಲಿ ಸಂಗ್ರಹವಾಗಿದ್ದ ತಾಳೆಗರಿಗಳು ಮತ್ತು ಹಸ್ತಪ್ರತಿಗಳನ್ನು ಹುಡುಕಿ ಅವುಗಳನ್ನು ಸಂರಕ್ಷಿಸಿ, ಮುದ್ರಿಸಿ ಕನ್ನಡ ಸಾಹಿತ್ಯಕ್ಕೆ ಅಪೂರ್ವ ಕೊಡುಗೆ ನೀಡಿದ್ದಾರೆ ಎಂದರು.

ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಅಧ್ಯಕ್ಷ ಅನೀಕುಮಾರ ದಡ್ಡಿ ಮಾತನಾಡಿ, ಶರಣರು, ಮಹನೀಯರು ತಮ್ಮ ವಚನ ಸಾಹಿತ್ಯದ ಮೂಲಕ ಸಮಾಜವನ್ನು ತಿದ್ದುವ ಕೆಲಸ ಮಾಡಿದ್ದಾರೆ. ನಶಿಸಿ ಹೋಗುತ್ತಿರುವ ಸಾಹಿತ್ಯದ ಅಮೂಲ್ಯ ಸಂಪತ್ತನ್ನು ದಾಖಲಿಸುವ ಕೆಲಸ ಡಾ.ಫ.ಗು ಹಳಕಟ್ಟಿಯವರು ಮಾಡಿದ್ದಾರೆ. ಅವರು ಹಾಕಿಕೊಟ್ಟ ಹಾದಿಯಲ್ಲಿ ನಾವೆಲ್ಲರೂ ನಡೆದುಕೊಳ್ಳಬೇಕಿದೆ. ಅಂದಾಗ ಮಾತ್ರ ಅವರ ಹೆಸರಿನಲ್ಲಿ ದಿನಾಚರಣೆಯನ್ನು ಆಚರಿಸಿದಕ್ಕೆ ಸಾರ್ಥಕವಾಗುತ್ತದೆ ಎಂದರು.

ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಮಹತ್ವ, ಪರಂಪರೆಯ ಮೌಲ್ಯ ಹಾಗೂ ಮುಂದಿನ ಪೀಳಿಗೆಗೆ ಅದನ್ನು ಉಳಿಸಿ ಬೆಳೆಸುವ ಅಗತ್ಯತೆಯ ಕುರಿತು ಗುಳೇದಗುಡ್ಡ ನಿವೃತ್ತ ಪ್ರಾಚಾರ್ಯ ಸಿದ್ದಲಿಂಗಪ್ಪ ಬರಗುಂಡಿ ವಿಶೇಷ ಉಪನ್ಯಾಸ ನೀಡಿದರು. ಡಾ.ಹಳಕಟ್ಟಿಯವ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಅಂಗವಾಗಿ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡ ಪ್ರಬಂಧ ಹಾಗೂ ಭಾಷಣ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಮಾಣ ಪತ್ರ, ಪುಸ್ತಕ ರೂಪದ ಬಹುಮಾನ ವಿತರಣೆ ಮಾಡಲಾಯಿತು.

ಆಹಾರ ಇಲಾಖೆಯ ಜಂಟಿ ನಿರ್ದೇಶಕ ಶ್ರೀಶೈಲ ಕಂಕಣವಾಡಿ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎ.ಜಿ.ಮನ್ನಿಕೇರಿ, ಸರಕಾರಿ ಆದರ್ಶ ವಿದ್ಯಾಲಯದ ಪ್ರಾಚಾರ್ಯ ವೀರೇಶ ಪತ್ತಾರ, ಖ್ಯಾತ ವೈದ್ಯರಾದ ಡಾ.ಎಂ.ಎಸ್.ದಡ್ಡೇನವರ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

# ವಚನ ಸಾಹಿತ್ಯದಲ್ಲಿ ಬದುಕಿನ ಮೌಲ್ಯಗಳಿವೆ: ಸುಷ್ಮಾ ಒಡೆಯರ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**



ಮನುಷ್ಯ ಸಮಾಜಕ್ಕೆ ಬದುಕಿನ ಮೌಲ್ಯಗಳನ್ನು ಬೋಧಿಸಿರುವುದು ವಚನ ಸಾಹಿತ್ಯವಾಗಿದ್ದು, ವಿದ್ಯಾರ್ಥಿಗಳು ವಚನ ಸಾಹಿತ್ಯವನ್ನು ಅಧ್ಯಯನ ಮಾಡುವುದು ಅಗತ್ಯವಾಗಿದೆ ಎಂದು ಬಿ.ವಿ.ವಿ. ಸಂಘದ ಅಕ್ಕಮಹಾದೇವಿ ಮಹಿಳಾ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ಪ್ರಾಚಾರ್ಯೆ ಸುಷ್ಮಾ ಒಡೆಯರ ಹೇಳಿದರು.

ನಗರದ ಬಿ.ವಿ.ವಿ.ಸಂಘದ ಅಕ್ಕಮಹಾದೇವಿ ಮಹಿಳಾ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ಐಕ್ಯೂಎಸಿ ಹಾಗೂ ಕನ್ನಡ ವಿಭಾಗದ ಸಂಯುಕ್ತ ಆಶ್ರಯದಲ್ಲಿ ಗುರುವಾರ ನಡೆದ ವಚನ ಪಿತಾಮಹ ಡಾ.ಫ.ಗು.ಹಳಕಟ್ಟಿ ಅವರ ಜನ್ಮದಿನ ಹಾಗೂ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವಿಶೇಷ ಉಪನ್ಯಾಸ ನೀಡಿದ ಕನ್ನಡ ಪ್ರಾಧ್ಯಾಪಕ ಡಾ.ಜಿ.ಐ.ನಂದಿಕೋಲಮಠ, ಡಾ.ಫ.ಗು.ಹಳಕಟ್ಟಿಯವರ ಜೀವನ, ಸಾಹಿತ್ಯ ಸೇವೆ ಹಾಗೂ ವಚನ ಸಾಹಿತ್ಯ ಸಂರಕ್ಷಣೆಯಲ್ಲಿ ಅವರ ಮಹತ್ವದ ಕೊಡುಗೆಯನ್ನು ವಿದ್ಯಾರ್ಥಿಗಳಿಗೆ ವಿವರಿಸಿ, ವಿದ್ಯಾರ್ಥಿಗಳಲ್ಲಿ ವಚನ ಸಾಹಿತ್ಯದ ಬಗ್ಗೆ ಆಸಕ್ತಿ ಬೆಳೆಸುವ ಉದ್ದೇಶದಿಂದ ಮಹಾವಿದ್ಯಾಲಯದಲ್ಲಿ ವಚನ ಪಠಣ ಹಾಗೂ ವಚನ ಸಾಹಿತ್ಯ ಪ್ರಬಂಧ ರಚನೆ ಸೇರಿದಂತೆ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತಿದೆ ಎಂದು ತಿಳಿಸಿದರು.

ಐಕ್ಯೂಎಸಿ ಸಂಯೋಜಕಿ ಪಿ.ಕೆ.ಚೌಗಲಾ, ಉಪನ್ಯಾಸಕರಾದ ಎ.ವಿ.ಪುರಾಣಿಕಮಠ, ಎಸ್.ಕೆ.ಹಿರೇಮಠ ಸೇರಿದಂತೆ ಬೋಧಕ ವರ್ಗ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# 28 ಕೆರೆ ತುಂಬಿಸುವ ಯೋಜನೆಗೆ ಭೂಮಿ ಪೂಜೆ

• **ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ**



ವಿಧಾನಸಭಾ ಕ್ಷೇತ್ರದ ಬಹುನಿರೀಕ್ಷಿತ 28 ಕೆರೆಗಳನ್ನು ತುಂಬಿಸುವ ಮಹತ್ವಾಕಾಂಕ್ಷಿ ಯೋಜನೆಗೆ ₹153.76 ಕೋಟಿ ವೆಚ್ಚದ ಕಾಮಗಾರಿಯ ಭೂಮಿ ಪೂಜೆ ಕಾರ್ಯಕ್ರಮ ಗುರುವಾರ ನೆರವೇರಿತು.

ಗಂಗಾವತಿಯ ಶಾಸಕರಾದ ಜಿ. ಜನಾರ್ಧನ ರೆಡ್ಡಿ ಅವರು ಬೆಳಿಗ್ಗೆ 9 ಗಂಟೆಗೆ ಉಡಮಕಲ್ ಗ್ರಾಮದ ಶರಣಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಪೂಜೆ ಸಲ್ಲಿಸುವ ಮೂಲಕ ಕಾಮಗಾರಿಗೆ ಚಾಲನೆ ನೀಡಿದರು.

ಈ ಯೋಜನೆಯಡಿ ಆಗೋಲಿ, ಹಂಪಸದುರ್ಗ, ಗಡ್ಡಿ, ಹೇಮಗುಡ್ಡ, ಮಲಕನಮರಡಿ, ಭಟ್ಟರನರಸಾಪುರ, ಉಡಮಕಲ್, ಚಿಕ್ಕಬೊಮ್ಮನಾಳ, ಹೊಸೂರು, ಆಸಗಲ್, ಕೊಡದಾಳ್, ಹಿರೇಸುಳಿಕೇರಿ, ದನಕನದೊಡ್ಡಿ, ಹಾಲಹಳ್ಳಿ, ಸಂಗಾಪುರ, ಭೀಮನೂರು, ಕೂಕನಪಳ್ಳಿ, ಇಂದರಗಿ, ವನಬಳ್ಳಾರಿ, ಬೂದುಗುಂಪ, ಹೊಸಹಳ್ಳಿ, ನಾಗೇಶನಹಳ್ಳಿ, ಜಬ್ಬಲಗುಡ್ಡ ಸೇರಿದಂತೆ ಒಟ್ಟು 28 ಕೆರೆಗಳಿಗೆ ಪೈಪ್‌ಲೈನ್ ಮೂಲಕ ನೀರು ತುಂಬಿಸುವ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಜಿ. ಜನಾರ್ಧನ ರೆಡ್ಡಿ, "ಗಂಗಾವತಿ ವಿಧಾನಸಭಾ ಕ್ಷೇತ್ರದ ರೈತರು ಮತ್ತು ಸಾರ್ವಜನಿಕರ ಬಹುದಿನಗಳ ಕನಸಾಗಿದ್ದ ಕೆರೆ ತುಂಬಿಸುವ ಯೋಜನೆ ಇದೀಗ ಸಾಕಾರಗೊಳ್ಳುತ್ತಿದೆ. ₹153.76 ಕೋಟಿ ವೆಚ್ಚದಲ್ಲಿ ಕಾಮಗಾರಿ ಕೈಗೊಳ್ಳಲಾಗುತ್ತಿದ್ದು, ಇದರಿಂದ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ದೊರೆಯಲಿದೆ" ಎಂದು ತಿಳಿಸಿದರು. ಮಾಜಿ ಜಿಲ್ಲಾಧ್ಯಕ್ಷರಾದ ವಿರುಪಾಕ್ಷಪ್ಪ ಸಿಂಗನಾಳ್, ಗ್ರಾಮೀಣ ಮಂಡಲ ಅಧ್ಯಕ್ಷರಾದ ಡಿ ಕೆ ಆಗೋಲಿ, ಜಿಲ್ಲಾ ಉಪಾಧ್ಯಕ್ಷರಾದ ಮನೋಹರಗೌಡ ಹೇರೂರು, ಮುಖಂಡರಾದ ಯಮನೂರು ಚೌಡ್ಕಿ, ಚನ್ನಪ ಮಳಗಿ, ಆನಂದ್ ಗೌಡ, ಚನ್ನವೀರನ ಗೌಡ, ಸಂಗಮೇಶ್ ಬಾಗವಾಡಗಿ, ಮಲ್ಲೇಶಪ್ಪ, ವಿಶ್ವನಾಥ್ ಮಾಲಿ ಪಾಟೀಲ್, ಮಹಾಂತೇಶ್ ಸಂಗಟಿ, ಮಂಜುನಾಥ್ ಗೊಂದಿ, ವಿರುಪಾಕ್ಷಿ ಹೇರೂರು, ಅರ್ಜುನ್ ನಾಯಕ್, ಶರಣಯ್ಯಸ್ವಾಮಿ, ರಮೇಶ್ ನಾಡಿಗರ್, ಬಸವನಗೌಡ ಪೋಲಿಸ್ ಪಾಟೀಲ್, ಹನುಮಗೌಡ ಆಗೋಲಿ, ವಿಶ್ವನಾಥ ಸ್ವಾಮಿ, ಸಣ್ಣ ಹನುಮಂತ, ದುರ್ಗೇಶ್ ನಾಯಕ್, ಹನುಮೇಶ್ ಮರಳಿ, ಶಿವಪುತ್ರ, ಲಿಂಗನಗೌಡ, ಯಮನೂರಪ್ಪ, ವಿರುಪಾಕ್ಷಿ, ದುರ್ಗೇಶ್ ಗೌರಿಪೂರ, ಹನುಮಂತ ಕೇರದೊಡಿ, ದುರ್ಗಪ್ಪ ಬನ್ನಿಹಟ್ಟಿ, ಸ್ಥಳೀಯ ಜನಪ್ರತಿನಿಧಿಗಳು, ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ನೂರಾರು ರೈತರು, ಸಾರ್ವಜನಿಕರು ಉಪಸ್ಥಿತರಿದ್ದು ಹರ್ಷ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಬಿಜೆಪಿ ಪಕ್ಷದ ಮುಖಂಡರು, ಪದಾಧಿಕಾರಿಗಳು, ಹಾಲಿ ಹಾಗೂ ಮಾಜಿ ಜನಪ್ರತಿನಿಧಿಗಳು, ಗ್ರಾಮೀಣ ಮತ್ತು ನಗರ ಮಂಡಲದ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು, ಕಾರ್ಯಕರ್ತರು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸಿದ್ದರು.

# ಬ್ಯೂಟಿ ಟ್ರೇಲರ್ ಬಿಡುಗಡೆ; ಮಹಿಳಾ ಪ್ರಧಾನ ಕಥೆ ಮೇಲೆ ಹೆಚ್ಚಿದ ನಿರೀಕ್ಷೆ



• **ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು**

ಮಹಿಳಾ ಪ್ರಧಾನ ಕಥಾಹಂದರವನ್ನು ಒಳಗೊಂಡಿರುವ 'ಬ್ಯೂಟಿ' ಚಿತ್ರದ ಟ್ರೈಲರ್ ಅದ್ಧೂರಿಯಾಗಿ ಬಿಡುಗಡೆ-ಯಾಗಿದ್ದು, ಸಿನಿಪ್ರಿಯರಲ್ಲಿ ಚಿತ್ರದ ಬಗ್ಗೆ ಹೆಚ್ಚಿನ ನಿರೀಕ್ಷೆ ಮೂಡಿಸಿದೆ. ಮಹಿಳೆಯರ ಗೌರವ, ಆತ್ಮವಿಶ್ವಾಸ ಹಾಗೂ ಸಾಮಾಜಿಕ ಜವಾಬ್ದಾರಿಯಂತಹ ಅಂಶಗಳನ್ನು ಮನರಂಜನೆಯೊಂದಿಗೆ ತೆರೆಗೆ ತರುವ ಪ್ರಯತ್ನವನ್ನು ಚಿತ್ರತಂಡ ಮಾಡಿದೆ.

ಕಲ್ಪವೃಕ್ಷ ಬ್ಯಾನರ್ ಅಡಿಯಲ್ಲಿ ನಿರ್ಮಾಣವಾಗಿರುವ, ಪಿ. ಮುರಳಿ ಕೃಷ್ಣ ಅರ್ಪಿಸುತ್ತಿರುವ ಈ ಚಿತ್ರಕ್ಕೆ ರಾಜಾ ರವಿ ಕುಮಾರ್ ಕಥೆ, ಚಿತ್ರಕಥೆ ಹಾಗೂ ನಿರ್ದೇಶನ ಮಾಡಿದ್ದು, ತನುಜಾ ಮುರಳಿ ಕೃಷ್ಣ ನಿರ್ಮಾಪಕರಾಗಿದ್ದಾರೆ. ಹಿರಿಯ ಸಂಗೀತ ನಿರ್ದೇಶಕ ವಿ. ಮನೋಹರ್ ಸಂಗೀತ ನೀಡಿದ್ದು, ಚಿತ್ರದ ಹಾಡುಗಳು ಮತ್ತು ಹಿನ್ನೆಲೆ ಸಂಗೀತ ಟ್ರೈಲರ್‌ಗೆ ಮತ್ತಷ್ಟು ಮೆರುಗು ತಂದಿವೆ.

ಚಿತ್ರದ ನಾಯಕ ರವಿಕಾಂತ್ ಈ ಪಾತ್ರಕ್ಕಾಗಿ ವಿಶೇಷವಾಗಿ ಭರತನಾಟ್ಯವನ್ನು ಅಭ್ಯಾಸ ಮಾಡಿದ್ದು, ನಾಯಕಿಯಾಗಿ ಮಹಾಲಕ್ಷ್ಮಿ ಅಭಿನಯಿಸಿದ್ದಾರೆ. ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, "ಸುಂದರ ಮುಖಕ್ಕಿಂತ ಸುಂದರ ಮನಸ್ಸು ಮುಖ್ಯ" ಎಂದು ಹೇಳಿ, ಉತ್ತಮ ಕನ್ನಡ ಸಿನಿಮಾಗಳನ್ನು ಚಿತ್ರಮಂದಿರಗಳಲ್ಲಿ ವೀಕ್ಷಿಸಿ ಬೆಂಬಲಿಸುವಂತೆ ಪ್ರೇಕ್ಷಕರಿಗೆ ಮನವಿ ಮಾಡಿದರು.

ಚಿತ್ರದ ಬಹುತೇಕ ಚಿತ್ರೀಕರಣ ಐತಿಹಾಸಿಕ ಹಾಗೂ ನೈಸರ್ಗಿಕ ಸೌಂದರ್ಯಕ್ಕೆ ಹೆಸರಾದ ಮೇಲ್ಕೋಟೆಯಲ್ಲಿ ನಡೆದಿದ್ದು, ಟ್ರೈಲರ್‌ನಲ್ಲಿ ಅಲ್ಲಿನ ದೃಶ್ಯ ವೈಭವ ಗಮನ ಸೆಳೆಯುತ್ತದೆ. ಕನ್ನಡದ ಖ್ಯಾತ ಗಾಯಕರು ಹಾಡುಗಳಿಗೆ ಧ್ವನಿಯಾಗಿದ್ದು, ಸಂಗೀತವೂ ಚಿತ್ರದ ಪ್ರಮುಖ ಆಕರ್ಷಣೆಯಾಗಿದೆ.

ಚಿತ್ರವನ್ನು ಬಾಗೂರು ಟಾಕೀಸ್ ಮೂಲಕ ಬಾಗೂರು ಪ್ರಶಾಂತ್ ವಿತರಣೆ ಮಾಡುತ್ತಿದ್ದು, ಮೊದಲ ಹಂತದಲ್ಲಿ ಸುಮಾರು 35 ಚಿತ್ರಮಂದಿರಗಳಲ್ಲಿ ಜುಲೈ 10ರಂದು ಬಿಡುಗಡೆ ಮಾಡುವ ಯೋಜನೆ ರೂಪಿಸಲಾಗಿದೆ.

ಟ್ರೈಲರ್ ಬಿಡುಗಡೆ ಸಮಾರಂಭದಲ್ಲಿ ಕನ್ನಡ ಚಿತ್ರರಂಗದ ಬೆಳವಣಿಗೆ, ನಿರ್ಮಾಪಕರು ಎದುರಿಸುತ್ತಿರುವ ಸವಾಲುಗಳು ಹಾಗೂ ಉತ್ತಮ ಕನ್ನಡ ಚಿತ್ರಗಳಿಗೆ ಪ್ರೇಕ್ಷಕರು ಚಿತ್ರಮಂದಿರಗಳಿಗೆ ಬಂದು ಬೆಂಬಲ ನೀಡುವ ಅಗತ್ಯದ ಕುರಿತು ಚರ್ಚೆ ನಡೆಯಿತು. ಮಹಿಳಾ ಪ್ರಧಾನ ಕಥೆಯೊಂದಿಗೆ ಸಾಮಾಜಿಕ ಕಾಳಜಿಯನ್ನೂ ಹೊತ್ತಿರುವ 'ಬ್ಯೂಟಿ' ಸಿನಿಮಾ, ಟ್ರೈಲರ್ ಮೂಲಕವೇ ಸಿನಿಪ್ರಿಯರ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದ್ದು, ಚಿತ್ರದ ಮೇಲಿನ ನಿರೀಕ್ಷೆಯನ್ನು ಮತ್ತಷ್ಟು ಹೆಚ್ಚಿಸಿದೆ. ನಿರ್ದೇಶಕರು ಮಾತನಾಡಿ ಕನ್ನಡ ಸಿನಿಮಾ ಗಳನ್ನು ಕನ್ನಡಿಗರು ಜಾಸ್ತಿ ನೋಡಬೇಕು ಬ್ಯೂಟಿ ಸಿನಿಮಾ ತುಂಬಾ ಚನ್ನಾಗಿ ಮೂಡಿಬಂದಿದೆ ಎಲ್ಲರು ನೋಡಿ ಹರಸಿ ಎಂದರು ಕಾರ್ಯಕ್ರಮದಲ್ಲಿ ತ. ಮನೋಹರ್, ಕುಶಾಲ್ ಕೃಷ್ಣ ಕುಸುಮ ಕೃಷ್ಣ, ಅನ್ನಪೂರ್ಣ, ಅಂಜನಾ, ಶಿವಮೊಗ್ಗ ರಾಮಣ್ಣ, ಮನ್ಮೋಹನ್, ಚಕ್ರವರ್ತಿ ದಾವಣಗೆರೆ, ಮಹೇಶ್ ಕುಕ್ಕೆ, ಹೇಮಂತ್ ಕುಮಾರ್, ಸಿದ್ದಾರ್ಥ್ ಕಾರಟಗಿ, ರಾಗ್ವೀರ್ ಸುರಾಗ, ಬೇಬಿ ಆಯುಷ್ಕ ಶೆಟ್ಟಿ, ಉಪಸ್ಥಿತರಿದ್ದರು.

# ಬಳಕೆದಾರರ ಅಗತ್ಯ ಪೂರೈಸುವ ಶ್ಯಾಮ್‌ಸಂಗ್




**ಗುರುಗ್ರಾಮ:** ಎಲ್ಲರಿಗೂ ಸುಲಭವಾಗಿ ಲಭ್ಯವಾಗುವಂತಹ ಆವಿಷ್ಕಾರದ ಸ್ಮಾರ್ಟ್ ಫೋನ್ GalaxyA27 5Gದ ಬಿಡುಗಡೆಯನ್ನು ಸ್ಯಾಂಸಂಗ್ ಲೋಕಾರ್ಪಣೆಗೊಂಡಿದೆ. ವಿಶ್ವಸನೀಯ ಕಾರ್ಯಕ್ಷಮತೆ, ದೀರ್ಘಾವಧಿ ಸಾಫ್ ವೇರ್ ಬೆಂಬಲ, ಪ್ರಬಲ ಭದ್ರತೆ ಹಾಗೂ ಸಲಿಲವಾದ, ಸೂಕ್ಷ್ಮಸಾಫ್ ವೇರ್ ಅನುಭವವನ್ನು ಒದಗಿಸಲಿದೆ. ಜೊತೆಗೆ, ಸ್ಟೈಲ್, ಕಾರ್ಯಕ್ಷಮತೆ ಹಾಗೂ ಕೈಗೆಟುಕುವಿಕೆಯನ್ನು ಸಂಯೋಜಿಸಿದ ಒಂದು ವಿಶ್ವಸನೀಯ ಸಾಧನವನ್ನು ಬಯಸುತ್ತಿರುವ ಯುವ ಬಳಕೆದಾರರ ಅಗತ್ಯವನ್ನು ಅದು ಪೂರೈಸಲಿದೆ. ಗ್ರಾಹಕರು, ಸ್ಯಾಂಸಂಗ್ ವಿಶೇಷ ಮಳಿಗೆಗಳು, ಭಾಗೀದಾರ ಮಳಿಗೆಗಳು, Samsung.comಮತ್ತು ಇತರ ಆನ್ಲೈನ್ ವೇದಿಕೆಗಳಲ್ಲಿ ಗೆಲಾಕ್ಸಿ A27 5Gಅನ್ನು ಖರೀದಿಸಬಹುದು. ಎಲ್ಲಾ ಮಾಡಲ್‌ಗಳೂ, ರೂ. 3000, ಬ್ಯಾಂಕ್/ಯುಪಿಐ ಕ್ಯಾಶ್ ಬ್ಯಾಕ್ ಅಥವಾ 15 ತಿಂಗಳುಗಳ ಅವಧಿಯವರೆಗೆ ಆಯ್ದ ನಾನ್-ಬ್ಯಾಂಕಿಂಗ್ ಫೈನಾನ್ಶಿಯಲ್ ಕಂಪನಿಗಳಿಂದ ಶೂನ್ಯ ಡೌನ್ ಪೇಮೆಂಟ್‌ನಲ್ಲಲ್ಲಿ ಲಭ್ಯವಿದೆ. ಹೆಚ್ಚುವರಿಯಾಗಿ, ಗೆಲಾಕ್ಸಿ A27 5G ಆಯ್ದ ನಾನ್-ಬ್ಯಾಂಕಿಂಗ್ ಫೈನಾನ್ಶಿಯಲ್ ಕಂಪನಿಗಳಿಂದ 8-ತಿಂಗಳ ಡೌನ್ ಪೇಮೆಂಟ್ ಇರುವ 24-ತಿಂಗಳ ಇಎಮ್‌ಐ ಆಯ್ಕೆಯೊಂದಿಗೂ ಲಭ್ಯ ಎಂದು ಕಂಪನಿಯ ವ್ಯವಸ್ಥಾಪಕ ತಿಳಿಸಿದ್ದಾರೆ.

# ಜುಲೈ 5ರಂದು ಪ್ರತಿಭಾ ಪುರಸ್ಕಾರ ಹಾಗೂ ಸಾಧಕರ ಸನ್ಮಾನ ಕಾರ್ಯಕ್ರಮ

**ಬೀದರ್:** ಕರ್ನಾಟಕ ರಾಜ್ಯ ಮಾದಿಗ ನೌಕರರ ಸಂಘ, ಜಿಲ್ಲಾ ಘಟಕದ



ವತಿಯಿಂದ ವಿದ್ಯಾರ್ಥಿಗಳ ಪ್ರತಿಭೆಗೆ ಉತ್ತೇಜನ ನೀಡುವ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರನ್ನು ಗೌರವಿಸುವ ಉದ್ದೇಶದಿಂದ ಜುಲೈ 5 ರಂದು ನಗರದ ರಂಗ ಮಂದಿರದಲ್ಲಿ ಹಮ್ಮಿಕೊಳ್ಳಲಾಗಿದ್ದು, ಪ್ರತಿಭಾ ಪುರಸ್ಕಾರ ಹಾಗೂ ಸಾಧಕರ ಸನ್ಮಾನ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಮಾದಿಗ ಸಮಾಜದಲ್ಲಿ ಶಿಕ್ಷಣ ಮತ್ತು ಸಾಧನೆಗೆ ಪ್ರೋತ್ಸಾಹ ನೀಡುವುದು ಅತ್ಯಂತ ಅವಶ್ಯಕವಾಗಿದ್ದು, ಕಳೆದ ವರ್ಷದಂತೆ ಈ ವರ್ಷವೂ ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ, ಸ್ನಾತಕೋತ್ತರ, ವೈದ್ಯಕೀಯ, ಎಂಜಿನಿಯರಿಂಗ್ ಹಾಗೂ ಇತರ ಉನ್ನತ ಶಿಕ್ಷಣ ಕೋರ್ಸ್‌ಗಳಲ್ಲಿ ಉತ್ತಮ ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಪ್ರೋತ್ಸಾಹಿಸಲಾಗುವುದು ಎಂದು ಸಂಘದ ಪದಾಧಿಕಾರಿಗಳು ತಿಳಿಸಿದ್ದಾರೆ. ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆ ಮಾಡಿದ ವ್ಯಕ್ತಿಗಳು ಹಾಗೂ ಒಳ ಮೀಸಲಾತಿ ಜಾರಿಗಾಗಿ ಹೋರಾಟ ನಡೆಸಿದ ಮಹನೀಯರನ್ನು ಸಹ ಸನ್ಮಾನಿಸಲಾಗುವುದು.

ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಎಲ್ಲಾ ವಿದ್ಯಾರ್ಥಿಗಳು, ಸಾಧಕರು ಹಾಗೂ ಸಮಾಜದ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕರ್ನಾಟಕ ರಾಜ್ಯ ಮಾದಿಗ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಡಾ. ದೇವಿದಾಸ ತುಮಕುಂಟೆ ಹಾಗೂ ಕಾರ್ಯದರ್ಶಿ ಡಾ. ಜೈಭಾರತ ಮಂಗೇಶೇಕರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವೃತ್ತಿ ತ್ಯಜಿಸಿ ವಚನಗಳ ಸಂಗ್ರಹಣೆಗೆ ಜೀವನ ಮುಡಿಪು



**ಬಸವನಬಾಗೇವಾಡಿ:** ವಚನ ಸಂರಕ್ಷಣಾ ದಿನ ಹಾಗೂ ವಚನ ಸಾಹಿತ್ಯದ ಪಿತಾಮಹ ಡಾ. ಫ.ಗು. ಹಳಕಟ್ಟಿ ಅವರ 146ನೇ ಜನ್ಮದಿನವನ್ನು ಗುರುವಾರ ಬೆಳಿಗ್ಗೆ ಪಟ್ಟಣದ ಶರಣ ಸಾಹಿತ್ಯ ಪರಿಷತ್ ಹಾಗೂ ಕದಳಿ ವೇದಿಕೆ ಸಹಯೋಗದಲ್ಲಿ ಆಚರಿಸಲಾಯಿತು.

ಹಿರಿಯ ಸಾಹಿತಿ ವಿವೇಕಾನಂದ. ಕೆ ಕಲ್ಯಾಣಶೆಟ್ಟಿ ಮಾತನಾಡಿ, 1880ರ ಜುಲೈ 2ರಂದು ಜನಿಸಿದ ಹಳಕಟ್ಟಿಯವರು ವಕೀಲಿ ವೃತ್ತಿ ತ್ಯಜಿಸಿ ವಚನಗಳ ಸಂಗ್ರಹಣೆಗೆ ತಮ್ಮ ಜೀವನ ಮುಡಿಪಾಗಿಟ್ಟರು. 1904ರಿಂದ ಸುಮಾರು 30 ವರ್ಷಗಳ ಕಾಲ ಮನೆ-ಮಠಗಳನ್ನು ಸುತ್ತಿ ಮೂಲೆಗುಂಪಾಗಿದ್ದ 15,000ಕ್ಕೂ ಹೆಚ್ಚು ತಾಳೆಗರಿ ವಚನಗಳನ್ನು ಅವರು ಶೋಧಿಸಿದರು.

1926ರಲ್ಲಿ ಮೊದಲ ಬಾರಿಗೆ ವಚನಗಳನ್ನು ಶಾಸ್ತ್ರೀಯವಾಗಿ ಸಂಪಾದಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸುವ ಮೂಲಕ ಕನ್ನಡ ಸಾರಸ್ವತ ಲೋಕಕ್ಕೆ ಮಹದುಪಕಾರ ಮಾಡಿದರು. ಹಳಕಟ್ಟಿಯವರು ಇಲ್ಲದಿದ್ದರೆ ಬಸವಣ್ಣನವರ ವಚನಗಳು ಇಂದು ನಮಗೆ ದೊರಕುತ್ತಿರಲಿಲ್ಲ ಎಂದು ಸ್ಮರಿಸಿದರು.

ಹಳಕಟ್ಟಿಯವರು ಸ್ಥಾಪಿಸಿದ 'ಶಿವಾನುಭವ' ಪತ್ರಿಕೆ ವಚನ ಪ್ರಸಾರದ ಮೊದಲ ವೇದಿಕೆಯಾಯಿತು. ವಚನ ಸಂರಕ್ಷಣೆಯ ಭಗೀರಥನ ತ್ಯಾಗವನ್ನು ಯುವ ಪೀಳಿಗೆಗೆ ತಿಳಿಸುವುದು ನಮ್ಮೆಲ್ಲರ ಕರ್ತವ್ಯ ಎಂದರು.

ಕಾರ್ಯಕ್ರಮದ ಆರಂಭದಲ್ಲಿ ಎಲ್ಲ ಗಣ್ಯರು ಹಳಕಟ್ಟಿ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ಶರಣ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ನ್ಯಾ. ವೀರಣ್ಣ, ಬ. ಮರ್ತೂರ, ಕದಳಿ ವೇದಿಕೆ ಅಧ್ಯಕ್ಷೆ ಸಾವಿತ್ರಿ, ವ್ಹಿ. ಕಲ್ಯಾಣಶೆಟ್ಟಿ, ಎಸ್. ಎಸ್. ಝುಳಕಿ, ಆರ್. ಜಿ. ಅಳ್ಳಗಿ, ಸಂಗಪ್ಪ ಬಶೆಟ್ಟಿ, ಸಿದ್ದಲಿಂಗ ಬಶೆಟ್ಟಿ, ಡಾ. ಮಹಾಂತೇಶ ಮಡಿಕೇಶ್ವರ, ಸುಭಾಷಚಂದ್ರ ಆಯ್. ಮನಗೂಳಿ, ಕವಿತಾ ವ್ಹಿ. ಮರ್ತೂರ, ನ್ಯಾ. ಗುರುರಾಜ, ಬ. ಕನ್ನೂರ ಹಾಜರಿದ್ದರು.

# ಶರಣರ ಜ್ಞಾನಬೆಳಕನ್ನು ಜಗತ್ತಿಗೆ ತಂದ ತಪಸ್ವಿ ಡಾ. ಫ.ಗು.ಹಳಕಟ್ಟಿ..!



ವರ್ತಮಾನ-ವಿಜಯ
● ಮಧೂರ ತಿಳಗೂಳಕರ
ಜಿಲ್ಲಾ ವರದಿಗಾರರು

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕೆಲವರು ಕೇವಲ ಸಾಹಿತಿಗಳಾಗಿ ಉಳಿಯುತ್ತಾರೆ, ಇನ್ನು ಕೆಲವರು ಇಡೀ ಸಂಸ್ಕೃತಿಯನ್ನು ಪುನರುತ್ಥಾನಗೊಳಿಸಿದ ಭಗೀರಥರಾಗುತ್ತಾರೆ. ಅಂತಹ ಅಪರೂಪದ ಮಹಾಪುರುಷರಲ್ಲಿ ಮುಂಚೂಣಿಯಲ್ಲಿ ನಿಲ್ಲುವ ಹೆಸರು ಡಾ. ಫಕೀರಪ್ಪ ಗುರುಬಸಪ್ಪ ಹಳಕಟ್ಟಿ.

ಹೌದು 12ನೇ ಶತಮಾನದ ಶರಣರ ಕ್ರಾಂತಿ-ಕಾರಿ, ಮಾನವತಾವಾದಿ ವಚನ ಸಾಹಿತ್ಯ ಇಂದು ನಮ್ಮ ಕೈಯಲ್ಲಿದೆ ಎಂದರೆ, ಅದಕ್ಕೆ ಈ ಒಬ್ಬನೇ ಒಬ್ಬ ವ್ಯಕ್ತಿಯ ಜೀವಮಾನದ ತಪಸ್ಸು ಕಾರಣ ಎಂದರೆ ತಪ್ಪಾಗಲಾರದು ಅವರ ಕೃತಜ್ಞತೆಯ ನೆನಪಿನಲ್ಲಿ, ಅವರ ಅಗಾಧ ಸಾಧನೆಯನ್ನು ಕಣ್ಣಿಗೆ ಕಟ್ಟುವಂತೆ ಬಿಂಬಿಸುವ ಒಂದು ವಿಶೇಷ ಲೇಖನ ಇಲ್ಲಿದೆ ಓದಿ.

**ಕತ್ತಲ ಕೋಣೆಯಿಂದ ಬೆಳಕಿನೆಡೆಗೆ ಎಂಬ ವಚನಗಳ ಉದ್ಧಾರ:** ಒಂದು ಕಾಲವಿತ್ತು, ಬಸವಣ್ಣನವರೂ ಸೇರಿದಂತೆ ನೂರಾರು ಶರಣರ ಕ್ರಾಂತಿಕಾರಿ ವಚನಗಳು ತಾಳೆಗರಿಗಳ ರೂಪದಲ್ಲಿ, ಹರಿದು ಹೋದ ಕಾಗದಗಳಾಗಿ ಉತ್ತರ ಕರ್ನಾಟಕದ ಹಳ್ಳಿಗಳ ಕತ್ತಲೆ ಕೋಣೆಗಳಲ್ಲಿ, ಮಠಗಳ ಮೂಲೆಗಳಲ್ಲಿ ಗೆದ್ದಲು ಹಿಡಿಯುತ್ತಿದ್ದವು. ಕನ್ನಡಿಗರು ತಮ್ಮದೇ ಆದ ವೈಚಾರಿಕ ಬಂಗಾರವನ್ನು ಮರೆತು ಕುಳಿತಿದ್ದರು. ಅಂತಹ ಕತ್ತಲೆಯ ಕಾಲದಲ್ಲಿ ಬೆಳಕಿನ ಕಿರಣವಾಗಿ ಮೂಡಿಬಂದವರೇ ಫ. ಗು. ಹಳಕಟ್ಟಿಯವರು. ವಕೀಲಿ ವೃತ್ತಿ ಕೈಯಲ್ಲಿದ್ದರೂ, ಹಳಕಟ್ಟಿಯವರ ಮನಸ್ಸು ಮಾತ್ರ ಶರಣರ ವಚನಗಳತ್ತ ತುಡಿಯುತ್ತಿತ್ತು. ಕೋರ್ಟಿನ ಕಪ್ಪು ಕೋಟನ್ನು ಬದಿಗಿಟ್ಟು, ಕಾಲಿಗೆ ಚಪ್ಪಲಿ ಧರಿಸಿ, ಹೆಗಲಿಗೆ ಜೋಳಿಗೆ ಸಿಕ್ಕಿಸಿಕೊಂಡು ಅವರು ಹಳ್ಳಿಹಳ್ಳಿಗಳನ್ನು ಅಲೆಯಲು ಆರಂಭಿಸಿದರು. ಹಳೆಯ ಮನೆಗಳ ಅಟ್ಟಗಳು, ಕಸದ ರಾಶಿಗಳು, ಮಠಗಳ ಮೂಲೆಗಳನ್ನು ಜಾಲಾಡಿದರು. ಯಾರಾದರೂ ತಾಳೆಗರಿಗಳನ್ನು ಕೊಡದಿದ್ದರೆ ಅವರ ಕೈಕಾಲು ಹಿಡಿದು ಪೆಟ್ಟಿಗೆಗಳನ್ನು ಹೊತ್ತು ತಂದರು. ಅದು ಕೇವಲ ಕಾಗದದ ತುಂಡುಗಳ ಹುಡುಕಾಟವಾಗಿರಲಿಲ್ಲ ಅದು ಕಳೆದುಹೋಗಿದ್ದ ಕನ್ನಡಿಗರ ಆತ್ಮದ ಹುಡುಕಾಟವಾಗಿತ್ತು.

**ಮನೆ ಮಾರಿದರೂ ಮನ ಸೋಲದ ಚೇತನ ಡಾ .ಫ. ಗು. ಹಳಕಟ್ಟಿಯವರು:** ಸಂಶೋಧನೆ ಎನ್ನುವುದು ಹೂವಿನ ಹಾಸಿಗೆಯಲ್ಲ. ಹಳಕಟ್ಟಿಯವರು ತಾವು ಕಷ್ಟಪಟ್ಟು ಸಂಪಾದಿಸಿದ ವಚನಗಳನ್ನು ಪ್ರಕಟಿಸಲು ಮುಂದಾದಾಗ ಹಣದ ತೀವ್ರ ಅಭಾವ ಎದುರಾಯಿತು, ಅಂದು ವಚನಗಳನ್ನು ಮುದ್ರಿಸಲು ಯಾರೂ ಮುಂದೆ ಬರಲಿಲ್ಲ. ಆಗ ಹಳಕಟ್ಟಿಯವರು ಧೃತಿಗೆಡಲಿಲ್ಲ , ನನ್ನ ಶರಣರ ವಚನಗಳು ಜಗತ್ತಿಗೆ ತಲುಪಬೇಕಾದರೆ ನನ್ನ ಮನೆ ಹೋದರೂ ಚಿಂತೆಯಿಲ್ಲ" ಎಂದು-ಕೊಂಡು, ತಮ್ಮ ಸ್ವಂತ ಮನೆಯನ್ನೇ ಮಾರಿ, ಆ ಹಣದಿಂದ ಹಿತಚಿಂತಕ ಎಂಬ ಮುದ್ರಣಾಲಯವನ್ನು ಸ್ಥಾಪಿಸಿದವರು. ಕಷ್ಟಪಟ್ಟು ಸಂಗ್ರಹಿಸಿದ ವಚನಗಳನ್ನು ತಾವೇ ಪ್ರೂಫ್ ತಿದ್ದಿ, ಮುದ್ರಿಸಿ ಪ್ರಕಟಿಸಿದರು. ಹೆಂಡತಿ, ಮಕ್ಕಳ ಹಸಿವಿಗಿಂತಲೂ ಅವರಿಗೆ ವಚನ ಸಾಹಿತ್ಯದ ಹಸಿವೇ ದೊಡ್ಡದಾಗಿತ್ತು. ಈ



ಕಾರಣಕ್ಕಾಗಿಯೇ ಅವರನ್ನು 'ವಚನ ಪಿತಾಮಹ' ಎಂದು ಇಡೀ ನಾಡು ಗೌರವದಿಂದ ಕರೆಯುತ್ತದೆ.

**ವಚನಗಳ ವೈಶ್ವಿಕ ಪ್ರಸಾರಕ:** ಕೇವಲ ವಚನಗಳನ್ನು ಗ್ರಂಥ ರೂಪದಲ್ಲಿ ತರುವುದು ಮಾತ್ರ ಹಳಕಟ್ಟಿಯವರ ಗುರಿಯಾಗಿರಲಿಲ್ಲ. ಬಸವಣ್ಣನವರ ವೈಚಾರಿಕತೆ ಇಡೀ ಜಗತ್ತಿಗೆ ತಿಳಿಯಬೇಕೆಂದು ಬಯಸಿ, 1926 ರಲ್ಲಿ ಶಿವಾನುಭವ ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು. ವಚನಗಳನ್ನು ಇಂಗ್ಲಿಷ್ ಭಾಷೆಗೂ ಅನುವಾದಿಸಿ, ಪಾಶ್ಚಾತ್ಯ ಜಗತ್ತು ಕೂಡ ವಚನ ಕ್ರಾಂತಿಯತ್ತ ತಿರುಗಿ ನೋಡುವಂತೆ ಮಾಡಿದರು. ಅವರು ಮಾಡಿದ ಈ ಭಗೀರಥ ಪ್ರಯತ್ನದಿಂದಾಗಿ ಇಂದು ವಚನ ಸಾಹಿತ್ಯ ಜಾಗತಿಕ ಮಟ್ಟದಲ್ಲಿ ಮನ್ನಣೆ ಪಡೆದಿದೆ.

ಇಷ್ಟೆಲ್ಲಾ ಸಾಧನೆ ಮಾಡಿದ ಹಳಕಟ್ಟಿಯವರ ಕೊನೆಯ ದಿನಗಳು ಅತ್ಯಂತ ಕಷ್ಟದಲ್ಲಿದ್ದವು. ಒಮ್ಮೆ ಅವರು ವಿಪರೀತ ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದಾಗ, ವಚನಗಳ ತಾಳೆಗರಿಗಳನ್ನು ಇಟ್ಟಿದ್ದ ಪೆಟ್ಟಿಗೆಯನ್ನೇ ತಲೆಗೆ ದಿಂಬನ್ನಾಗಿ ಮಾಡಿಕೊಂಡು ಮಲಗಿದ್ದರಂತೆ. ಯಾರೋ ಬಂದು ಯಾಕೆ ಹೀಗೆ ಮಲಗಿದ್ದೀರಿ..? ಎಂದು ಕೇಳಿದಾಗ, ಹಳಕಟ್ಟಿಯವರು ಕಣ್ಣೀರು ಹಾಕುತ್ತಾ, ನನ್ನ ಪ್ರಾಣ ಹೋದರೂ ಪರವಾಗಿಲ್ಲ, ಈ ವಚನಗಳಿಗೆ ಏನೂ ಆಗಬಾರದು. ನನ್ನ ಕೊನೆಯುಸಿರು ಇರುವವರೆಗೂ ಇವುಗಳನ್ನು ನಾನು ಕಾಯಬೇಕು ಎಂದಿದ್ದರಂತೆ..! ಅವರ ಸಮರ್ಪಣಾ ಭಾವ ಎಂತಹವರ ಕಣ್ಣಲ್ಲೂ ನೀರು ತರಿಸುವಂತದ್ದು.

1967ರ ಜೂನ್ 29 ರಂದು ಈ ಮಹಾ ಚೇತನ ಇಹಲೋಕ ತ್ಯಜಿಸಿತು. ಫ. ಗು. ಹಳಕಟ್ಟಿಯವರು ಕೇವಲ ಒಬ್ಬ ವ್ಯಕ್ತಿಯಾಗಿರಲಿಲ್ಲ, ಅವರೊಂದು ಸಂಶೋಧನಾ ಸಂಸ್ಥೆಯಾಗಿದ್ದರು. ಅವರು ನಮಗಾಗಿ ವಚನಗಳೆಂಬ ಜ್ಞಾನದ ಭಂಡಾರವನ್ನು ಉಳಿಸಿ ಹೋಗದಿದ್ದರೆ, ಇಂದು ನಮ್ಮ ಸಂಸ್ಕೃತಿ ಎಷ್ಟು ಬಡವಾಗುತ್ತಿತ್ತಲ್ಲವೇ..?

ಇಂದು ನಾವು ವಚನಗಳನ್ನು ಓದುತ್ತಾ ಹೆಮ್ಮೆ ಪಡುತ್ತಿರುವಾಗ, ಅದರ ಹಿಂದೆ ಹಳಕಟ್ಟಿಯವರ ಬೆವರು ಮತ್ತು ಕಣ್ಣೀರಿನ ಇತಿಹಾಸವಿದೆ ಎಂಬುದನ್ನು ಮರೆಯಬಾರದು. ಆ ಮಹಾತ್ಮನಿಗೆ ನಾವು ಸಲ್ಲಿಸಬಹುದಾದ ನಿಜವಾದ ಗೌರವವೆಂದರೆ, ಅವರು ಕಷ್ಟಪಟ್ಟು ತಂದುಕೊಟ್ಟ ವಚನಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದು ಮತ್ತು ಮುಂದಿನ ಪೀಳಿಗೆಗೆ ದಾಟಿಸುವುದು ಮಾತ್ರ ಇಂದು ಡಾ ಫ. ಗು. ಹಳಕಟ್ಟಿಯವರ ಜನ್ಮದಿನ ಇಂದಷ್ಟೇ ಅವರನ್ನು ಕೊಂಡಾಡದೇ ಪ್ರತಿದಿನ ನೆನಪಿಸಿಕೊಂಡಾಗ ಮಾತ್ರ ಅರ್ಥಪೂರ್ಣ.

# ಸಬ್ಬತ್ ಆರಾಧನೆ ಹಾಗೂ ಫಾದರ್ಸ್ ಡೇ ಆಚರಣೆ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಭಾಲ್ಕಿಯ ರೇಲ್ವೆ ಸ್ಟೇಷನ ರಸ್ತೆಯ ಸೆವೆಂಥ್ ಡೇ ಅಡ್ವೆಂಟಿಸ್ಟ್ ಮರಾಠಿ ಚರ್ಚ್‌ನಲ್ಲಿ ಶನಿವಾರ ಸಬ್ಬತ್ ದಿನದ ವಿಶೇಷ ಆರಾಧನೆ ಹಾಗೂ ಫಾದರ್ಸ್ ಡೇ ಕಾರ್ಯಕ್ರಮವು ಭಕ್ತಿ, ಸೇವೆ ಮತ್ತು ಸೌಹಾರ್ದದ ವಾತಾವರಣದಲ್ಲಿ ಅರ್ಥಪೂರ್ಣವಾಗಿ ನಡೆಯಿತು.

ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಚರ್ಚಿನ ಫಾದರ್ ಸುಧಾಕರ್ ಕರ್ಕರೆ ಅವರು ಪವಿತ್ರ ಬೈಬಲ್‌ನಲ್ಲಿರುವ ವಚನಗಳನ್ನು ಭಕ್ತಿಗೀತೆಗಳ ಮೂಲಕ ಹಾಡಿ, ಅವುಗಳ ಆಧ್ಯಾತ್ಮಿಕ ಅರ್ಥವನ್ನು ಭಕ್ತರಿಗೆ ಸರಳವಾಗಿ ವಿವರಿಸಿದರು. ಬಳಿಕ ಯೇಸು ಕ್ರಿಸ್ತನಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಿ, ವಿಶ್ವದ ಸಮಸ್ತ ಜೀವಜಾತಿಗೆ ಶಾಂತಿ, ಆರೋಗ್ಯ, ಸುಖ-ಸಮೃದ್ಧಿ ಹಾಗೂ ಒಳಿತನ್ನು ಕರುಣಿಸುವಂತೆ ದೇವರಲ್ಲಿ ಪ್ರಾರ್ಥಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಭಾಲ್ಕಿ ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ನೂತನ ಅಧ್ಯಕ್ಷ ಜೈರಾಜ್ ಪಾತ್ರೆ ಅವರು, "ಭಾರತವು ಭವ್ಯ ಪರಂಪರೆ, ವೈವಿಧ್ಯತೆ ಮತ್ತು ಸರ್ವಧರ್ಮ ಸಮಭಾವದ ನೆಲೆಯಾಗಿದೆ. ನಮ್ಮ ಸಂವಿಧಾನವು ಪ್ರತಿಯೊಬ್ಬರಿಗೂ ತಮ್ಮ ಧರ್ಮವನ್ನು ಸ್ವತಂತ್ರವಾಗಿ ಆಚರಿಸುವ ಹಕ್ಕನ್ನು ನೀಡಿದೆ. ಕ್ರೈಸ್ತ ಸಮುದಾಯವು ಸದಾ ಸೇವಾ ಮನೋಭಾವಕ್ಕೆ ಹೆಸರಾಗಿದ್ದು,



ಸಮಾಜಸೇವೆಯೇ ಅವರ ಬದುಕಿನ ಧ್ಯೇಯವಾಗಿದೆ. ಅದಕ್ಕೆ ಅತ್ಯುತ್ತಮ ಉದಾಹರಣೆ ಮದರ್ ತೆರೇಸಾ ಅವರ ಮಾನವೀಯ ಸೇವಾಕಾರ್ಯವಾಗಿದ್ದು, ಅದು ಇಡೀ ವಿಶ್ವಕ್ಕೆ ಮಾದರಿಯಾಗಿದೆ," ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಮಾತನಾಡಿದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಗೌರವ ಸಲಹೆಗಾರ ಚಂದ್ರಕಾಂತ ಪಾಟೀಲ ಅವರು, "ದೇವರ ವಾಕ್ಯಗಳು ಮತ್ತು ಭಕ್ತಿಭಾವದ ಗೀತೆಗಳು ಮೊಳಗುತ್ತಿದ್ದಂತೆ ಚರ್ಚಿನಲ್ಲಿ ನೆರೆದಿದ್ದ ಪ್ರತಿಯೊಬ್ಬರ ಮುಖದಲ್ಲೂ ದೈವಿಕ ತೇಜಸ್ಸು ಮೂಡಿತ್ತು. ಭಕ್ತಿಯ ಆರಾಧನೆಯಲ್ಲಿ ತಲ್ಲೀನರಾದವರ ಮುಖಗಳಲ್ಲಿ ಆಧ್ಯಾತ್ಮಿಕ ಕಾಂತಿ ಎದ್ದು ಕಾಣುತ್ತಿತ್ತು. ದೇವರ ಸಾನ್ನಿಧ್ಯವನ್ನು ಅನುಭವಿಸಿದಂತಹ ಪವಿತ್ರ ವಾತಾವರಣ ನಿರ್ಮಾಣವಾಗಿತ್ತು," ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಪತ್ರಕರ್ತರ ಸಂಘದ ಅಧ್ಯಕ್ಷ ಜೈರಾಜ್ ಪಾತ್ರೆ, ಗೌರವ ಸಲಹೆಗಾರ ಚಂದ್ರಕಾಂತ ಪಾಟೀಲ ಹಾಗೂ ಪ್ರಧಾನ ಕಾರ್ಯದರ್ಶಿ ಸಂತೋಷ ಬಿ.ಜಿ. ಪಾಟೀಲ ಅವರನ್ನು ಚರ್ಚಿನ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಬಳಿಕ ಫಾದರ್ಸ್ ಡೇ ಅಂಗವಾಗಿ ಕೇಕ್ ಕತ್ತರಿಸಿ ಪರಸ್ಪರ ಸಿಹಿ ಹಂಚುವ ಮೂಲಕ ಸಂಭ್ರಮಾಚರಣೆ ನಡೆಸಲಾಯಿತು. ಕುಟುಂಬದ ಮೌಲ್ಯಗಳು, ತಂದೆಯ ತ್ಯಾಗ ಮತ್ತು ಪ್ರೀತಿಯನ್ನು ಸ್ಮರಿಸುವ ಸಂದೇಶಗಳು ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿದ್ದವು.

ಭಕ್ತಿ, ಪ್ರಾರ್ಥನೆ, ಸೇವಾ ಮನೋಭಾವ ಹಾಗೂ ಸರ್ವಧರ್ಮ ಸೌಹಾರ್ದದ ಸಂದೇಶವನ್ನು ಸಾರಿದ ಈ ಕಾರ್ಯಕ್ರಮವು ಭಾಲ್ಕಿಯ ಕ್ರೈಸ್ತ ಸಮುದಾಯದಲ್ಲಿ ವಿಶೇಷ ಮೆರುಗು ಮೂಡಿಸಿತು.

ಈ ಸಂದರ್ಭದಲ್ಲಿ ಸುವರ್ಣ ಕರ್ಕರೆ, ಮಂಗಲಬಾಯಿ, ಸಾರಂಗ ವಕೀಲರು, ಮೋಹನರಾವ್ ಸೂರ್ಯವಂಶಿ, ಮಹಾದೇವಿ, ಗುಂಡಪ್ಪ ತಳವಾಡೆ, ರೋಜ್ ಮೇರಿ, ರಾಜಕುಮಾರ್, ಭಾರಬಾಯಿ, ಅಶೋಕ್ ಪ್ರೇಮ್‌ಕುಮಾರ್ ಮೆಹತ್ರೆ, ಅಬ್ರಹಾಂ, ವಿಲಾಸ್ ಕರ್ಕರೆ, ಮಾಣಿಕ್ ಸುಯೇಶ್, ಶೇಷರಾವ್ ಶಾಮ್ ಸೇರಿದಂತೆ ಚರ್ಚಿನ ಅನೇಕ ಭಕ್ತರು ಉಪಸ್ಥಿತರಿದ್ದು, ವಿಶೇಷ ಆರಾಧನೆಯಲ್ಲಿ ಭಾಗವಹಿಸಿ ದೇವರ ಕೃಪೆಗೆ ಪಾತ್ರರಾದರು. ನೇರೆದಿರುವ ಭಕ್ತರಿಗು ಅತಿಥಿಗಣ್ಯರಿಗೂ ಡಾ॥ ಪ್ರಶಾಂತ ಶ್ರಾವಣ ಇವರ ಕುಟುಂಬದ ವತಿಯಿಂದ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.

# ಸತ್ಯದ ಧ್ವನಿ-ಪ್ರಜಾಪ್ರಭುತ್ವದ ಖನಿ



ಜನ-ಜಾಗೃತಿ
●ಎಂ.ಪಿ ಎಂ.ಕೊಟ್ರಯ್ಯ
ಹೂವಿನ ಹಡಗಲಿ

ಪ್ರಜಾಪ್ರಭುತ್ವದ ಮೂಲ ಆಸ್ತಿಯೆಂದರೆ ಅದು 'ಸತ್ಯ'. ಸಮಾಜದ ಸ್ವಾಸ್ಥ್ಯ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಗಟ್ಟಿಯಾಗಿ ಕಾಯ್ದುಕೊಳ್ಳುವಲ್ಲಿ ಮಾಧ್ಯಮಗಳ ಪಾತ್ರ ಅನನ್ಯವಾದದ್ದು. ವರ್ತಮಾನದ ಸಮಾಜಕ್ಕೆ ಕನ್ನಡಿಯಾಗಿ, ದಿಕ್ಸೂಚಿಯಾಗಿ ಕೆಲಸ ಮಾಡುವ ಪತ್ರಿಕೋದ್ಯಮಕ್ಕೆ ಒಂದು ಸುದೀರ್ಘ ಇತಿಹಾಸವಿದೆ. ಶೋಷಿತರ, ಧ್ವನಿಯಿಲ್ಲದವರ ಧ್ವನಿಯಾಗಿ ನಿಲ್ಲುವ ಪತ್ರಿಕೋದ್ಯಮವನ್ನು ನಾವು ಪ್ರಜಾಪ್ರಭುತ್ವದ 'ನಾಲ್ಕನೇ ಅಂಗ' ಎಂದು ಅತ್ಯಂತ ಗೌರವದಿಂದ ಕರೆಯುತ್ತೇವೆ.

ಮಾಧ್ಯಮಗಳ ಮೂಲ ಉದ್ದೇಶ ಕೇವಲ ಸುದ್ದಿ ಬಿತ್ತರಿಸುವುದಲ್ಲ; ಬದಲಿಗೆ ಸಮಾಜದ ಹಿತವನ್ನು ಕಾಯುವುದು. "ಲೋಕಾಃ ಸಮಸ್ತಾ ಸುಖಿನೋ ಭವಂತು" ಎಂಬ ಧ್ಯೇಯದೊಂದಿಗೆ ಇಡೀ ಸಮಾಜದ ಒಳಿತಿಗಾಗಿ ಶ್ರಮಿಸುವುದು ಇದರ ಮೂಲ ಮಂತ್ರವಾಗಿದೆ.

**ಅಪ್ರತಿಮ ಪರಿಶ್ರಮದ ಹಿನ್ನೆಲೆ:** ಮುಂಜಾನೆ ನಮ್ಮ ಕೈ ಸೇರುವ ಒಂದು ದಿನಪತ್ರಿಕೆಯ ಹಿಂದೆ ನೂರಾರು ಜನರ ಅವಿರತ ಶ್ರಮ ಅಡಗಿರುತ್ತದೆ. ಹಗಲಿರುಳು ಎನ್ನದೆ, ಪ್ರಾಣದ ಹಂಗು ತೊರೆದು ಸುದ್ದಿ ಸಂಗ್ರಹಿಸುವ ವರದಿಗಾರರು, ದೇಶದ ಮೂಲೆ ಮೂಲೆಗಳಿಂದ ಬರುವ ಸುದ್ದಿಗಳನ್ನು ವಿಶ್ಲೇಷಿಸಿ, ಸತ್ಯಾಸತ್ಯತೆಯನ್ನು ಪರಿಶೀಲಿಸುವ ಸಂಪಾದಕೀಯ ಮಂಡಳಿ, ರಾತ್ರಿಯಿಡೀ ಕಾರ್ಯನಿರ್ವಹಿಸುವ ಮುದ್ರಣಾಲಯದ ಸಿಬ್ಬಂದಿ-ಹೀಗೆ ಪ್ರತಿಯೊಬ್ಬರ




ಪರಿಶ್ರಮವೂ ಶ್ಲಾಘನೀಯ. ಇಷ್ಟೇ ಅಲ್ಲದೆ, ಚಳಿ, ಮಳೆ, ಗಾಳಿ ಎನ್ನದೆ ಮುಂಜಾನೆ 4 ಗಂಟೆಗೆ ಎದ್ದು ನಮ್ಮ ಮನೆ ಬಾಗಿಲಿಗೆ ಪತ್ರಿಕೆಯನ್ನು ತಲುಪಿಸುವ ವಿತರಕರ (Paper Vendors) ಶ್ರಮದ ಸಾಂಘಿಕ ಪ್ರಯತ್ನವೇ ಒಂದು ದಿನಪತ್ರಿಕೆ.

ಕನ್ನಡ ಪತ್ರಿಕೋದ್ಯಮಕ್ಕೆ ತನ್ನದೇ ಆದ ಹೆಮ್ಮೆಯ ಇತಿಹಾಸವಿದೆ. 1843 ರಲ್ಲಿ ಮಂಗಳೂರಿನಲ್ಲಿ ರೆವರೆಂಡ್ ಹೆರ್ಮನ್ ಮೊಣಟಿಜಜಜಿಟಿಜಜಗ್ಲಿಂಗ್ ಅವರು ಆರಂಭಿಸಿದ 'ಮಂಗಳೂರು ಸಮಾಚಾರ' ಕನ್ನಡದ ಮೊದಲ ಪತ್ರಿಕೆ. ಇದರ ನೆನಪಿಗಾಗಿಯೇ ನಾವು ಪ್ರತಿವರ್ಷ ಜುಲೈ 1 ರಂದು 'ಪತ್ರಿಕಾ ದಿನಾಚರಣೆ'ಯನ್ನು ಆಚರಿಸಿಕೊಂಡು ಬರುತ್ತಿದ್ದೇವೆ.

ಸರ್ಕಾರ ಮತ್ತು ವ್ಯವಸ್ಥೆಯ ತಪ್ಪುಗಳನ್ನು ಎತ್ತಿ ತೋರಿಸಿ ಸಮಾಜವನ್ನು ಶುದ್ಧೀಕರಿಸುವ ಇಂತಹ ಜವಾಬ್ದಾರಿಯುತ ಕೆಲಸವನ್ನು ಪತ್ರಿಕೆಗಳು ಮಾಡುತ್ತಾ ಬಂದಿವೆ.

**ಪ್ರಸ್ತುತ ಸ್ಥಿತ್ಯಂತರ ಮತ್ತು ಮೌಲ್ಯಚ್ಯುತಿ**

ಆದರೆ, ಇಂದಿನ ತಾಂತ್ರಿಕ ಹಾಗೂ ಆಧುನಿಕ ಯುಗದಲ್ಲಿ ಮಾಧ್ಯಮ ರಂಗವು ತೀವ್ರ ಆತಂಕದ ಹಾದಿಯಲ್ಲಿದೆ. ಇಂದಿನ ದಿನಗಳಲ್ಲಿ ಟಿ.ಆರ್.ಪಿ (TRP)ಮತ್ತು ವಾಣಿಜ್ಯೀಕರಣದ (Commercialization)ಭರದಲ್ಲಿ ಮಾಧ್ಯಮಗಳು ಕಮರ್ಷಿಯಲ್ ಆಗುತ್ತಿವೆ. ಯಾರು ಮೊದಲು ಸುದ್ದಿ ನೀಡುತ್ತಾರೆ ಎಂಬ ಪೈಪೋಟಿಯಲ್ಲಿ ಸುದ್ದಿಯ ಸತ್ಯಾಸತ್ಯತೆಯ ಪರಿಶೀಲನೆಯೇ ಗೌಣವಾಗುತ್ತಿದೆ. ಗಂಭೀರ ಸಾಮಾಜಿಕ ಸಮಸ್ಯೆಗಳಿಗಿಂತ ಸೆನ್ಸೇಷನಲಿಸಂ (Sensationalism) ಹಾಗೂ ವೈಯಕ್ತಿಕ ವಿಚಾರಗಳಿಗೇ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ.

ಮಾಧ್ಯಮಗಳು ನಿಷ್ಪಕ್ಷಪಾತವಾಗಿರಬೇಕು ಎಂಬ ನಿಯಮವನ್ನು ಗಾಳಿಗೆ ತೂರಿ, ಕೆಲವು ರಾಜಕೀಯ ಪಕ್ಷಗಳ ಅಥವಾ ಕಾರ್ಪೊರೇಟ್ ಶಕ್ತಿಗಳ ಪರವಾಗಿ ನಿಲ್ಲುತ್ತಿರುವುದು ಸಾರ್ವಜನಿಕರಲ್ಲಿ ಮಾಧ್ಯಮಗಳ ಮೇಲಿನ ವಿಶ್ವಾಸಾರ್ಹತೆಯನ್ನು ಕುಗ್ಗಿಸುತ್ತಿದೆ. ಸುಳ್ಳು ಸುದ್ದಿಗಳ (Fake News) ಹಾವಳಿ ಹೆಚ್ಚಾಗುತ್ತಿದ್ದು, ಮಾಧ್ಯಮಗಳು ತನ್ನ ನೈಜ ಮೌಲ್ಯವನ್ನು ಕಳೆದುಕೊಳ್ಳುತ್ತಿವೆಯೇ ಎಂಬ ಆತಂಕ ಮೂಡುತ್ತಿರುವುದು ಇಂದಿನ ಕಟು ವಾಸ್ತವ.

**ನಿಷ್ಪಕ್ಷಪಾತ ಮಾಧ್ಯಮ ಸಮಾಜಕ್ಕೆ ಅತ್ಯಗತ್ಯ**

"ಲೇಖನಿಗಿಂತ ಕತ್ತಿ ಹರಿತವಲ್ಲ" ಎಂಬ ಮಾತಿದೆ. ಒಂದು ಲೇಖನಿಯ ಶಕ್ತಿ ಸಮಾಜದಲ್ಲಿ ಕ್ರಾಂತಿಯನ್ನೇ ಉಂಟುಮಾಡಬಲ್ಲದು. ಅಂತಹ ಲೇಖನಿಗಳು ಇಂದಿನ ದಿನಗಳಲ್ಲಿ ಕೆಲವರ ಆಮಿಷಗಳಿಗೆ ಬಲಿಯಾಗುತ್ತಿರುವುದು ದುರದೃಷ್ಟಕರ. ಸಂಸ್ಕೃತದ ಸುಭಾಷಿತವು ಹೇಳುವಂತೆ:

**"ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್**
**ನಬ್ರೂಯಾತ್ ಸತ್ಯಮಪ್ರಿಯಮ್..."**

ಮಾಧ್ಯಮಗಳು ಸತ್ಯವನ್ನೇ ಹೇಳಬೇಕು, ಆದರೆ ಆ ಸತ್ಯವು ಸಮಾಜದ ಒಳಿತಿಗಾಗಿ ಇರಬೇಕೇ ಹೊರತು ಯಾರದೋ ವೈಯಕ್ತಿಕ ಲಾಭಕ್ಕಾಗಿ ಅಥವಾ ಸಮಾಜವನ್ನು ಒಡೆಯುವುದಕ್ಕಾಗಿ ಇರಬಾರದು.

**ಬಸವಣ್ಣನವರು ಹೇಳಿದಂತೆ:**

**"ನುಡಿದರೆ ಮುತ್ತಿನ ಹಾರದಂತಿರಬೇಕು,**
**ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು..."**

ಮಾಧ್ಯಮಗಳ ಭಾಷೆ ಸಮಾಜಕ್ಕೆ ಬೆಳಕು ನೀಡುವಂತಿರಬೇಕು. ಪತ್ರಿಕಾ ದಿನಾಚರಣೆಯ ಈ ಸಂದರ್ಭದಲ್ಲಿ, ಮಾಧ್ಯಮಗಳು ಸಮಾಜ ಮತ್ತು ದೇಶದ ಹಿತದೃಷ್ಟಿಯಿಂದ ಜಾಗೃತವಾಗಿ ಕೆಲಸ ಮಾಡಲಿ, ಸತ್ಯದ ಧ್ವನಿ ಎಂದಿಗೂ ಸಣಕಲಾಗದೆ ಪ್ರಜಾಪ್ರಭುತ್ವದ ಆಸ್ತಿಯಾಗಿ ಉಳಿಯಲಿ ಎಂದು ಆಶಿಸೋಣ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000, Telephone Number:08483200222
PRGI NO. 120927
(RNINO:KARKAN/2011/48371)